ಕಲ್ಯಾಣ ಕಿರಣ

ಮಾರ್ಚ್ 2003

ಬೆಲೆ ರೂ. 5-00





ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಪೂಜ್ಯ ಮಾತಾಜಿಯವರಿಂದ ಕಾರ್ಯಕ್ರಮ ಉದ್ಘಾಟನೆ. ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷ ಕೆ.ಎಸ್. ಈಶ್ವರಪ್ಪ, ಸಹಾಯಕ ಇಂಜಿನೀಯರ್ ಎ.ಸಿ. ಮೂಲೆಮನೆ ಹಾಗೂ ಕೈಗಾರಿಕೋದ್ಯಮಿ ಎಂ. ಹಾಲಪ್ಪನವರು



ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ
ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ
ಪ್ರವಚನ ಸಂದರ್ಭದಲ್ಲಿ ಭಕ್ತವೃಂದದಿಂದ ಪೂಜ್ಯ ಮಾತಾಜಿಯವರಿಗೆ ಪುಷ್ಪವೃಷ್ಟಿ

★ ಕಲ್ಯಾಣ ಕಿರಣ ★

ಸಂಪುಟ 32	ಬಸವ ಶಕೆ 869	ಆಜೀವ ಸದಸ್ಯತ್ವ 500 ರೂ
ಸಂಚಿಕೆ - 3	ಮಾರ್ಚ್ 2003	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ



ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿಯವರ 58ನೆಯ ವರ್ಧಂತಿ ನಿಮಿತ್ತ ಭಕ್ತಿಪೂರ್ವಕ ನಮನ

ದಿ. 13-3-2003ನೆಯ ದಿನಾಂಕಕ್ಕೆ ಪೂಜ್ಯ ಶ್ರೀ ಮಾತಾಜಿಯವರು, 57 ವರ್ಷಗಳನ್ನು ಪೂರೈಸಿ 58ಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ ಕಲ್ಯಾಣ ಕಿರಣದ ಸಿಬ್ಬಂದಿ ವರ್ಗವು ಪೂಜ್ಯರಿಗೆ ನಮನವನ್ನು ಸಲ್ಲಿಸುತ್ತದೆ.

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ:
ದೂರವಾಣಿ: 3325335/ 3322790

ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ಪ್ರಭುದೇವ.ಸಿ.ಕೆ.

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ 32 | ಬಸವ ಶಕೆ 869 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -3 | ಮಾರ್ಚ್ 2003 | ವಾರ್ಷಿಕ ಚಂದಾ 50/- ರೂ

ಮಾತಾಜಿಯಷ್ಟಕ

(ಪೂಜ್ಯ ಮಾತಾಜಿಯವರ ವರ್ಧಂತಿ ನಿಮಿತ್ತ)

1. ಬಸವ ಗಣ ಪೂಜಿತ ಶ್ರೀ ಮಾತಾಜಿ
ಕ್ರಾಂತಿಯೋಗಿಣ ಶ್ರೀ ಮಾತಾಜಿ
ಭ್ರಾಂತಿ ದೂರಕಿ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

2. ದುರ್ಗದ ಚಿತ್ಕಳೆ ಶ್ರೀ ಮಾತಾಜಿ
ಅಕ್ಕನ ಅವತಾರಿ ಶ್ರೀ ಮಾತಾಜಿ
ಮಾತೃ ಹೃದಯಿ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

3. ಪ್ರಥಮ ಸ್ತ್ರೀ ಜಗದ್ಗುರು ಶ್ರೀ ಮಾತಾಜಿ
ಘನಲಿಂಗ ಸ್ಥಾಪಕಿ ಶ್ರೀ ಮಾತಾಜಿ
ಶರಣ ಮೇಳ ರೂವಾರಿ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

4. ಲಿಂಗದೇವನ ಮೆರೆಸಿದ ಶ್ರೀ ಮಾತಾಜಿ
ವೀರಶೈವ ಪದ ತೊಡೆದ ಶ್ರೀ ಮಾತಾಜಿ
ಶಿವತ್ರಯ ಭೇದವರುಹಿದ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

5. ಪ್ರವಚನ ವಾಗ್ಮಿ ಶ್ರೀ ಮಾತಾಜಿ
ಶ್ರೇಷ್ಠ ತತ್ತ್ವಜ್ಞಾನಿ ಶ್ರೀ ಮಾತಾಜಿ
ಶರಣ ಸಾಹಿತ್ಯ ರತ್ನ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

6. ಮಹಿಳಾ ಕುಲೋದ್ಧಾರಿ ಶ್ರೀ ಮಾತಾಜಿ
ಸ್ತ್ರೀ ಕುಲ ಸ್ಫೂರ್ತಿ ಶ್ರೀ ಮಾತಾಜಿ
ಅನಾಥ ರಕ್ಷಕಿ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

7. ಷಟ್ ಸಂಜ್ಞೆ ರೂಪಕಿ ಶ್ರೀ ಮಾತಾಜಿ
ಬಸವ ಧರ್ಮ ಮೆರೆಸಿದ ಶ್ರೀ ಮಾತಾಜಿ
ಭಕ್ತರ ಭಾಗ್ಯಜ್ಯೋತಿ ಶ್ರೀ ಮಾತಾಜಿ
ವಂದಿಪೆ ನಾ ಗುರು ಮಾತಾಜಿ

8. ಬಸವ ತತ್ತ್ವ ಬೆಳಗಿದ ಶ್ರೀ ಮಾತಾಜಿ
ಶರಣರ ಕಣ್ಮಣಿ ಶ್ರೀ ಮಾತಾಜಿ
ಸಚ್ಚಿದಾನಂದನ ಸತಿ ಶ್ರೀ ಮಾತಾಜಿ
ಪೂಜಿಪೆ ನಾ ಗುರು ಮಾತಾಜಿ
ಓಂ ಬಸವಾತ್ಮಜೆಯೆ ನಮಃ

ರಚನೆ : ಸೋದರಿ ಮಹಾದೇವಿ, ಧಾರವಾಡ.

ಬಸವ ಗುರುದೇವ ಕಟ್ಟಿದ ಕಲ್ಯಾಣ ರಾಜ್ಯದ
ಪುನರುತ್ಥಾನ ಮಾಡಲೆಂದು ಲಿಂಗದೇವ ಕಳುಹಿದನಯ್ಯ
ಬಸವ ಕಂದ ಲಿಂಗಾನಂದ ಸದ್ಗುರುವರರನ್ನ
ಅವರು ಬಂದ ಕಾರ್ಯಕ್ಕೆ ಸಹಯೋಗ ನೀಡಲೆಂದು
ಕಳುಹಿದನಯ್ಯಾ ಬಸವಾತ್ಮಜೆ ಮಾತಾಜಿಯವರನ್ನು
ಇವರು ಬಿತ್ತಿದ ಬಸವಧಾನ್ಯವನುಂಡು
ಭವವನ್ನು ಕಳೆಕೊಂಡು ಬಸವಕಂದ ನಾನಾದೆನಯ್ಯಾ
ಬಸವಕಂದಳಪ್ರಿಯ ಸರ್ವೇಶಪ್ರಭುವೆ.


ಬಸವಕಂದ
ಸರೋಜಮ್ಮ ನಾಗರಾಜು, ಮೈಸೂರು

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666



ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಶರಣ ಭೂಮಿ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ಕಾಯಕದ ದಿನದ ಅಂಗವಾಗಿ ಎರಡನೆಯ



ಗಣ ಧ್ವಜ

ಕಲ್ಯಾಣ ಪರ್ವ

2003ರ ಏಪ್ರಿಲ್ 30, ಮೇ 1 ಮತ್ತು 2 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 16ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

''ಕಪಿಲಸಿದ್ಧಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು''

ಎಂದು ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ. 1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ. 1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. ''ಕಾಯಕವೇ ಕೈಲಾಸ'' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ

ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಇಂಥ ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು 2003 ರ ಏಪ್ರಿಲ್ 30, ಮೇ 1 ಮತ್ತು 2 ರಂದು 'ಕಲ್ಯಾಣ ಪರ್ವ'ವನ್ನು ನಡೆಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು.'' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 29ರ ರಾತ್ರಿಯಿಂದ ಮೇ 3ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ
6. ಪ್ರತಿನಿಧಿ ಶುಲ್ಕ : 100 ರೂ.

ಅನ್ನದಾಸೋಹಕ್ಕಾಗಿ ದವಸ-ಧಾನ್ಯಗಳನ್ನು ಮತ್ತು ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜ್ಯೋತಿ ಯಾತ್ರೆಯ ಯೋಜನೆ

ಶರಣ ಬಂಧುಗಳೆ, ಲಿಂಗಾಯತ ಧರ್ಮದ ಇತಿಹಾಸದಲ್ಲಿ ಅತ್ಯಂತ ನೋವಿನ ಪ್ರಸಂಗ ಕಲ್ಯಾಣ ಕ್ರಾಂತಿ. ಜಾತಿವರ್ಣವರ್ಗರಹಿತ ಧರ್ಮ ಸಹಿತ ಶರಣ ಸಮಾಜವನ್ನು ಕಟ್ಟಬಯಸುವ ಪ್ರಯತ್ನಕ್ಕೆ ಪೋಷಕವಾಗಿ, ಹುಟ್ಟಿನಿಂದ ಬ್ರಾಹ್ಮಣರಾಗಿ ಶರಣ ಧರ್ಮ ಸ್ವೀಕರಿಸಿದ ಶರಣ ಮಧುವರಸರ ಮಗಳು ಲಾವಣ್ಯವತಿಯನ್ನು, ಹುಟ್ಟಿನಿಂದ ಸಮಗಾರರಾಗಿ ಶರಣ ಧರ್ಮ ಸ್ವೀಕರಿಸಿದ ಹರಳಯ್ಯನವರ ಮಗ ಶೀಲವಂತನಿಗೆ ವಿವಾಹ ಮಾಡಿಕೊಡಲು ಧರ್ಮಪಿತ ಬಸವಣ್ಣನವರು ಪ್ರೋತ್ಸಾಹ ನೀಡಿದಾಗ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳರಾಜನನ್ನು ಪ್ರಚೋದಿಸಿ ಧರ್ಮಪಿತರನ್ನು ಗಡಿಪಾರು ಮಾಡಿಸಿದರು. ಧರ್ಮಗುರುವಿನ ನಿರ್ಗಮನಾನಂತರ ಹರಳಯ್ಯ-ಮಧುವರಸ-ಶೀಲವಂತರ ಕಣ್ಣು ಕೀಳಿಸಿ

ಆನೆ ಕಾಲಿಗೆ ಕಟ್ಟಿ ಎಳೆಹೂಟೆ ಶಿಕ್ಷೆ ನೀಡಿ ಕೊಲ್ಲಿಸಲಾಯಿತು. ಅಸಂಖ್ಯಾತ ಶರಣರು ರಚಿಸಿದ ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನವಾಗಿದ್ದ ವಚನ ವಾಙ್ಮಯವನ್ನು ನಾಶಮಾಡಲು ಸಂಪ್ರದಾಯವಾದಿಗಳು ಯತ್ನಿಸಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೀರಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ನಾಯಕತ್ವ ವಹಿಸಿ ವಚನ ಸಾಹಿತ್ಯವನ್ನು ಕಲ್ಯಾಣದಿಂದ ಹೊರಗೆ ಸಾಗಿಸಿದ್ದಲ್ಲದೆ ಬೆನ್ನು ಹತ್ತಿ ಬಂದ ಸೈನ್ಯದೊಡನೆ ಕಾದಿ ವಚನ ಸಾಹಿತ್ಯವನ್ನು ಸಹ್ಯಾದ್ರಿಯ ಬೆಟ್ಟಗಳ ಗರ್ಭದಲ್ಲಿದ್ದ ಗುಹೆಗಳಲ್ಲಿ ಇಟ್ಟು ಸಂರಕ್ಷಿಸಿದರು. ಆದಿ ಶರಣರ ಆ ಋಣವನ್ನು ತೀರಿಸಲು ಎಷ್ಟು ಜನ್ಮಗಳ ಕಾಲ ದುಡಿದರೂ ಸಾಲದು. ಕಲ್ಯಾಣದಿಂದ ಹೊರಟು ಧರ್ಮಪಿತರು ಕೂಡಲ ಸಂಗಮಕ್ಕೆ ಹೋದರೆ ಮಾಚಿದೇವರು ಸಹ್ಯಾದ್ರಿಯತ್ತ ಸಾಗಿದರು. ಕಲ್ಯಾಣದಿಂದ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಮತ್ತು ವೀರಮಾತೆ ಅಕ್ಕನಾಗಲಾಂಬಿಕೆ ಸೊನ್ನಲಾಪುರಕ್ಕೆ ತೆರಳಿ ಶೂನ್ಯ ಪೀಠದ ಅಧಿಕಾರವನ್ನು ವಹಿಸಿಕೊಟ್ಟು ಧರ್ಮ ವಿಸ್ತರಣೆಯ ಹೊಣೆಯನ್ನು ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಹಸ್ತಾಂತರಿಸಿ ತಾವೂ ಸಹ್ಯಾದ್ರಿಯತ್ತ ಸಾಗಿದರು. ಜಗನ್ಮಾತಾ ಅಕ್ಕಮಹಾದೇವಿ, ಶೂನ್ಯ ಪೀಠಾಧೀಶ ಅಲ್ಲಮಪ್ರಭುಗಳು ಕದಳಿಗೆ ಹೋದರು. ನಾಗಲಾಂಬಿಕೆಯ ಗದ್ದುಗೆ ತರೀಕೆರೆಯಲ್ಲಿದೆ. ಹರಳಯ್ಯನವರು ಮಾಡಿದ ಪಾದುಕೆಗಳು ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿ ಗ್ರಾಮದಲ್ಲಿವೆ. ಆದ್ದರಿಂದ 2002 ನೆಯ ಇಸವಿಯಲ್ಲಿ ಕೂಡಲಸಂಗಮ, ಉಳಿವೆ, ಬಳ್ಳಿಗಾವಿ, ಕದಳಿ, ಬಿಜನಳ್ಳಿ ಮತ್ತು ಸೊನ್ನಲಾಪುರ (ಸೊಲ್ಲಾಪುರ) ದಿಂದ ಆರು ಜ್ಯೋತಿ ಯಾತ್ರೆಗಳನ್ನು ನಿಯೋಜಿಸಿ ಬಸವ ಜ್ಯೋತಿ, ಚನ್ನಬಸವ ಜ್ಯೋತಿ, ಅಲ್ಲಮಪ್ರಭು ಜ್ಯೋತಿ, ಅಕ್ಕ ಮಹಾದೇವಿ ಜ್ಯೋತಿ, ಹರಳಯ್ಯ ಜ್ಯೋತಿ ಮತ್ತು ಸಿದ್ಧರಾಮ ಜ್ಯೋತಿಗಳನ್ನು ಆ ಸ್ಥಳಗಳಿಂದ ತಂದು ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಸದಾ ಕಾಲವೂ ಉರಿಯುವಂತೆ ಕಲ್ಯಾಣ ಜ್ಯೋತಿಯನ್ನು ಹೊತ್ತಿಸಲಾಯಿತು. ಅದೇ ರೀತಿ ಎರಡನೆಯ ಕಲ್ಯಾಣ ಪರ್ವಕ್ಕೆ ಪೂರ್ವಭಾವಿಯಾಗಿ ಈ ವರ್ಷವೂ ಆರು ಜ್ಯೋತಿಗಳ ಯಾತ್ರೆಯನ್ನು ಅದೇ ಸ್ಥಳಗಳಿಂದ ಹೊರಡಿಸಲಾಗುತ್ತಿದೆ.

ಆದ್ದರಿಂದ ಈ ಪವಿತ್ರವಾದ ಜ್ಯೋತಿ ಯಾತ್ರೆಯಲ್ಲಿ ಭಾಗಿಗಳಾಗಿ ಆದಿ ಶರಣರಿಗೆ ತಮ್ಮ ಕೃತಜ್ಞತೆ ಸಲ್ಲಿಸುವ ಅಪೇಕ್ಷೆಯುಳ್ಳ ಶರಣ ಬಂಧುಗಳು ತಮಗೆ ಬಿಡುವಾಗುವಷ್ಟು ಸಮಯ ಜ್ಯೋತಿ ಯಾತ್ರೆಯಲ್ಲಿ ಪಾಲ್ಗೊಳ್ಳಬಹುದು. ನಮಗೆ ಪತ್ರ ಬರೆದು ಕರಪತ್ರ, ರಸೀತಿ ಪುಸ್ತಕ ತರಿಸಿಕೊಂಡು ದೇಣಿಗೆ ಸಂಗ್ರಹಿಸಿಕೊಡಬಹುದು. ಕರಪತ್ರ, ಭಿತ್ತಿಪತ್ರ (ಪೋಸ್ಟರ್) ತರಿಸಿಕೊಂಡು ತಮ್ಮ ಊರುಗಳಲ್ಲಿ ಪ್ರಚಾರ ಮಾಡಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಿ ಕಲ್ಯಾಣ ಪರ್ವವನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇವೆ.

ವಿಶೇಷ ಸೂಚನೆ : ಕಳೆದ ವರ್ಷ ನಡೆದ ಕಲ್ಯಾಣ ಪರ್ವದಲ್ಲಿ ಭಾಗಿಗಳಾಗಲು ಬಂದ ವಿವಿಧ ರಾಜ್ಯಗಳ ಲಕ್ಷಾಂತರ ಸದ್ಭಕ್ತರು ಪೋಲೀಸರ ದೌರ್ಜನ್ಯದಿಂದ ಬಹಳಷ್ಟು ತೊಂದರೆ ಪಟ್ಟು ನೊಂದು ನಲುಗಿ ವಾಪಸ್ಸು ಹೋಗಿದ್ದಾರೆ. ಆ ರೀತಿ ದೌರ್ಜನ್ಯ ಎಸಗಿದವರು ಬಗೆಬಗೆಯ ಯಾತನೆಗೆ ಒಳಗಾಗಿರುವುದರಿಂದ ಸಾಕಷ್ಟು ಪಶ್ಚಾತ್ತಾಪವನ್ನು ಪಟ್ಟಿರಬಹುದು. ಆದ್ದರಿಂದ ಅವರು ಈಗ ಶರಣ ಬಂಧುಗಳಿಗೆ ತೊಂದರೆ ಕೊಡುವ ಹೇಯ ಕೆಲಸವನ್ನು ಮಾಡಲಾರರು. ಕಳೆದ ಸಲದ ಕಲ್ಯಾಣ ಪರ್ವದ ನಂತರ ಸಾಕಷ್ಟು ಕಾರ್ಯಕ್ರಮಗಳು ಬಸವ ಮಹಾಮನೆಯಲ್ಲಿ ನಡೆದಿವೆ. ವಾರದ ಸಾಮೂಹಿಕ ಪ್ರಾರ್ಥನೆ - ಶರಣ ಸಂಗಮ, ಪ್ರತಿ ತಿಂಗಳಿನ ಹುಣ್ಣಿಮೆಯ ದಿನದಂದು ಶರಣ ಸಮಾಗಮ, ಪೂಜ್ಯ ಶ್ರೀ ಲಿಂಗೈಕ್ಯ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆ, ಅಕ್ಟೋಬರ್ ತಿಂಗಳಲ್ಲಿ ತರಬೇತಿ ಕಮ್ಮಟ, 2 ದಿವಸಗಳ ಕಾಲದ ಭಕ್ತಿ ಪಕ್ಷ ಸಮ್ಮೇಳನ ಹೀಗೆ ಯಶಸ್ವಿಯಾಗಿ, ಶಾಂತವಾಗಿ ನಡೆದಿವೆ. ಆದ್ದರಿಂದ ಕಳೆದ ವರ್ಷದ ಕಹಿ ನೆನಪಿನಿಂದ ಹೊರಬಂದು 2003 ರ ಕಲ್ಯಾಣ ಪರ್ವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಆಗಮಿಸಬೇಕೆಂದು ಕೋರುತ್ತೇವೆ.

ಬಸವ ತತ್ತ್ವ ತರಬೇತಿ ಕಮ್ಮಟ

ಪ್ರತಿ ವರ್ಷ ಬೇಸಿಗೆ ಮತ್ತು ದೀಪಾವಳಿ ರಜೆಯ ಸಮಯದಲ್ಲಿ ಬಸವ ಧರ್ಮ ಪೀಠದ ವತಿಯಿಂದ ಬಸವ ತತ್ತ್ವ ತರಬೇತಿ ಕಮ್ಮಟ ನಡೆಸಲಾಗುವುದು. ಅದರಂತೆ ಈ ಸಲವೂ ಏಪ್ರಿಲ್ 18 ರಿಂದ 12 ದಿವಸಗಳ ಕಾಲ ತರಬೇತಿ ಕಮ್ಮಟ ನಡೆಸಲಾಗುವುದು. ಶುಲ್ಕ ಮತ್ತಿತರ ವಿವರಗಳಿಗೆ ಆಸಕ್ತರು ಪತ್ರ ಬರೆಯಿರಿ. ಕಲ್ಯಾಣ ಪರ್ವದ ಸೇವಾಕಾರ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರು ಆಗಮಿಸಬೇಕೆಂದು ಕೋರುತ್ತೇವೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು ಧರೆಯವಗೆ
ವಶವಾಗದಿಹುದೇ ಸರ್ವಜ್ಞ?

ಬಸವ ಕಲ್ಯಾಣವು ಚಾರಿತ್ರಿಕ ಹಿನ್ನೆಲೆಯ ಮಹತ್ವಪೂರ್ಣ ಸ್ಥಳ. ವಿಶ್ವಗುರು ಬಸವಣ್ಣನವರ ಪವಿತ್ರ ಪಾದಸ್ಪರ್ಶದಿಂದ ಪುನೀತವಾದ ಈ ಧರ್ಮಭೂಮಿ ಅಸಂಖ್ಯಾತ ಶರಣರನ್ನು 12ನೆಯ ಶತಮಾನದಲ್ಲಿ ಆಕರ್ಷಿಸಿತು. ಕಲ್ಯಾಣವು ಪ್ರಣತೆಯಾಯಿತು. ಭಕ್ತಿರಸವು ತೈಲವಾಯಿತು. ಸದಾಚಾರವು ಬತ್ತಿಯಾಯಿತು. ಬಸವಣ್ಣನೆಂಬ ಜ್ಯೋತಿ ಮುಟ್ಟಲು ಅಲ್ಲಿ ದೈವೀಪ್ರಕಾಶವು ತೊಳಗಿ ಬೆಳಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಅಸಂಖ್ಯಾತರು ಕಲ್ಯಾಣಕ್ಕೆ ಧಾವಿಸಿದರು. ಧರ್ಮಪಿತ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ವಚನ ಸಾಹಿತ್ಯವೆಂಬ ಅಮೂಲ್ಯ ವಾಙ್ಮಯವನ್ನು ಜಗತ್ತಿಗೆ ನೀಡಿತು. ''ಮಹಾಮಹಿಮ ಸಂಗನ ಬಸವಣ್ಣನು ಪಾದವಿಟ್ಟುದು ಅವಿಮುಕ್ತ ಕ್ಷೇತ್ರ'' ಎಂದು ಜಗನ್ಮಾತಾ ಅಕ್ಕಮಹಾದೇವಿ ನುಡಿಯುವಂತೆ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಅವಿಮುಕ್ತ ಕ್ಷೇತ್ರವಾಗಿ ಕಂಗೊಳಿಸಿತು. ಧರ್ಮಪಿತ ಬಸವಣ್ಣನವರು ವಿದ್ಯಾಭ್ಯಾಸ ಮಾಡಿ ತಪಸ್ಸುಗೈದು ಹೊಸಧರ್ಮವನ್ನು ನೀಡಿ ಮರ್ತ್ಯಲೋಕದ ಮಣಿಹ ಪೂರೈಸಿ ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಬಯಲಾದುದು ಕೂಡಲಸಂಗಮದಲ್ಲಿ. ಧರ್ಮಗುರು ಬಸವಣ್ಣನವರು ಐಕ್ಯರಾದ ಕೂಡಲ ಸಂಗಮವು ಲಿಂಗಾಯತ ಧರ್ಮಾನುಯಾಯಿಗಳಿಗೆ, ಬಸವ ಭಕ್ತರಿಗೆ ಧರ್ಮಕ್ಷೇತ್ರವಾದರೆ ಬಸವ ಕಲ್ಯಾಣವು ಶರಣ ಭೂಮಿ. ಏಕೆಂದರೆ ಧರ್ಮಪಿತರ ಕಾರ್ಯಕ್ಷೇತ್ರವಾಗಿ 36 ವರ್ಷಗಳ ಕಾಲ ಅಸಂಖ್ಯಾತ ಶರಣರನ್ನು ಪಡೆದ ಪುಣ್ಯ ತಾಣ. ಪೂಜ್ಯ ಗುರು ಬಸವಣ್ಣನವರು ಇಷ್ಟಲಿಂಗಾರ್ಚನೆ ಮಾಡುತ್ತಿದ್ದ ಅರಿವಿನ ಮನೆ, ಚಿನ್ಮಯಜ್ಞಾನಿ ಚನ್ನಬಸವಣ್ಣನವರು ವಚನಗಳನ್ನು ರಚಿಸುತ್ತಿದ್ದ ಚಿನ್ಮಯ ಮಂಟಪ, ಅಲ್ಲಮಪ್ರಭುದೇವರು ನೆಲೆಸಿದ್ದ ಗದ್ದುಗೆ, ಅಕ್ಕನಾಗಲಾಂಬಿಕೆ, ನೀಲಗಂಗಾಂಬಿಕೆ ಮುಂತಾದವರ ಗವಿ, ಮಡಿವಾಳ ಮಾಚಿದೇವರ ಕೊಳ, ನುಲಿಯಚಂದಯ್ಯನವರ ಗವಿ, ರುದ್ರಮುನಿದೇವರ ಗದ್ದುಗೆ, ಹರಳಯ್ಯನವರ ಭಾವಿ (ಉಮಾಪುರ), ಹರಳಯ್ಯ-ಮಧುವರಸರು ಹುತಾತ್ಮರಾದ ಹರಳಯ್ಯನ ದಿಬ್ಬ, ಮೋಳಿಗೆ ಮಾರಯ್ಯನವರ ಗವಿ (ಮೋಳಕೇರಿ), ಬಂದವರ ಓಣಿ, ಧರ್ಮಪಿತರು ಪ್ರಜೆಗಳಿಗೆ ಸಂದರ್ಶನ ನೀಡುತ್ತಿದ್ದ ಪರುಷ ಕಟ್ಟೆ, ಬಸವೇಶ್ವರ ಗುಡಿ, ಇತ್ಯಾದಿ ಈ ಎಲ್ಲ ಚಾರಿತ್ರಿಕ ಕುರುಹುಗಳನ್ನು ಹೊಂದಿರುವ ಬಸವ ಕಲ್ಯಾಣ ಶರಣ ಭೂಮಿ (Holy land) ಲಿಂಗಾಯತ ಸಮಾಜದ ಎರಡು ಕಣ್ಣುಗಳಂತೆ ಕೂಡಲಸಂಗಮ ಮತ್ತು ಬಸವ ಕಲ್ಯಾಣ.

ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಶ್ರೀ ಗುರು ಬಸವಣ್ಣನವರ ದಿವ್ಯ ಪ್ರೇರಣೆಯಂತೆ, 'ಬಸವ ಧರ್ಮ ಪೀಠ' ಎಂಬ ವಿಶ್ವಸ್ಥ ಟ್ರಸ್ಟ್ ಒಂದನ್ನು ಮುಂಬಯಿಯ 1950ನೇ ಟ್ರಸ್ಟ್ ಆ್ಯಕ್ಟ್ ಪ್ರಕಾರ ನೋಂದಾಯಿಸಲಾಗಿದೆ. ನೋಂದಣಿ ಸಂಖ್ಯೆ : ಎ 1758 (BJP) ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಸಂಸ್ಥಾಪಕ

ಗೌರವಾಧ್ಯಕ್ಷರಾಗಿ ಪ್ರಾರಂಭಗೊಂಡ ಈ ಟ್ರಸ್ಟಿನ ಕಾರ್ಯಾಧ್ಯಕ್ಷರಾಗಿ ಈಗ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು, ಕೋಶಾಧ್ಯಕ್ಷರಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಸದಸ್ಯರಾಗಿ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಅಕ್ಕಮಹಾದೇವಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಮಂಗಳಾದೇವಿ, ಪೂಜ್ಯ ಶ್ರೀ ಮಾತೆ ಬಸವರತ್ನಾದೇವಿ, ಪೂಜ್ಯ ಶ್ರೀ ಮಾತೆ ದಾನೇಶ್ವರಿದೇವಿ, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ, ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿ ಮುಂತಾದ ತ್ಯಾಗಜೀವಿಗಳು ಹಗಲಿರುಳು ದುಡಿಯುತ್ತಿದ್ದಾರೆ.

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ. 21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿಮೂರುವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ.

ಬಸವ ಧರ್ಮ ಪೀಠ ಟ್ರಸ್ಟಿನ
ಬಸವ ಕಲ್ಯಾಣ ಶಾಖೆಯ ವತಿಯಿಂದ ಹಲವಾರು ಯೋಜನೆಗಳು

ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ.
2. ನಿತ್ಯ ಪೂಜಾ ನಿಧಿ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಕಳಿಸುವುದು. 600 ರೂ.
3. ದಾಸೋಹ ನಿಧಿ : ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು 1200 ರೂ.
4. ಬಸವಾಲಯ ನಿರ್ಮಾಣ : ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು.
5. ಬಸವ ಮಂಟಪ ನಿರ್ಮಾಣ : ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ ''ಬಸವ ಮಂಟಪ'' ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ

ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.
ಶರಣ ಧಾಮ : ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು.

6. ಶರಣ ಧಾಮ : ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಡಬ್ಬಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಸಿಂಗಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ.ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು
7. 63 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ.
8. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ. ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಜನರ ನೆರವು ಸಿಕ್ಕಿದಂತೆ ಒಂದೊಂದಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್ ಕಟ್ಟಲು, ಕಾರ್ಯಾಲಯ ಕಟ್ಟಡ ನಿರ್ಮಾಣ ಮಾಡಲು, ಬಸವಾಲಯ ಕಟ್ಟಲು ಆರಂಭಿಸಲಾಗಿದೆ.

ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನ ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

1. ಬಸವ ಧರ್ಮ ಪೀಠ, ಬಸವ ಮಹಾಮನೆ, ಮುಖ್ಯರಸ್ತೆ, ಬಸವ ಕಲ್ಯಾಣ-585 327. ತಾ- ಬಸವ ಕಲ್ಯಾಣ, ಜಿ-ಬೀದರ, ದೂರವಾಣಿ : 0848-651921/652856
2. ಬಸವ ಧರ್ಮ ಪೀಠ, ಕೇಂದ್ರ ಸಂಸ್ಥೆ, ಮಹಾಮನೆ ಮಹಾಮಠ, ಶರಣ ಲೋಕ, ಕೂಡಲಸಂಗಮ 587115, ತಾ-ಹುನಗುಂದ, ಜಿಲ್ಲೆ-ಬಾಗಲಕೋಟ. ದೂರವಾಣಿ : 0835-768038/768338
3. ಬಸವ ಧರ್ಮ ಪೀಠ, ಶಾಖೆಯ ಕಾರ್ಯಾಲಯ, ಬಸವ ಮಂಟಪ, 2035, 20ನೆಯ ಮೇನ್, 2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010. ದೂ : 080-3325335/3322790.

ಕೂಡಲಸಂಗಮದ ಮಹಾಮನೆ ಮಹಾಮಠ ನಿರ್ಮಾಣಕ್ಕಾಗಿ ಮತ್ತು ಬಸವ ಕಲ್ಯಾಣದ ಬಸವ ಮಹಾಮನೆಯ ನಿರ್ಮಾಣಕ್ಕಾಗಿ ಪ್ರತ್ಯೇಕ ರಸೀತಿ ಪುಸ್ತಕಗಳಿವೆ. ಕಾಣಿಕೆ ಕೊಡುವ ಉದ್ದೇಶವನ್ನು ಅನುಸರಿಸಿ ರಸೀತಿಯನ್ನು ಪಡೆದುಕೊಳ್ಳಿರಿ. ಇನ್‌ಕಮ್ ಟ್ಯಾಕ್ಸ್ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ. ಆಸಕ್ತರು ವಿವರಗಳನ್ನು ಕೇಳಿ ಪಡೆಯಬಹುದು. ಈಗಾಗಲೇ ಕಟ್ಟಡ ನಿರ್ಮಾಣ ಕೆಲಸವು ಪ್ರಾರಂಭವಾಗಿರುವುದರಿಂದ ಸಹೃದಯವಂತ ಧರ್ಮಾನುಯಾಯಿಗಳು ತನು, ಮನ, ಧನಗಳಿಂದ ಉದಾರವಾದ ಧನಸಹಾಯ ಮಾಡಲು ಮುಂದೆ ಬರುವಿರಾಗಿ ನಂಬುತ್ತೇವೆ.

ಬಸವ ಮಹಾಮನೆ, ಮುಖ್ಯ ರಸ್ತೆ
ಬಸವ ಕಲ್ಯಾಣ-585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

ಮುಂಬರುವ ದಿನಗಳಲ್ಲಿ ಒದಗುವ ಹಬ್ಬ-ಹುಣ್ಣಿಮೆ-ಉತ್ಸವಗಳು

ಕಲ್ಯಾಣ ಕ್ರಾಂತಿಯ 858ನೆಯ ಸಂಸ್ಮರಣೋತ್ಸವ

ಫಾಲ್ಗುಣ ಮಾಸದ ಶುದ್ಧ ಏಕಾದಶಿ	14-3-2003	ವಿವಾಹ
ದ್ವಾದಶಿ	15-3-2003	ಧರ್ಮಪಿತರ ಗಡಿಪಾರು
ತ್ರಯೋದಶಿ	16-3-2003	ಶರಣರ ಬಂಧನ, ವಿಚಾರಣೆ
ಚತುರ್ದಶಿ	17-3-2003	ಎಳೆಹೊಟೆ
ಹುಣ್ಣಿಮೆ	18-3-2003	ಬಿಜ್ಜಳನ ವಧೆ
ಫಾಲ್ಗುಣ ಮಾಸದ ಬಹುಳ ಪಾಡ್ಯ	19-3-2003	ಶರಣ ಸಂಸ್ಮರಣೆ

1. ದಿ. 13-3-2003 ಪೂಜ್ಯ ಮಾತಾಜಿಯವರ 57ನೆಯ ವರ್ಧಂತಿ
2. ದಿ. 14-3-2003 ರಿಂದ 19-3-2003ರ ವರೆಗೆ ಕಲ್ಯಾಣ ಕ್ರಾಂತಿಯ 858ನೆಯ ಸಂಸ್ಮರಣೋತ್ಸವ
3. ದಿ. 2-4-2003 ಅಲ್ಲಮ ಪ್ರಭು ಜಯಂತಿ
4. ದಿ. 16-4-2003 ಅಕ್ಕಮಹಾದೇವಿ ಜಯಂತಿ
5. ದಿ. 30-4-2003, 1-5-03 ಮತ್ತು 2-5-03 ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ,
6. ದಿ. 1-5-2003 ಮಡಿವಾಳ ಮಾಚಿದೇವ ಜಯಂತಿ
7. ದಿ. 4-5-2003 ಬಸವ ಜಯಂತಿ.

ಶರಣ ವ್ರತ ಸ್ವೀಕಾರ

ಶರಣ ವ್ರತ ಸ್ವೀಕಾರದಿಂದ ಒಂದು ಶಿಸ್ತು ಬರುವುದೆಂಬ ಉದ್ದೇಶದಿಂದ ಅನೇಕ ಶರಣ ಬಂಧುಗಳ ಕೋರಿಕೆಯ ಮೇರೆಗೆ ಕಲ್ಯಾಣ ಪರ್ವಕ್ಕೆ ಮುನ್ನ ಶರಣ ವ್ರತಾಚರಣೆಗೆ ಅನುಮತಿ ನೀಡಲಾಗುತ್ತಿದೆ.

1. ಗುರು ಸಾರಾಯ ಸಂಪದ್ವ್ರತ : 40 ದಿವಸ : ಪ್ರಾರಂಭ 22-3-2003
2. ಲಿಂಗ ಸಾರಾಯ ಸಂಪದ್ವ್ರತ : 30 ದಿವಸ : ಪ್ರಾರಂಭ 1-4-2003
3. ಜಂಗಮ ಸಾರಾಯ ಸಂಪದ್ವ್ರತ : 20 ದಿವಸ : ಪ್ರಾರಂಭ 11-4-2003
4. ಪ್ರಸಾದ ಸಾರಾಯ ಸಂಪದ್ವ್ರತ : 10 ದಿವಸ : ಪ್ರಾರಂಭ 21-4-2003

ದಿ. 1-5-2003 ರಂದು ಬಸವ ಕಲ್ಯಾಣದಲ್ಲಿ ಸಮುದಾಯ ಪ್ರಾರ್ಥನೆ ಮಾಡಿ ಮತ್ತು ಶರಣರಿಗೆ ಶರಣಾರ್ಥಿ ಸಲ್ಲಿಸಿದ ನಂತರ ಶರಣ ವ್ರತವು ಮುಕ್ತಾಯಗೊಳ್ಳುವುದು. ಶರಣ ಬಂಧುಗಳು ಶರಣ ಮೇಳ ಮತ್ತು ಕಲ್ಯಾಣ ಪರ್ವ ಎರಡೂ ಸಮಯದಲ್ಲಿ ವ್ರತ ಸ್ವೀಕರಿಸಬಹುದು ಅಥವಾ ಎರಡರಲ್ಲಿ ಒಂದು ಬಾರಿ ಅನುಕೂಲವಾದಂತೆ ವ್ರತ ಸ್ವೀಕರಿಸಬಹುದು.

ಸಂಪಾದಕೀಯ

ಜನಪದರ ಹಿರಿಮೆ

ಜನವರಿ ಒಂದನೆ ದಿನಾಂಕ ಬೀದರಿಗೆ ಹೋಗುವುದಿತ್ತು. ಒಂದು ದಿನಕ್ಕಾಗಿ ಕಾರಿನಲ್ಲಿ ಪ್ರಯಾಣವೇಕೆ ಎಂದು ಗುಲಬರ್ಗಾವರೆಗೆ ಟ್ರೇನಿನಲ್ಲಿ ಹೊರಟೆ. ಎದುರುಗಡೆ ಕುಳಿತವರ ಜೊತೆ ಪರಿಚಯ, ಮಾತು ಶುರುವಾಯಿತು. ತಮ್ಮ ಅಡ್ಡ ಹೆಸರು ಗದ್ದಗಿಮಠ ಎಂದರು. ತಕ್ಷಣ ನೆನಪು ಗರಿಗೆದರಿತು. ಮಹಾನ್ ಕೊಡುಗೆ ಕೊಟ್ಟ ಓರ್ವ ವ್ಯಕ್ತಿಯ ನೆನಪಾಗಿ, ನೋಡಿ, ಡಾ|| ಬಿ.ಎಸ್. ಗದ್ದಗಿಮಠ ಎನ್ನುವವರು ನೀಡಿದ ಸಂಶೋಧನಾತ್ಮಕ ಸಾಹಿತ್ಯದ ಕೊಡುಗೆ ಅದ್ಭುತ. ಅವರನ್ನು ಎಷ್ಟು ಕೊಂಡಾಡಿದರೂ ಸಾಲದು. ಲಿಂಗಾಯತ ಧರ್ಮದ ಪುನರುತ್ಥಾನಕ್ಕೆ ಅವರು ಕೊಟ್ಟ ಸಾಕ್ಷಾಧಾರ ಅಪೂರ್ವ ಎಂದೆ. ಅವರು ಅಚ್ಚರಿಗೊಂಡು, ಅಹುದೆ ? ನಮಗೆ ಆ ಬಗ್ಗೆ ಹೆಚ್ಚು ಅಧ್ಯಯನವಿಲ್ಲ. ನಾನು ಅವರ ಮಗ ಗುಲಬರ್ಗಾ ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕ ಎಂದರು. ನನಗೆ ಆಶ್ಚರ್ಯ-ಆನಂದ ಉಂಟಾದವು. ಅವರ ತಂದೆಯವರ ಕೊಡುಗೆಯ ಹಿರಿಮೆ ಏನೆಂದು ವಿವರಿಸಿದೆ.

ನಾವು ಈ ಬಗ್ಗೆ ಹೆಚ್ಚು ಅಧ್ಯಯನ ಮಾಡಲಿಲ್ಲ, ಮುಂದೆ ಮಾಡುತ್ತೇನೆ ಎಂದರು. ನಿಮ್ಮ ತಂದೆಯವರು ಎಲ್ಲಿದ್ದಾರೆ ? ಎಂದಾಗ ಅವರು ಬಹಳ ಚಿಕ್ಕವಯಸ್ಸಿನಲ್ಲೇ ಲಿಂಗೈಕ್ಯರಾದರು ಎಂದರು. ನನ್ನ ಜೀವ ಬಹಳ ಮರುಗಿತು. ಆ ವ್ಯಕ್ತಿ ಇನ್ನಷ್ಟು ಕಾಲ ಇದ್ದಿದ್ದರೆ ಇನ್ನೂ ಎಂತೆಂಥ ಕೃತಿಗಳು ಹೊರಬರುತ್ತಿದ್ದವೋ ಎಂದು ಉದ್ಗರಿಸಿದೆ. ನಮ್ಮ ತಂದೆಯ ವ್ಯಕ್ತಿತ್ವ-ಕೊಡುಗೆಯ ಬೆಲೆ ನಮಗೆ ಅರ್ಥವಾಗುವ ವಯಸ್ಸು ಆಗಿರಲಿಲ್ಲ. ಜನಪದ ಗೀತೆಗಳನ್ನು ಸಂಗ್ರಹಿಸಲು ಅವರು ಹೋಗುವಾಗ ಒಮ್ಮೆ ಮಾತ್ರ ಅವರೊಟ್ಟಿಗೆ ಹೋಗಿದ್ದೆ. ಹಳ್ಳಿಯ ಹೆಣ್ಣು ಮಕ್ಕಳು ಹಾಡುತ್ತಿರುತ್ತಿದ್ದರು. ಆದರೆ ಗಂಡಸರು ಬಂದಾಗ ನಿಲ್ಲಿಸಿ ಬಿಡುತ್ತಿದ್ದರು. ಟೇಪ್ ರೆಕಾರ್ಡರ್ ಬಳಕೆಯೂ ಅಷ್ಟಿರಲಿಲ್ಲ. ನಸುಕಿನ ವೇಳೆಯಲ್ಲಿ ತಾಯಂದಿರು ಭಸ್ಮಧರಿಸಿ ಬೀಸೋಕಲ್ಲಿನ ಮುಂದೆ ಕುಳಿತು ಹಾಡುತ್ತಿದ್ದರು. ಅಂಥ ಗುಡಿಸಿಲು ಮನೆ ಹೊರಗೆ ನಿಂತು ಕೇಳಿಸಿಕೊಳ್ಳುತ್ತ ಬರೆದುಕೊಳ್ಳುತ್ತಿದ್ದುದು ನನ್ನ ನೆನಪಿನಲ್ಲಿ ಅಸ್ಪಷ್ಟವಾಗಿ ಉಳಿದಿದೆ. ಎಂದರು. ಕನ್ನಡ ಜಾನಪದ ಗೀತೆಗಳು ಡಾ|| ಬಿ.ಎಸ್. ಗದ್ದಗಿಮಠ ಇವರ ಪಿಹೆಚ್‌ಡಿ ಪ್ರಬಂಧ. ಪ್ರಥಮ ಮುದ್ರಣ 1963, ಕರ್ನಾಟಕ ವಿಶ್ವವಿದ್ಯಾಲಯವು ಯು.ಜಿ.ಸಿ ನೆರವಿನಿಂದ ಪ್ರಕಟಿಸಿದೆ.

ಈ ಪುಸ್ತಕದಲ್ಲಿ ನಮಗೆ ಮಹಾನ್ ಶಾಸನಗಳಾಗಿ ತೋರಿ ಬರುವವು ಹಂತಿಯ ಹಾಡುಗಳು 1. ಕಲ್ಯಾಣ ಬಸವಯ್ಯ ಪುಟ 231, 2. ಹರಳಯ್ಯ 3. ಮಡಿವಾಳ ಮಾಚಯ್ಯ 4. ಕಿನ್ನರಿ ಬೊಮ್ಮಯ್ಯ 5. ಮೇದಾರ ಕೇತಯ್ಯ 6. ಇಳಿಹಾಳ ಬೊಮ್ಮಯ್ಯ 7. ಹೂಗಾರ ಮಾದಯ್ಯ 8. ಜಾತಿಗರ ಚಾಡಯ್ಯ 9. ನೇಗಿಯ ಅಮುಗಯ್ಯ 10. ಕುಂಬಾರ ಗುಂಡಯ್ಯ 11. ಮಾದರ ಚೆನ್ನಯ್ಯ. ಈ ಹಂತಿಯ ಹಾಡುಗಳ ಪ್ರಾಮಾಣಿಕತೆ, ಸತ್ಯ ಸಂಧತೆ, ಭಕ್ತಿ, ಕೆಚ್ಚಿನ ಮುಂದೆ ಬಸವ ಪುರಾಣದಂತಹ ಮಹಾಕಾವ್ಯಗಳು ನನಗೆ ಅತ್ಯಂತ ಸಪ್ಪೆ ಎನಿಸುತ್ತದೆ ಮತ್ತು ಇವನ್ನು ಹಳ್ಳಿಯ ಗುಗ್ಗುಗಳು ಬರೆದ ಕೃತಿಗಳೆಂದು ಉದಾಸೀನ ಮಾಡುವವ ನಿಜಕ್ಕೂ ಮೂರ್ಖ. ಎಂಥಾ ತತ್ತ್ವಜ್ಞಾನ, ಬಿಗಿ ಛಂದಸ್ಸು ಶಬ್ದಗಳ ಜೋಡಣೆ !

ಬ್ರಾಹ್ಮಣ ಮೂಲದಿಂದ ಬಂದ ಪಾಲ್ಕುರಿಕೆ ಸೋಮನಾಥ, ಭೀಮಕವಿ, ಹರಿಹರ ಮುಂತಾದವರು ಮುಜುಗರದಿಂದ ಮುಚ್ಚಿಟ್ಟ ವರ್ಣಾಂತರ ವಿವಾಹ ಮತ್ತು ಕಲ್ಯಾಣದ ಕ್ರಾಂತಿಯ ಕಥೆಯನ್ನು ಈ ಮಣ್ಣಿನ ಮಕ್ಕಳು ಎಳೆ ಎಳೆಯಾಗಿ ಬಿಡಿಸಿ ಹೇಳಿ ನಮ್ಮ ಅಂತರಂಗವನ್ನು ತಟ್ಟುತ್ತಾರೆ. ಈಗಾಗಲೇ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ಪುಸ್ತಕ ರೂಪದಲ್ಲಿ ನಾವು ಪ್ರಕಟಿಸಿದ್ದೇನೆ. ಈಗ

ಕೆಸೆಟ್ಟು ಮಾಡಿದ್ದು, ಅದ್ಭುತವಾಗಿ ಬಂದಿದ್ದು ಎಷ್ಟು ಸಲ ಕೇಳಿದರೂ ಬೇಸರವೆನ್ನಿಸದಂತಾಗಿದೆ. ಹಂತಿಯ ಹಾಡಿನಲ್ಲಿ ಸಾಹಿತ್ಯ ಥಕಥಕನೆ ಕುಣಿಯುತ್ತದೆ. ಅವರು ಆತ್ಮ ವಿಶ್ವಾಸದಿಂದ ಹೇಳುತ್ತಾರೆ :

★ ಹಂತಿಯದು ಹಾಡೆಂದು ಪಂಥ ಕಟ್ಟಲು ಬೇಡ
ಕಂತಿ ಕರಗುವುದು ನಿಂತಲ್ಲೆ। ಬಸವಯ್ಯ
ಕುಂತು ಎದೆಯೊಳಗೆ ಹಾಡಿಸಿದ ||

ಪಂಥ ಕಟ್ಟಿದರೆ ನಿರಂತರವಾಗಿ ಹಾಡುವಷ್ಟು ಸಾಮಗ್ರಿಯನ್ನು ಮಣ್ಣಿನ ಮಕ್ಕಳು ಹೊಂದಿದ್ದಾರೆ.

ಹಂತಿ ಪದಗಳು ನೀಡುವ ಸತ್ಯ ಸಂಗತಿಗಳು

1. ಬಸವಣ್ಣನವರ ಹೆಸರು ಮಂತ್ರವಾಯಿತು

★ ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು। ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ

★ ಅರಿಯುದಕೆ ಕುರುಹೆಂದು ಕರಲಿಂಗ ನೀಕೊಟ್ಟೆ
ಶರಣೆಂಬು ನುಡಿಯ ಚಲಮಾಡಿ। ಶಿವಮತಕೆ
ಗುರುಬಸವಲಿಂಗ ನಿಜ ಮಂತ್ರೊ

★ ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರು ಬೀಜ। ಶಿವ ಮತಕೆ
ಬಸವ ಓಂಕಾರ ಶಿವನಾಮೊ

2. ಬಸವಣ್ಣನವರು ಕೊಟ್ಟುದು ಹೊಸಮತ

★ ಬಸವಣ್ಣ ನಿನ್ಹೆಸರು ದೆಶೆ ದೆಶೆಗೆ ಶಿವಮಂತ್ರ
ಹೊಸ ಮತಕೆ ಮಂತ್ರ ನಿತ್ಯದಲಿ। ಒಕ್ಕಲಿಗ
ಹೊಸ ಮಂತ್ರ ಬಸವ ಜಪಿಸುವನು

★ ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವಭಕ್ತಿ। ಸಾರುದಕೆ
ರಾಯ ಜೀವನದ ಹೊಸ ನುಡಿಗೆ

★ ಬಸವ ಬೋಧೆಯು ಬೆಳೆದು ವಸುಧೆಯೊಳು ಹಬ್ಬುತಲಿ
ಹಸುಗೂಸು ಕೇಳಿ ಕಿವಿಗೊಟ್ಟು। ಚಣದೊಳಗೆ
ಹೊಸ ಮತವು ಉದಿಸಿ ಭೂಜನಕೆ

★ ಅನುಭಾವ ಮಂಟಪಕೆ ಅನುಭಾವಿ ಬಸವಣ್ಣ
ಅನುನಯದಿ ಮೂಲ ಚಾಲಕನು। ಶಿವ ಮತಕೆ
ತನುಮನವ ಧನವನೆರದಿದ್ದ

★ ವಚನಮಂಟಪದೊಳಗೆ ವಚನಗಳ ಮಳೆ ಸುರಿದು
ಸುಚಿಹೊಂದಿ ಜಗವು ಅನುಭಾವ। ಬಿತ್ತಿದರು
ಉಚಿತ ಹೊಸಮತವು ಬೆಳೆಬಂತು

★ ಉದಿತ ಜೀವನ ರಾಟೆ ಕದರ ಕಾಯಕಮಾಡಿ
ನೆದರೆಂಬ ನೂಲ ಬಲುನೇತ। ಬಸವಣ್ಣ
ಸದರೆಂದು ನೇದ ಹೊಸಮತವ

★ ಬಸವ ಸಾರಿದನಂದು ಕುಶಲದಲಿ ವಚನಗಳ
ಮಸುಕಿರುಳು ಹರಿದು ನಸಕಾತು। ಜಗದೊಳಗೆ
ಹೊಸಮತದ ಸೂರ್ಯನುದಿಸಿದನು

★ ತುಂಬಿ ತುಳುಕಿತು ಬೆಳಕು ಇಂಬು ನೀಯಿತು ಜಗಕೆ
ಕಂಬ ಬಸವೆಂದು ಹೊಸಮತಕೆ। ಕಲ್ಯಾಣ
ಮುಂಬದಿಯ ಭೇರಿ ಮೊಳಗಿದವು

★ ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚೆನ್ನಬಸವ ಶರಣರಿಗೆ। ಕಂಟಕದ
ಹುರಿಯಾಳು ಕಾಯೊ ಹೊಸ ಮತವ

★ ಕಲ್ಯಾಣ ಹಾಡುತಲಿ ಎಲ್ಲ ಶರಣರ ವಚನ
ಸೊಲ್ಲಡಗಿ ನಾಲ್ಕು ವೇದಗಳು। ಹೊಸಮತಕೆ
ಹುಲ್ಲಾಗಿ ಬಿದ್ದು ಕೈಮುಗಿದು

3. ಇಷ್ಟಲಿಂಗ ಕೊಟ್ಟವರು ಬಸವಣ್ಣನವರು

★ ಅರಿಯುದಕೆ ಕುರುಹೆಂದು ಕರಲಿಂಗ ನೀಕೊಟ್ಟ
ಶರಣೆಂಬು ನುಡಿಯ ಚಲಮಾಡಿ। ಶಿವಮತಕೆ
ಗುರುಬಸವಲಿಂಗ ನಿಜ ಮಂತ್ರೊ

4. ಬಸವಣ್ಣನವರಿಗೆ ದೇವರೇ ಗುರು

★ ಹುಸಿ ವೇದ ಹಾರವರು ಹಸಗೆಟ್ಟ ಲೋಕದಲಿ
ಗುಸುಮುಸಿಯು ನಡೆಯೆ ಬಸವನಿಗೆ। ವರಸಂಗ
ಹೊಸತು ಊದಿದನು ಕಿವಿ ಮಾತ

5. ಕಾಯಕ ಮತ್ತು ದಾಸೋಹ ತತ್ವಗಳ ಮೂಲಪುರುಷ ಬಸವಣ್ಣನವರು

★ ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವಭಕ್ತಿ। ಸಾರುದಕೆ
ರಾಯ ಜೀವನದ ಹೊಸ ನುಡಿಗೆ

★ ದಾಸೋಹಿ ಬಸವಣ್ಣ ದಾಸೋಹ ಕಲಿಸಿದನು
ದೇಶ ದೇಶೆಲ್ಲ ಕೇಳುತಲಿ। ಹೊಸಮಾತ
ಮಾಸಿದವು ವೇದ ಹುಸಿಯೆಂದು

★ ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರು ಬೀಜ। ಶಿವ ಮತಕೆ
ಬಸವ ಓಂಕಾರ ಶಿವನಾಮೊ

6. ವೇದಗಳು ಮಾಡಿದ್ದ ಕುತಂತ್ರವನ್ನು ಬಸವಣ್ಣನವರು ಬಯಲಿಗೆಳೆದರು

★ ವೇದ ವೇದದವಾದ ಭೇದ ಹುಟ್ಟಿಸಿ ಜಗಕೆ
ದಾದು ಯಾರಿಲ್ಲ ಹೇಳುವುದಕ್ಕೆ। ಬಸವಣ್ಣ
ಭೇದ ಅಳುಕಿಸಿದ ಕುಲ ಕುಲಕೆ

★ ಓದಿದನು ಬಸವಯ್ಯ ವೇದದೊಳಗಿನ ಹುಸಿಯ
ಭೇದ ಭೇದವನೆ ಬಿಚ್ಚಿಟ್ಟ। ಜನಪದಕೆ
ತೇದುಂಡ ಜೀವಿ ಬಸವಣ್ಣ

★ ವಾದ ವಾದವೆ ನಡೆದು, ವೇದ ವೇದವೆ ಸೋತು
ಭೇದ ಬೇಡೆಂದು ಬಸವಣ್ಣ। ಸಾರುದಕೆ
ಹೋದ ಹೋದಲ್ಲಿ ಹೊಸ ಮಾತು

7. ಅಸ್ಪೃಶ್ಯತೆಯ ನಿವಾರಕರು ಬಸವಣ್ಣನವರು

★ ವೇದ ವೇದದವಾದ ಭೇದ ಹುಟ್ಟಿಸಿ ಜಗಕೆ
ದಾದು ಯಾರಿಲ್ಲ ಹೇಳುವುದಕ್ಕೆ। ಬಸವಣ್ಣ
ಭೇದ ಅಳುಕಿಸಿದ ಕುಲ ಕುಲಕೆ

★ ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ। ನಿನ್ನುಸುರು
ನೆಲೆಯಾತು ನಿತ್ಯ ಜನಪದಕೆ

★ ಹಾರುವರ ಕುಲಹೊಲೆಯ ಬೇರನ್ನೆ ಕಿತ್ತೊಗೆದ
ಸಾರಿದನು ಬಸವ ಬೆಂಗುಡಿಗ। ಶರಣರಿಗೆ
ಧೀರ ಕಾಯಕವೆ ಕುಲವಾತು

★ ಹೊಲಸು ತಿಂಬವ ಹೊಲೆಯ ಹೊಲಬಿಲ್ಲದವ ಹೊಲೆಯ
ನೆಲೆಸಲ್ಲುಸಿನುಡಿಯ ಎದೆಯೊಳಗೆ। ಹೊಲೆಯರಸ
ಹೊಲೆಯರೆನ್ನುವರೆ ಶರಣರಿಗೆ

8. ಎಲ್ಲರಿಗೂ ವಿದ್ಯೆಯನ್ನು ತಲ್ಪಿಸಿದವರು ಬಸವಣ್ಣನವರು

★ ಸಾಧು ಸಾಧಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು। ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು

9. ಜನಸಾಮಾನ್ಯರ ಹಿತಕ್ಕಾಗಿ ಬಸವಣ್ಣ ಬದುಕಿದರು, ಸವೆದರು

★ ಓದಿದನು ಬಸವಯ್ಯ ವೇದದೊಳಗಿನ ಹುಸಿಯ
ಭೇದ ಭೇದವನೆ ಬಿಚ್ಚಿಟ್ಟ। ಜನಪದಕೆ
ತೇದುಂಡ ಜೀವಿ ಬಸವಣ್ಣ

10.ಮಹಾಮನೆ / ಅನುಭವ ಮಂಟಪ ಕಟ್ಟಿದರು

★ ಕಲ್ಯಾಣ ಮನೆಯಾಯ್ತು ಎಲ್ಲ ಶಿವಶರಣರಿಗೆ
ನಲ್ಲೆ ಮಾದೇವಿ ಲಿಂಗಣ್ಣ। ಮಗನೊಡನೆ
ಉಲ್ಲಾಸದಿದ್ದ ಮಾದಯ್ಯ

★ ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ಹಾಗಿನಲಿ ಕಟ್ಟ ಅನುಭಾವ। ಮಂಟಪವ
ಕೂಗು ಕೇಳುತಲಿ ಜನವೆದ್ದು

★ ಸೋಸಿ ವಚನದ ತಿರುಳ ಬೀಸಿದವು ಶಿವಗಾಳಿ
ಮೂಸಿಬಂದಂತೆ ಗುಂಗಿಗಳು। ಹೂಗಳಿಗೆ
ರಾಸಿ ಜನ ಬಂತು ಮಂಟಪಕೆ

11.ವಚನ ಸಾಹಿತ್ಯ ಅಮೂಲ್ಯ ಸಾಹಿತ್ಯ

★ ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ
ಸೂಡ ಕಟ್ಟಿದರು ಶಿವ ನುಡಿಯ। ಕಾಯಕದ
ಗೂಡಾತು ಲೋಕ ಜನ ಹಿಗ್ಗಿ

★ ಸುರರು ಕಡೆದಂತೆಲ್ಲ ವರಮಣಿಗಳುದಿಸಿದುವು
ಚಿರಕಾಲ ಉಳಿದು ಭೂಮಿಯೊಳು। ವಚನಗಳು
ಶರಣಗಣ ಕಡೆದ ಮಣಿಯೇನೊ

★ ವಚನಮಂಟಪದೊಳಗೆ ವಚನಗಳ ಮಳೆ ಸುರಿದು
ಸುಚಿಹೊಂದಿ ಜಗವು ಅನುಭಾವ। ಬಿತ್ತಿದರು
ಉಚಿತ ಹೊಸಮತವು ಬೆಳೆಬಂತು

★ ಬಸವ ಸಾರಿದನಂದು ಕುಶಲದಲಿ ವಚನಗಳ
ಮಸುಕಿರುಳು ಹರಿದು ನಸಕಾತು। ಜಗದೊಳಗೆ
ಹೊಸಮತದ ಸೂರ್ಯನುದಿಸಿದನು

★ ಕಲ್ಯಾಣ ಹಾಡುತಲಿ ಎಲ್ಲ ಶರಣರ ವಚನ
ಸೊಲ್ಲಡಗಿ ನಾಲ್ಕು ವೇದಗಳು। ಹೊಸಮತಕೆ
ಹುಲ್ಲಾಗಿ ಬಿದ್ದು ಕೈಮುಗಿದು

★ ಮಿದ್ದಿದನು ಶಿವಗೋಷ್ಠಿ ಬಿದ್ದು ವೇದಗಳಂದು
ಹುದ್ದೆ ಹೊಂದಿದವು ಜಗದೊಳಗೆ। ವಚನಗಳ
ಸುದ್ದಿ ನಾಡ್ತುಂಬಿ ಜನಹಿಗ್ಗಿ

★ ವಚನ ಮಂಟಪ ಬಳ್ಳಿ ಸುಚಿ ಮೊಗ್ಗೆ ಹೂಬಿಡಲು
ರುಚಿಜೇನ ಹುಟ್ಟ ಹೊಸಮತವ। ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ

★ ಮಂಟಪದ ಹೆಜ್ಜೇನ ಗಂಟೇರು ಕೆಡಸಿದರೆ

ಕುಂಟಿತವೆ ಜೇನ ನೊಣಗಳಿಗೆ। ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ

★ ಶಿವಶರಣ ತುಂಬಿಗಳು ಭವದೊಳಗೆ ಹಾರ್‍ಡಾರಿ
ಶಿವಮತದ ಹುಟ್ಟ ಕಟ್ಟಿದವು। ವಚನಗಳು
ಸವೆಯದುಳಿದಿರುವ ಹೊಸಜೇನು

12.ಕಲ್ಯಾಣ ರಾಜ್ಯ ನಿರ್ಮಾಪಕರು ಬಸವಣ್ಣನವರು

★ ಅಪ್ಪಣೆಯು ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ। ಹಾಲ್ದೊಳೆಯ
ತೆಪ್ಪ ದಾಸೋಹ ತೇಲುತಲಿ

★ ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ। ಕಾಯಕದ
ಕಂಡ ಜೀವನದ ಶಿವ ಮಾತು

13.ಮಡಿವಾಳ ಮಾಚಿದೇವರ ಧೀರತನದಿಂದ ಧರ್ಮ ಉಳಿಯಿತು

★ ಊಳಿಗವು ಹೊರಡುದಕೆ ನಾಳಿನಾ ಉದಯದೊಳು
ಕಾಳಗವು ಎಸಗೆ ಕೂಮತಕೆ। ಮಾಚಯ್ಯ
ಹೇಳಿ ಸಜ್ಜಾದ ಕಾಳಗಕೆ

★ ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟ ಜೈನರನು। ಮುರಗೋಡ
ಹಾದಿಯೊಳು ಮುರಿದ ಮಾಚಯ್ಯ

★ ಬೆನ್ನಹತ್ತಿದ ವೈರಿ ತಣ್ಣಗಾಯಿತು ಚೆದರಿ
ಮಣ್ಣುಗೂಡಿಸಿದ ಮಾಚಯ್ಯ। ಕೈಯೆತ್ತಿ
ಚಿನ್ನವುಳಿಸಿದನು ಲಿಂಗಿಗಳ

14. ಉಳಿವೆಯಲ್ಲಿ ಮಹಾಮನೆ ಕಾರ್ಯಾರಂಭ ಮಾಡಿತು

★ ಹರಭಜನೆ ಗುರುಸೇವೆ ಉರುತರದಿ ಮಾಡುತಲಿ
ಶರಣಗಣ ಕೂಡಿ ಉಳಿವೆಯೊಳು। ಮರುದಿನವೆ
ಮೆರೆಸಿದರು ತತ್ತ್ವಮಂಟಪವ

★ ಚೆನ್ನಬಸವೇಶ್ವರರು ಉನ್ನತನುಭಾವಿಗಳು
ಚಿನ್ನಮಯವಾತು ಆ ಉಳಿವೆ। ಲಿಂಗಿಗಳ
ಕನ್ನೆ ಭಕ್ತಿಯಾ ಗೂಡಾತು

ಹೀಗೆ ಮಹಾನ್‌ಕಾವ್ಯಗಳು ನಾಚುವಂತೆ ಜನಪದರು ಹಾಡಿ ಪರಮ ಸತ್ಯವನ್ನು ಜಗತ್ತಿನ ಮುಂದೆ ತೆರೆದು ಇಟ್ಟಿದ್ದಾರೆ.

- ಪೂಜ್ಯ ಮಾತಾಜಿ

ಸಮಸ್ಯೆ? - ಸಮಾಧಾನ!

ಚಂದ್ರಶೇಖರ ನಂದಿ, ಬೆಳಗಾಂವ.- ನಮ್ಮ ದೇಶವು ಮುನ್ನಡೆಯುತ್ತಿದೆಯೋ, ಹಿನ್ನಡೆಯುತ್ತಿದೆಯೋ ?

★ ಇದನ್ನು ನಿರ್ಧರಿಸಬೇಕಾದರೆ 1981 ರಲ್ಲಿ ಮುದ್ರಣಗೊಂಡ 1 ರೂ. ನಾಣ್ಯವನ್ನು ಈಗ ಮುದ್ರಣಗೊಳ್ಳುತ್ತಿರುವ 1 ರೂ. ನಾಣ್ಯವನ್ನು ತೂಗಿ ನೋಡಿರಿ ಸಾಕು.

ಸಂಗಮೇಶ ಬಿರಾದರ, ಬೆಂಗಳೂರು.- ಆದೇನೋ ಮೈಸೂರು ರೆಸಾರ್ಟ್ ಹಗರಣವಂತೆ. ಅದಕ್ಕೆ ಯಾವುಯಾವುದೋ ಸಮಿತಿ ಮಾಡಿದರು. ಉನ್ನತ ಮಟ್ಟದ ಸಮಿತಿ ವಿಶೇಷ ತನಿಖೆ ಮಾಡಿ ಹಗರಣದಲ್ಲಿ ಭಾಗಿಗಳೆಂದು ಆರೋಪಿಸಲಾದ ನ್ಯಾಯ ಮೂರ್ತಿಗಳು ಕಲಂಕಿತರಲ್ಲ; ಕಲಂಕಿತರೆನ್ನಲು ಯಾವುದೇ ಸಾಕ್ಷಾಧಾರಗಳಿಲ್ಲ ಎಂದು ಅಭಿಪ್ರಾಯ ಕೊಟ್ಟಿದ್ದಾರೆ. ಇದು ಸರಿಯೆ ?

★ ನಿಮಗೆ ಗೊತ್ತಿಲ್ಲವೆ ಮೇರಾ ಭಾರತ್ ಮಹಾನ್. ಇದು ಪವಿತ್ರದೇಶ. ಇದರಲ್ಲಿ ಯಾರು ಪಾಪಾತ್ಮರು ಇರುವುದೇ ಇಲ್ಲ. ಇಲ್ಲಿ ಇದ್ದ ಮಾತ್ರಕ್ಕೆ ಅವರೆಲ್ಲ ಪುಣ್ಯಾತ್ಮರು. ಇನ್ನು ಕೆಲವೇ ವರ್ಷಗಳಲ್ಲಿ ವೀರಪ್ಪನ್ ಸಹ ಯಾವುದೇ ಕಲಂಕವಿಲ್ಲದ ಪರಿಶುದ್ಧ ಅಪರಂಜಿ ಎಂಬ ಸರ್ಟಿಫಿಕೇಟ್ ಪಡೆದು ಚುನಾವಣೆಯಲ್ಲಿ ಸ್ಪರ್ಧಿಸಿ ಮಂತ್ರಿಯೋ ಅಥವಾ ಸಂಸತ್ ಸದಸ್ಯರಾಗುವುದು ಅಸಾಧ್ಯವೇನಲ್ಲ.

ಕರಿಬಸಪ್ಪ ಮೂಕಣ್ಣನವರು, ಹುಬ್ಬಳ್ಳಿ (ಹೂ ಬಳ್ಳಿ).- ಅಡ್ಡಪಲ್ಲಕ್ಕಿ ಉತ್ಸವಗಳಿಂದ ಏನೇನೂ ಪ್ರಯೋಜನವಿಲ್ಲವೆ ?

★ ಯಾಕಿಲ್ಲ ? ಒಬ್ಬೊಬ್ಬರ ಪಲ್ಲಕ್ಕಿ ಹೊರಲು ಒಂದು ಸಲಕ್ಕೆ 10 ಜನ ಕೂಲಿಯಾಳುಗಳು; ಹೆಗಲು ಬದಲಾಯಿಸಲು 10 ಜನ. 5 ಜನ ಪೀಠಾಧೀಶರಿಂದ 100 ಜನಕ್ಕೆ ಕೂಲಿ ಸಿಗುವುದು. ಈ ಶ್ರಮ ಜೀವಿಗಳಿಗೆ ಏನು ಸಲ್ಲುತ್ತೋ ಅದಷ್ಟೇ ಸಾರ್ಥಕವಾದ ಹಣ. ಒಬ್ಬೊಬ್ಬರಿಗೆ 100 ರೂ. ಕೊಟ್ಟರೂ ಹತ್ತು ಸಾವಿರ ಹೋಗುತ್ತೆ. ಹತ್ತು ಸಾವಿರ ಮಾತ್ರ ಸಾರ್ಥಕವಾಗಿ ಇದರಿಂದ ಪುಢಾರಿಗಳು ಗಳಿಸುವ 10 ಲಕ್ಷ ಮಾತ್ರ ವ್ಯರ್ಥವಾಗುತ್ತೆ. ಆದ್ದರಿಂದ ಇದು ಬೆಟ್ಟ ಅಗೆದು ಇಲಿ ತೆಗೆದಂತೆ !

ಕಲ್ಮೇಶ, ಶೀಗುಣಸಿ.- ಮೊದಲೆಲ್ಲ ತೆರೆ ಹಾಕಿಕೊಂಡು ಪೂಜೆ ಮಾಡುತ್ತಿದ್ದ ವಿರಕ್ತ ಸ್ವಾಮಿಗಳು ಮತ್ತು ಪಂಚ ಪೀಠದವರು ಸಹ ಈಗ ಬಹಿರಂಗವಾಗಿ ಇಷ್ಟಲಿಂಗಪೂಜೆ ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲವೆ ?

★ ಇದು ಸತ್ಯ! ಆದರೆ ಇಂಥ ಕುಂಭಕರ್ಣರನ್ನು ಎಬ್ಬಿಸಲು ಪೂಜ್ಯ ಲಿಂಗೈಕ್ಯ ಲಿಂಗಾನಂದ ಅಪ್ಪಾಜಿಯವರು 40 ವರ್ಷಕಾಲ, ನಾವು 38 ವರ್ಷಕಾಲ ಎಷ್ಟು ತಮ್ಮಟೆ ಬಾರಿಸಿ, ಕಹಳೆ ಊದಿ, ನಗಾರಿ-ಭೇರಿ ಬಾರಿಸಬೇಕಾಯಿತು ನೋಡಿರಿ !

ಎ.ಬಿ. ಮಂಜುನಾಥ, ಭದ್ರಾವತಿ.- ಇತ್ತೀಚೆಗೆ ಅಡ್ಡಪಲ್ಲಕ್ಕಿ ಉತ್ಸವ ಜಾಸ್ತಿಯಾಗುತ್ತಿದೆ. ಇದರಿಂದ ಪಂಚಪೀಠಾಧೀಶರ ಬಗ್ಗೆ ಭಕ್ತಿ ಜಾಸ್ತಿಯಾಗುತ್ತಿದೆ ಎಂದು ಊಹಿಸಬೇಕೋ? ಅಥವಾ ಪ್ರೌಢರು ಪ್ರಜ್ಞಾವಂತರು ಕಮ್ಮಿಯಾಗಿ ಮೂಢ ಭಕ್ತರು ಜಾಸ್ತಿಯಾಗುತ್ತಿದ್ದಾರೆ ಎಂದು ಭಾವಿಸಬೇಕೊ ?

★ ನಿಮ್ಮ ಎರಡೂ ಊಹೆಗಳು ತಪ್ಪು. ಭಕ್ತರು ಜಾಸ್ತಿಯಾಗಿಲ್ಲ, ಪ್ರಜ್ಞಾವಂತರು ಕಮ್ಮಿಯಾಗಿಲ್ಲ; ಬಂಡವಾಳವಿಲ್ಲದೆ ವ್ಯಾಪಾರ ಮಾಡುವ ಬುದ್ಧಿವಂತರು, ರಾಜಕೀಯ ಪುಢಾರಿಗಳು ಜಾಸ್ತಿಯಾಗಿದ್ದಾರೆ. ಅವರಿಗೆ ನಾಲ್ಕು ಕಾಸು ಸಿಗುತ್ತಿದ್ದರೆ ಯಾರನ್ನು ಬೇಕಾದರು ಮೆರೆಸಲು ತುದಿಗಾಲ ಮೇಲೆ ನಿಂತಿರುತ್ತಾರೆ. ಜನರಿಗೆ ಇಷ್ಟವಿಲ್ಲದಿದ್ದರು ಅವರು ದುರ್ಜನರನ್ನು, ದರ್ಪಿಷ್ಟರನ್ನು ಎದುರು ಹಾಕಿಕೊಳ್ಳಲು ಸಿದ್ಧರಿಲ್ಲದೆ ಮೌನವಾಗಿ ಹಣವನ್ನು ತೆರುತ್ತಾರೆ. ಈ ಆಟ ವಿಪರೀತ ಜಾಸ್ತಿಯಾಗುತ್ತಿದೆ.

ಎಂ. ಆರ್. ಪಂಪನ ಗೌಡ, ಇಂಜನಿಯರ್, ಬಳ್ಳಾರಿ.- ಮಿಥಕ್ ಸೊಸೈಟಿಯಲ್ಲಿಯ ದಕ್ಷಿಣ

ಭಾರತದ ಜನ ಸಂಖ್ಯಾ ವಿವರ (1891. 1901 ಜಾತಿವಾರು ಸಮೀಕ್ಷೆ) ಕೊಟ್ಟಿದ್ದೆ. ಅದರಲ್ಲಿ ಲಿಂಗಾಯತರ ಸುಮಾರು 20-25 ಜಾತಿಗಳ ಉಲ್ಲೇಖವಿದೆ. ಆ ಜಾತಿಗಳ ಪಟ್ಟಿಯಲ್ಲಿ ವೀರಶೈವ ಜಂಗಮವೂ ಒಂದು. ಆದ್ದರಿಂದ ಈ ಒಂದು ಜಾತಿಯ ಹೆಸರು ವೀರಶೈವವನ್ನೇ ಇದೇ ಲಿಂಗಾಯತ ಧರ್ಮಕ್ಕೆ ಸಮಾನಾರ್ಥಕವಾಗಿ ಬಳಸುವುದು ಸರಿಯಲ್ಲ ಎಂದು ನನ್ನ ಅನಿಸಿಕೆ.

★ ಅದನ್ನೇ ನಾವೂ ಹೇಳುವುದು.

ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ!
ಮಾಲೆಗಾರನೇಸು ಭಕ್ತನಾದಡೆಯೂ
ಬಾವಿಯ ಬೊಮ್ಮನ ಹಂಗ ಬಿಡ!
ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ!
ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ!
ನಾನಾವ ಹಂಗಿನವನಲ್ಲ, ನಿಮ್ಮ ಹಂಗಿನವನಯ್ಯಾ! ಲಿಂಗದೇವಾ!

ಎಂಬ ವಚನದಲ್ಲಿ ಬ್ರಾಹ್ಮಣ ಮೂಲದಿಂದ ಲಿಂಗಾಯತ ಧರ್ಮಕ್ಕೆ ಬಂದವರು ಸುಲಭವಾಗಿ ಜನಿವಾರದ ಹಂಗನ್ನು ಬಿಡುವುದಿಲ್ಲ, ಹೂಮಾಲೆಗಾರರು ಬಾವಿಯ ಬೊಮ್ಮನ ಹಂಗನ್ನು, ಬಣಜಿಗರು ಸಗಣಿಯ ಬೆನಕನ ಹಂಗನ್ನು, ಕಂಚುಗಾರರು ಕಾಳಿಕಾ ದೇವಿಯ ಹಂಗನ್ನು ಬಿಡುವುದಿಲ್ಲ ಎಂದು ಬಸವಣ್ಣನವರು ಹೇಳುತ್ತಾರೆ. ಕ್ಷುದ್ರ (petty gods)ದೇವತೆಗಳ ಆರಾಧನೆ ಮಾಡುವ ದಲಿತರು ಮಾರಯ್ಯ, ಕೇತಯ್ಯ, ಗಾವಿಲ ಇತ್ಯಾದಿಗಳ ಆರಾಧನೆ ಬೇಗನೆ ಬಿಡುವುದಿಲ್ಲ. ಹಾಗೆಯೇ ವೀರಶೈವ ಮೂಲದಿಂದ ಬಂದು ಲಿಂಗಾಯತರಾದವರು (ಬ.ವ.ದೀ 1159) ಸ್ಥಾವರ ಲಿಂಗ ಮೋಹವನ್ನು, ಭವಿ ಶೈವ, ದೈವ, ಕ್ಷೇತ್ರ, ತೀರ್ಥಂಗಳ ಮೋಹವನ್ನು ಬಿಟ್ಟು ಏಕಲಿಂಗ ನಿಷ್ಠಾಪರರಾಗರು ಎನ್ನುತ್ತಾರೆ. 8 ಜಿಲ್ಲೆಗಳಿಂದ ಕೂಡಿದ್ದ ಮೈಸೂರನ್ನು ರಾಜಧಾನಿಯನ್ನಾಗಿ ಪಡಿದಿದ್ದ ಕನ್ನಡ ನಾಡು ಮೊದಲು ಮೈಸೂರು ರಾಜ್ಯ. ನೂತನ ಕರ್ನಾಟಕಕ್ಕೆ ಹೆಚ್ಚಿನ ಕನ್ನಡ ಪ್ರದೇಶ ಸೇರಿದಾಗ ಮೈಸೂರು ರಾಜ್ಯ ಎಂಬ ಹೆಸರು ಸೂಕ್ತವೆನಿಸದೆ ಪರಂಪರತಯ ಸೂಚಕವಾದ ಕರ್ನಾಟಕ ಹೇಗೆ ಸೂಕ್ತವೋ: ಹಾಗೆ ಲಿಂಗಾಯತ ಪದ. ವೀರಶೈವರು ಲಿಂಗಾಯತರಾದಂತೆ ಮಡಿವಾಳರು, ಸಾದರು, ಒಕ್ಕಲಿಗರು, ಬಣಜಿಗರು ಎಲ್ಲರು ಆಗಿದ್ದಾರೆ. ಆದ್ದರಿಂದ ಮತಾಂತರಗೊಂಡ ಒಂದು ಗುಂಪು ವೀರಶೈವವನ್ನು ಇಡೀ ಬೃಹತ್ ಸಮಾಜದ ಧರ್ಮವಾದ ಲಿಂಗಾಯತದೊಡನೆ ಸಮೀಕರಿಸುವುದು ಅಕ್ಷಮ್ಯ ಅಪರಾಧಮೇ ಸರಿ!

ಬಸಯ್ಯ ಗಣಾಚಾರಿ, ಧಾರವಾಡ.- ಇತ್ತೀಚೆಗೆ ಪಂಚ ಪೀಠಾಧೀಶರು ನಿಮ್ಮ ಬಗ್ಗೆ ತೀಕ್ಷ್ಣವಾಗಿ ಟೀಕೆ ಮಾಡಲು ಆರಂಭಿಸಿದ್ದಾರೆ. ವಿರಕ್ತರನ್ನು ಅಷ್ಟೊಂದು ಟೀಕಿಸುತ್ತಿಲ್ಲ; ಹೀಗೇಕೆ ?

★ ಪಂಚಾಚಾರ್ಯರ ಕಲ್ಪನೆಯ ಕಾಗಕ್ಕ-ಗುಬ್ಬಕ್ಕನ ಕಥೆ ಶ್ರೀ ಕಾಶೀನಾಥ ಶಾಸ್ತ್ರಿಗಳಿಂದ ಪ್ರಾರಂಭವಾಯಿತು. ಆಗ ವಿರಕ್ತರು ಮತ್ತು ಪ್ರಾಜ್ಞರಾದ ಕೆಲವು ಲಿಂಗಾಯತ ಗಣ್ಯ ಶರಣರು ಈ ಕುತಂತ್ರವನ್ನು ಪ್ರತಿಭಟಿಸಿದರು, ಪುಸ್ತಕಗಳನ್ನೂ ಬರೆದರು. ಆದರೂ ಪಂಚಪೀಠಾಧೀಶರು ಆದಿ ಪಂಚಾಚಾರ್ಯರೆಂಬ ಉಪಗ್ರಹಗಳನ್ನು ಸೃಷ್ಟಿಮಾಡಿ, ಮೂಢ ಜನರ ತಲೆಯಲ್ಲಿ ಸುತ್ತಲು ಬಿಡುವಲ್ಲಿ ಯಶಸ್ವಿಯಾದರು. ಬರುಬರುತ್ತ ವಿರಕ್ತರು ಮೌನವಾದರು. ಸೊಲ್ಲಾಪುರ-ಮುಧೋಳದ ಕಿರೀಟ ಮಠದ ಲಿಂ॥ ಶ್ರೀ ಮೃತ್ಯುಂಜಯ ಸ್ವಾಮಿಗಳು ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರು ಎಂದು ಹೇಳುವಲ್ಲಿ ಧೈರ್ಯವಹಿಸಿದ ಮೊದಲಿಗರು. (ಈಗ ಇದನ್ನೆಲ್ಲ ಸ್ಮರಿಸಿಕೊಂಡರೆ ನಾಚಿಕೆಯಾಗುತ್ತಿದೆ. ಅಪ್ಪನಿಗೆ ಅಪ್ಪ ಎನ್ನಲು ನಾಚಿದ ಶೂರರು ಈ ವಿರಕ್ತರು!) ಆಗ ಪೂಜ್ಯ ಗುರುಗಳ ಮತ್ತು ನಮ್ಮ ಪ್ರವೇಶ ಧರ್ಮ ಪ್ರಚಾರ ಕ್ಷೇತ್ರಕ್ಕೆ ಆಯಿತು. ಅಂಥ ಸಮಯದಲ್ಲೇ ಶಿವೈಕ್ಯ ಹಾನಗಲ್

ಕುಮಾರ ಸ್ವಾಮಿಗಳು ಶಿವಯೋಗ ಮಂದಿರ, ವೀರಶೈವ ಮಹಾಸಭೆ ಸ್ಥಾಪಿಸಿದ್ದಾಗ, ಜಂಗಮ ಎಂಬ ಜಾತಿಯನ್ನು ಗಟ್ಟಿಗೊಳಿಸಿದಾಗ ಜಂಗಮ ವರ್ಗದವರು ಅಂತರಂಗದಲ್ಲಿ ಒಂದಾದರು ಒಂದೇ ಮನೆಯಲ್ಲಿ ಹುಟ್ಟಿದ ಅಯ್ಯನವರ ಏಟುಗಳು ಅಣ್ಣನು ವಿರಕ್ತಮಠಕ್ಕೆ ಅಧಿಕಾರಿಯಾದರೆ ತಮ್ಮನು ಪಂಚಾಚಾರ್ಯ ಮಠಕ್ಕೆ ಆಗುತ್ತಿದ್ದ. ಹೀಗೆ ಜಾತಿವಾದವೇ ಪ್ರಬಲಗೊಂಡು, ಬಸವಾದಿ ಪ್ರಮಥರನ್ನು ಅಗ್ರಪೀಠದಿಂದ ಇಳಿಸಲು ಉಭಯತರೂ ಬಹಿರಂಗದಲ್ಲಿ ಕಚ್ಚಾಡಿದರೂ ಅಂತರಂಗದಲ್ಲಿ ಒಂದೇ ಆದರು. ಇದೆಲ್ಲ ನಡೆದುದು 20ನೆಯ ಶತಮಾನದಲ್ಲೇ ಎಂಬುದು ಗಮನಾರ್ಹ.

ಇದನ್ನೆಲ್ಲ ಸಮೀಕ್ಷೆ ಮಾಡಿ ನಿರ್ಭಯವಾಗಿ ನಾವು ಸತ್ಯವನ್ನು ಹೇಳತೊಡಗಿದ್ದರಿಂದ ಸಮಾಜ ಎಚ್ಚೆತ್ತುಕೊಂಡಿತು. ಆಚಾರ್ಯರು ಲಿಂಗೋದ್ಭವರಾದರು, ಆಕಾರದಲ್ಲಿ ಚರಿಸುತ್ತಿದ್ದರು, ಅಗಸ್ತ್ಯನಿಗೆ, ಹನುಮಂತನಿಗೆ, ಶಂಕರಾಚಾರ್ಯರಿಗೆ ಲಿಂಗಧಾರಣೆ ಮಾಡಿದರು ಎಂದೆಲ್ಲ ಬಡಬಡಿಸುತ್ತಿದ್ದ ಪಂಚಪೀಠದವರನ್ನು ಪ್ರಶ್ನಿಸತೊಡಗಿದರು. ಇಂಥ ಜಾಗೃತಿ ಮಾಡಿದ್ದಕ್ಕಾಗಿ, ಮಾಡುತ್ತಿರುವುದಕ್ಕಾಗಿ ನಮ್ಮ ಮೇಲೆ ಆಕ್ರೋಶ.

ಬಿ. ಬಿ. ಲಕ್ಷ್ಮೇಶ್ವರ, ಹುಬ್ಬಳ್ಳಿ .- ಹುಬ್ಬಳ್ಳಿಯಲ್ಲಿ ದಿ. 1-2-2003 ಭಾಷಣ ಮಾಡಿದ ರಂಭಾಪುರಿ ಶ್ರೀಗಳು ನಾವುಗಳು ಯಾರೂ ಬಸವಾಯತರಲ್ಲ ಎಂದಿದ್ದಾರೆ. ಸರಿಯೆ ?

★ ನೂರಕ್ಕೆ ನೂರು ಸರಿ. ನಾವು ಹೇಳುವುದೂ ಅದನ್ನೇ ಪಂಚಪೀಠದವರು ವೀರಶೈವರು, ಲಿಂಗಾಯತರಲ್ಲ; ಬಸವಾಯತರು ಮೊದಲೇ ಅಲ್ಲ. ಏಕೆಂದರೆ ಅವರು ಆಚರಿಸುವ ಅಡ್ಡ ಪಲ್ಲಕ್ಕಿ, ಹಾಕುವ ಬಂಗಾರದ ಕಿರೀಟ ಎಲ್ಲವೂ ಸರಳತೆ, ಸಮಾನತೆ, ಮಾನವೀಯತೆ ಬೋಧಿಸುವ ಬಸವ ತತ್ತ್ವಕ್ಕೆ ಹೊರಗು; ಅಂದಾಗ ಅವರು ಬಸವಾಯತರಲ್ಲವೇ ಅಲ್ಲ.

ಎಸ್. ಸೋಮಶೇಖರಯ್ಯ ಪಟೇಲ್, ಯಳನಾಡು.- ಸೊನ್ನಲಿಗೆ ಸಿದ್ಧರಾಮೇಶ್ವರನ್ನು ಕರ್ಮಯೋಗಿ ಸಿದ್ಧರಾಮೇಶ್ವರರು ಎಂಬುದು ಸರಿಯೋ ಅಥವಾ ಶಿವಯೋಗಿ ಸಿದ್ಧರಾಮೇಶ್ವರರು ಎಂಬುದು ಸರಿಯೋ? ಕರ್ಮಯೋಗ-ಶಿವಯೋಗ ಎರಡೂ ಒಂದೇ ಎಂದು ಅನೇಕರು ವಾದಿಸುತ್ತಾರೆ ?

★ ಕರ್ಮಯೋಗಿಯಾಗಿದ್ದ ಸಿದ್ಧರಾಮೇಶ್ವರರು ಶಿವಯೋಗಿಯಾದರು ಎಂದೇ ಖ್ಯಾತರಾಗಿರುವಾಗ ಎರಡೂ ಒಂದೇ ಎಂದು ಹೇಗೆ ಹೇಳಲು ಸಾಧ್ಯ? ಏನೋ ವ್ಯತ್ಯಾಸವಿರಲೇ ಬೇಕಲ್ಲವೆ ? ಅದೇನು ಎಂಬುದನ್ನು ನೋಡೋಣ. ಸ್ವತಃ ಸಿದ್ಧರಾಮೇಶ್ವರರು ತ್ರಿವಿಧಿಯಲ್ಲಿ ಹೀಗೆ ಹೇಳುತ್ತಾರೆ:

1. ಕರ್ಮಯೋಗದವರ ಕಡಿದು ಖಂಡಿಸಿದನು
ನಿರ್ಮಳ ನಿರ್ವಂಚಕನು ಬಸವಲಿಂಗ
ನಿರ್ಮಳ ರೂಪನು ಬಸವಲಿಂಗಕೆ ಅಂಜಿ
ಎನ್ನ ಕಾಡಿತು ಗುರುವೆ ಯೋಗಿನಾಥ 73/472
2. ಹಸುಳೆಯಾಗಿಯು ನಾನು ಕೆರೆ ಬಾವಿ ದೇವಾಲ್ಯ
ವಿರಚಿಸಿ ಭವಕೆ ಬಂದು ಫಲವನುಂಡು
ನರಕಕ್ಕೆ ಬೀಳುವನ ಕರುಣದಿಂದೆತ್ತಿ
ಹೊರೆಯೊಳಿರಿಸಿದ ಬಸವ ಯೋಗಿನಾಥ 22/462
3. ಕರ್ಮಯೋಗದವರ ನಿರ್ಮೂಲ ಮಾಡಿತ್ತು
ಹಮ್ಮನೆ ಮುರಿಯಿತ್ತು ಯೋಗಿಗಳನು

ಚನ್ನಪ್ರಭುರಾಯಂಗೆ ಅಂಜಿ ಬಂದೀ ಮಾಯೆ
ಎನ್ನ ಕಾಡಿತು ಗುರುವೆ ಯೋಗಿನಾಥ 55/495

ಕರ್ಮಯೋಗದಲ್ಲಿ ದೇವನಲ್ಲಿ ಶರಣಾಗತಿಗಿಂತ ತನ್ನ ಬಗ್ಗೆ ತನಗೆ ಅತಿ ಆತ್ಮವಿಶ್ವಾಸ, ಹಮ್ಮು ಇರುತ್ತದೆ. ಇದು ಸೋಹಂ Ego-centrism ತತ್ತ್ವದ ಮೇಲೆ ನಿಂತಿರುತ್ತದೆ. ಆದರೆ ಶಿವ ಯೋಗ ಸೂಕ್ತವಾಗಿ ಹೇಳುವುದಾದರೆ ಲಿಂಗಾಂಗ ಯೋಗ/ಬಸವ ಯೋಗದಲ್ಲಿ ದಾಸೋಹಂಭಾವ. Theocentrism ದೇವನಲ್ಲಿ ಅಖಂಡ ಶರಣಾಗತಿ ಇರುತ್ತದೆ.

ಕರ್ಮಯೋಗಿಯಾಗಿದ್ದ ಶ್ರೀ ಸಿದ್ಧರಾಮೇಶ್ವರರು ಹೇಗಿದ್ದರು ಎಂಬುದನ್ನು ಜನಪದರು ಚೆನ್ನಾಗಿ ಚಿತ್ರಿಸುತ್ತಾರೆ.

ಹಾದಿ ಹಾದಿಗೆ ಗುಡಿಯ ಬೀದಿ ಬೀದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ। ಸೊನ್ನಲಿಗೆ
ಸಾಧು ಸಿದ್ಧನಿಗೆ ಮನೆಯಾತು॥ 30
ಸಿದ್ಧ ಪುರುಷನು ಎಂದು ಸಿದ್ಧರಾಮಗೆ ಬಿಮ್ಮು
ಉದಂಡನಾಗಿ ಆಳಿದನು। ಪ್ರಭುದೇವ
ಹೆದ್ದಾರಿ ಬಂದ ಶಿವ ಬೆಳಕು

ಪ್ರಭುದೇವರು ಭೇಟಿಯಾದ ಮೇಲೆ ಸಿದ್ಧರಾಮೇಶ್ವರರು ಪರಿವರ್ತನೆಗೊಂಡರು. ಸಿದ್ಧರಾಮನ ಬಿಮ್ಮು ಬಿದ್ದು ಹೋಯಿತು ಕರಗಿ

ಬುದ್ಧ ಪ್ರಭುದೇವ ತಿಳಿ ಹೇಳಿ। ಸೊನ್ನಾಲಗಿ
ಸಿದ್ಧ ಶರಣಾದ ಶಿವ ಮತಕೆ ॥ 32

ಹೀಗೆ ಮೊದಲು ಕರ್ಮಯೋಗಿಯಾಗಿ ಹಮ್ಮಿನಲ್ಲಿದ್ದ ಸಿದ್ಧರಾಮೇಶ್ವರರು ನಂತರ ಲಿಂಗಾಂಗ ಯೋಗಿಯಾದರು. ಈ ಯೋಗವನ್ನು ಬಸವ ಯೋಗ ಎಂದು ಕರೆದವರು ಸಿದ್ಧರಾಮೇಶ್ವರರೇ!

★ ಬಸವನ ಯೋಗದಿಂ ಹಸನಾಯಿತ್ತೆ ಲೋಕ
ಚಂದದಿಂ ಬಸವಗತಿ ಎನಲು ಭವವು
ಹಿಂಗುವುದು ಬಸವಯ್ಯ ಬಸವಣ್ಣ ಶರಣಾರ್ಥಿ
ಎಂದು ಬದುಕಿದೆನಯ್ಯ ಯೋಗಿನಾಥ 2/484

★ ಬಸವಾಕ್ಷರತ್ರಯದಲ್ಲಿ ಮನವಿಟ್ಟು ನಾನೀಗ
ವಸವಳಿದಾಕ್ಷಣ ನಿತ್ಯನಾದೆ
ಬಸವ ನಿಜಯೋಗದಲಿ ನಿತ್ಯಪದವನು ಕಂಡು
ಬಸವ ನೀನಾನಾದೆ ಯೋಗಿನಾಥ 53/468

ಸ್ವತಃ ಸಿದ್ಧರಾಮೇಶ್ವರರೇ ಹೇಳಿಕೊಂಡ ಸತ್ಯವನ್ನು ಏಕೆ ಕೆಲವರು ಮುಚ್ಚಿಡುತ್ತಾರೋ, ಅದರಿಂದ ಏನು ಸಾಧಿಸುವರೋ ಅರ್ಥವಾಗುತ್ತಿಲ್ಲ !

ಬಸವಣ್ಣೆಪ್ಪ ಹಾವೇರಿ, ಹುಬ್ಬಳ್ಳಿ .- ಹುಬ್ಬಳ್ಳಿಯಲ್ಲಿ ವೀರಾವೇಶದಿಂದ ಮಾತನಾಡಿದ ರಂಭಾಪುರಿ ಶ್ರೀಗಳು ಶರಣರಿಗೆ ದೀಕ್ಷೆ ಕೊಟ್ಟವರು ಪಂಚಪೀಠದ ಶಿವಾಚಾರ್ಯರು ಎಂದು ಒಂದು ಪಟ್ಟಿಯನ್ನೇ ಕೊಟ್ಟರು. ಬಸವಣ್ಣನವರಿಗತ ಜಾತವೇದ ಮುನಿ, ಅಕ್ಕಮಹಾದೇವಿಗೆ ಗುರುಲಿಂಗ ಶಿವಾಚಾರ್ಯರು ಎಂದು ಹೇಳಿದರು. ಇದು ನಿಜವೆ ?

★ ಇದು ಅಪ್ಪಟ ಸುಳ್ಳು. ಪಾಪ! ಈ ಕಾಲ್ಪನಿಕ ಪಂಚಾಚಾರ್ಯರಿಗೆ ಯಾರ ಯಾರ ತಲೆ

ಮೇಲೋ ಕೈ ಇಡಿಸಲು ಈಗಿನ ಪಂಚಪೀಠಾಧೀಶರು ಯತ್ನಿಸಿ, ಮುಖಭಂಗಕ್ಕೆ ಒಳಗಾಗುತ್ತಾರೆ. ಹನುಮಂತನಿಗೆ ವೀರಭದ್ರನಿಂದ ದೀಕ್ಷೆ ಕೊಡಿಸಿ ಕಥೆ ಬರೆಸಿದರು. ಹನುಮಂತ ಲಿಂಗಧಾರಣೆ ಮಾಡಿದ ಸುದ್ದಿ ಎಲ್ಲಾದರೂ ಸಿಕ್ಕುವುದೆ ?

ರೇಣುಕಾಚಾರ್ಯರಿಂದ ಅಗಸ್ತ್ಯನಿಗೆ, ಶಂಕರಚಾರ್ಯರಿಗೆ ಲಿಂಗಧಾರಣೆ ಮಾಡಿಸುತ್ತಾರೆ. ಪಾಪಾ! ಶಂಕರಾಚಾರ್ಯರು ಎಲ್ಲೆಲ್ಲೂ ಇದನ್ನು ಹೇಳಿಲ್ಲ. ಬಡಿವಾರದ ಕೆಲವು ವೀರಶೈವ ಸ್ವಾಮಿಗಳಿದ್ದಾರೆ, ಇಂದಿರಾಗಾಂಧಿ ಧರಿಸಿದ್ದ ರುದ್ರಾಕ್ಷಿ ಸರವನ್ನು ಇವರೇ ಆಶೀರ್ವದಿಸಿ ಕೊಟ್ಟುದಾಗಿ ತಮ್ಮ ಅಭಿಮಾನಿಗಳ ಮುಂದೆ ಕೊಚ್ಚಿಕೊಳ್ಳುತ್ತಾರೆ. ಶಂಕರಾಚಾರ್ಯರು ಒಂದುವೇಳೆ ರೇಣುಕರಿಂದ ಇಷ್ಟಲಿಂಗವನ್ನು ಪಡೆದಿದ್ದರೆ ಅಂಥ ಗುರುವು ಕೊಟ್ಟ ಲಿಂಗವನ್ನು ಏಕೆ ಧರಿಸಿಕೊಂಡಿರುವುದಿಲ್ಲ ?! ಅಂಥ ಅಸಾಮಾನ್ಯ ಗುರುವನ್ನು ಏಕೆ ಎಲ್ಲೆಲ್ಲೂ ಸ್ಮರಿಸಿಕೊಂಡಿಲ್ಲ, ಕೊಂಡಾಡಿಲ್ಲ? ಸಿದ್ಧರಾಮೇಶ್ವರರಿಗೆ ರೇವಣಸಿದ್ಧರಿಂದ ದೀಕ್ಷೆಯಾಯಿತು ಎಂದು ಅಧ್ಯಯನವಿಲ್ಲದ ಮೂಢ ಭಕ್ತರ ಮುಂದೆ ಕೆಲವರು ಹೇಳುತ್ತಾರೆ. ಸ್ವತಃ ಸಿದ್ಧರಾಮೇಶ್ವರರು ತಮ್ಮ ವಚನಗಳಲ್ಲಿ ಚನ್ನಬಸವಣ್ಣನವರಿಂದ ದೀಕ್ಷೆಯಾಯಿತು ಎನ್ನುತ್ತಾರೆ. ಸುಗ್ಗವ್ವೆ ಗರ್ಭವತಿ ಇದ್ದಾಗ ಆಕೆಯ ಗರ್ಭದಲ್ಲಿ ಶಿವಚೈತನ್ಯ ಗುರುತಿಸಿ ರೇವಣಸಿದ್ಧರು ಆ ತಾಯಿಗೆ ನಮಿಸುತ್ತಾರೆ. ಜಾತವೇದ ಮುನಿಯಿಂದ ಬಸವಣ್ಣನವರಿಗೆ ದೀಕ್ಷೆ ಆದ ಬಗ್ಗೆ ಯಾವ ಕಾವ್ಯದಲ್ಲೂ ಉಲ್ಲೇಖವಿಲ್ಲ; ವಚನ ಸಾಹಿತ್ಯದಲ್ಲೂ ಹೇಳಿಲ್ಲ. ಅವರು ಕೇವಲ ವಿದ್ಯಾಗುರು. ಸ್ವತಃ ಅವರು ಇಷ್ಟಲಿಂಗವಿಲ್ಲದ ಪಾಶುಪತ ಮಾರ್ಗಿಗಳು ಮುನಿ ಎಂಬ ವಿಶೇಷಣವೇ ಅದನ್ನು ದೃಢಪಡಿಸುತ್ತದೆ. ಬೇಡರ ಕಣ್ಣಪ್ಪ, ಸಿರಿಯಾಳ-ಚೆಂಗಳೆ ಮುಂತಾದವರನ್ನೆಲ್ಲ ಕೊಂಡಾಡುವ ಬಸವಣ್ಣನವರು ದೀಕ್ಷೆ ಕೊಟ್ಟ ಗುರುವಾಗಿದ್ದಿದ್ದರೆ ಜಾತವೇದಮುನಿಗಳನ್ನು ಕೊಂಡಾಡುತ್ತಿರಲಿಲ್ಲವೆ ?

ಅಕ್ಕಮಹಾದೇವಿಗೆ ದೀಕ್ಷೆ ಕೊಟ್ಟವರು ಗುರುಲಿಂಗ ಶಿವಾಚಾರ್ಯರಲ್ಲ ಗುರುಲಿಂಗದೇವರು. ದೇವರು ಎಂಬ ವಿಶೇಷಣ ಬಸವ ಮಾರ್ಗಿಗಳಿಗೆ ಮಾತ್ರ ಇರುವುದು. ಬಸವರಾಜದೇವರು, ಪ್ರಭುದೇವರು, ಮಾಚಿದೇವರು ಇತ್ಯಾದಿ ಗಮನಿಸಿರಿ.

ಕೆ.ಕೆ. ಬಸ್ತವಾದಿ, ಸಂಕೇಶ್ವರ.- ನಂಬಿದೆ ಗುರುವೆ ನಂಬಿದೆ ಸ್ವಾಮಿ ಈ ಹಾಡು ಡಾ|| ಆರ್. ಸಿ. ಹಿರೇಮಠ್ ಸಂಪಾದಿಸಿದ ಅಕ್ಕನ ವಚನಗಳಲ್ಲಿ ಇದೆ. ಪುರಂದರದಾಸರ ಪದ್ಯವೆಂದೂ ಹಾಡಲಾಗುತ್ತಿದೆ. ಇದು ಯಾರದು ?

★ ಪುರಂದರ ದಾಸರಿಗಿಂತಲೂ ಮೊದಲಿನವರು ಅಕ್ಕಮಹಾದೇವಿ. ಆದ್ದರಿಂದ ಅವರದೇ ಆ ಹಾಡು. ಆ ಹಾಡು ಬಹುಶಃ ಇಷ್ಟವಾದರೂ ಶಿವನ ಸ್ಮರಣೆ ಮಾಡಲು ಇಷ್ಟವಿಲ್ಲದೆ ಪುರಂದರ ದಾಸರು ಚನ್ನಮಲ್ಲಿಕಾರ್ಜುನನ ಬದಲು ಪುರಂದರ ವಿಠ್ಠಲ ಎಂದು ಹಾಡಿರಬಹುದು. ಇದೇ ರೀತಿ ಜಗವ ಸುತ್ತಿಪ್ಪುದು ಎಂಬ ಬಸವ ವಚನವನ್ನೂ ಹಾಡಿಕೊಂಡಿದ್ದಾರೆ.

ಅಥವಾ ಶಿವ ಸ್ಮರಣೆ ಮಾಡಲು ಇಷ್ಟವಿಲ್ಲದ ವೈಷ್ಣವರು ಪುರಂದರ ವಿಠ್ಠಲ ಎಂದು ಸೇರಿಸಿ ಹಾಡನ್ನು ಬಳಕೆಗೆ ತಂದಿರಲೂಬಹುದು.

ಬಸವ ಚಂದ್ರಿಕೆ., ಬೆಂಗಳೂರು.- ಪಂಚ ಸೌಂಜ್ಞೆಗಳನ್ನು ಈಗ 6 ಮಾಡಿದ್ದೀರಿ. ಜಾಸ್ತಿ ಮಾಡಿದರೆ ನೆನಪಿಟ್ಟುಕೊಳ್ಳುವುದು ಕಷ್ಟ, ಆದ್ದರಿಂದ 4ಕ್ಕೆ ಸೀಮಿತಗೊಳಿಸುವುದು ಒಳ್ಳೆಯದು.

★ ತಲೆಗಾಗಿ ಟೋಪಿ ಇರಬೇಕೇ ವಿನಾ, ಟೋಪಿ ಸೈಜಿಗೆ ತಲೆಯನ್ನು ಹೊಂದಿಸಲು ಬರದು. ನಮ್ಮದು ಆರರ ಮಾರ್ಗ

ಆರು ಭೂತಂಗಳಲಿ ಆರಾರು ತತ್ತ್ವದಲ್ಲಿ
ಪೂರೈಸಿ ಇಪ್ಪ ಘನವನ್ನು। ತಾನು
ಆರೈದು ತಿಳಿದೊಡವ ಮುಕ್ತ ॥

ಷಟ್‌ಕೋನ ಚಿಹ್ನೆಯಲ್ಲಿ ಈ ಎಲ್ಲ 6 ಅನ್ನು ಅಳವಡಿಸಲು ಸಾಧ್ಯ. ಪಂಚ ಎಂಬ ಪದ ಅಪಾರ್ಥಕ್ಕೆ ಎಡೆ ಮಾಡುತ್ತದೆ. ಪಂಚಮಸಾಲೆ, ಪಂಚಾಚಾರದವರು ಎಂಬ ಪದವನ್ನು ಈಗ ಪಂಚಪೀಠದವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಅತ್ಯಂತ ಶ್ರೇಷ್ಠವಾದ ಪಂಚ ಆಚಾರಗಳನ್ನು ಅಳವಡಿಸಿಕೊಂಡವರು ಎಂಬ ವಿಶೇಷವನ್ನರಿಯದೆ, ತಾವು ಪಂಚ ಆಚಾರದವರು ಪಂಚ ಪೀಠದವರು ಎಂದು ಮೂಢರಾಗಿ ಹೇಳುತ್ತಾರೆ. ಬಸವಣ್ಣನವರ 108 ಮಂತ್ರಾವಳಿಯಲ್ಲಿ ನಾನು 33ನೆಯ ವಾಕ್ಯದಲ್ಲಿ ಓಂ ಪಂಚಾಚಾರ ಪ್ರತಿಪಾದಕ ಬಸವಲಿಂಗಾಯ ನಮಃ ಎಂದು ಬರೆದಿದ್ದೇನೆ. ಒಂದು ದಿನ ಒಬ್ಬರು ಅದನ್ನು ಪಂಚಾಚಾರ್ಯ ಪ್ರತಿಪಾದಕ ಎಂದು ಹೇಳುವುದನ್ನು ಕೇಳಿಸಿಕೊಂಡು ಆಘಾತವಾಯಿತು. ಆದ್ದರಿಂದ ಈ 5ರ ಸಹವಾಸವೇ ಬೇಡವೆಂದು ಎಲ್ಲವನ್ನೂ 6 ಮಾಡುತ್ತಿದ್ದೇವೆ. ಇನ್ನೂ ಸಂಖ್ಯೆ ಜಾಸ್ತಿಯಾಗದು.

ಶಾಂತಕುಮಾರ, ಚಳ್ಳಕೆರೆ.- ನಾವ್ಯಾರು ಬಸವಾಯತರಲ್ಲ, ಹಾಗೆ ಬರೆಯುವುದು ತಪ್ಪು ಎಂದು ಪಂಚಪೀಠದವರು ತಮ್ಮ ಭಕ್ತರಿಗೆ ಅಪ್ಪಣೆ ಕೊಡಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದಕ್ಕೆ ತಮ್ಮ ಪ್ರತಿಕ್ರಿಯೆ ಏನು ?

★ ಅವರ ಪ್ರಕಟಣೆ ಸರಿಯಾಗಿದೆ, ಅಭಿನಂದನಾರ್ಹವಾಗಿದೆ. ವೀರಶೈವ ಎಂದರೆ ಪ್ರಾಥಮಿಕ ಶಿಕ್ಷಣದಂತೆ; ಲಿಂಗಾಯತ ಎಂದರೆ ಕಾಲೇಜು ಶಿಕ್ಷಣದಂತೆ, ಬಸವಾಯತ ಎಂಬುದು ಸ್ನಾತಕೋತ್ತರ ಪದವಿಯಂತೆ. ಏಕದೇವೋಪಾಸಕನು, ಸಮತಾವಾದಿಯೂ ಆಗಿ ಉನ್ನತ ವ್ಯಕ್ತಿತ್ವ-ಆಚಾರಣೆ ಹೊಂದಿದವನು ಬಸವಾಯತ ಪ್ರಾಥಮಿಕ ಶಿಕ್ಷಣದಲ್ಲೇ ತೇರ್ಗಡೆ ಆಗದವನು ಎಂ.ಎ ಎಂದು ಹೇಗೆ ಬರೆದುಕೊಳ್ಳಲು ಸಾಧ್ಯ? ಬಸವಾಯತ ಎಂದು ಬರೆದುಕೊಳ್ಳಲು ನಾವು ಒಪ್ಪಿಗೆ ಕೊಟ್ಟಿರುವುದು ಶುದ್ಧ ಬಸವ ಪಥಿಕರಿಗಿತ ಮಾತ್ರ. ಅರ್ಹತೆ ಇಲ್ಲದ ಅವರು ಬರೆದುಕೊಂಡರೆ ಅದು ಖಂಡನಾರ್ಹ

ಪ್ರಭುದೇವ ಕಪ್ಪರದ, ಬಸವ ಗಂಗೋತ್ರಿ.- ಲಿಂಗಾಯತ ಎಂಬುದನ್ನು ಧರ್ಮ ಕಾಲಂದಲ್ಲಿ ಬರೆದರೆ ಜಾತಿಯ ಕಾಲಂದಲ್ಲಿ ಬಸವಾಯತ ಎಂದು ಬರೆಯಬೇಕು ಎಂದು ಶರಣಮೇಳದಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಇದರ ಅರ್ಥವೇನು? ಬಸವಾಯತ ಒಂದು ಉಪಜಾತಿಯೆ? ಸ್ಪಷ್ಟೀಕರಿಸಿ

★ ಜಾತಿ ರಹಿತ, ಧರ್ಮ ಸಹಿತ ವ್ಯವಸ್ಥೆಗೆ ಇದೊಂದು ಮಹತ್ವದ ಸೂತ್ರ. ಬಸವ ಪಥದಲ್ಲಿ ಪ್ರಾಮಾಣಿಕವಾಗಿ ನಡೆಯುವವರು ಬಣಜಿಗ, ಪಂಚಮಸಾಲೆ, ರೆಡ್ಡಿ, ಸಾಧು, ನೇಕಾರ ಮುಂತಾಗಿ ಬರೆದುಕೊಳ್ಳಲು ಇಚ್ಛಿಸುವುದಿಲ್ಲ. ಲಿಂಗಾಯತರಲ್ಲಿ ಉದಾತ್ತವಾದ ಸಮಾನತೆಯನ್ನು ಒಪ್ಪುವವರು ಹೀಗೆ ಬರೆದುಕೊಳ್ಳಬೇಕು. ಎಲ್ಲರಿಗೂ ದೀಕ್ಷೆ ನೀಡುವ ಈ ಧರ್ಮಕ್ಕೆ ದೀಕ್ಷೆಯ ಮೂಲಕ x ಜಾತಿಯ ಹುಡುಗ, y ಜಾತಿಯ ಹುಡುಗಿ ಸೇರ್ಪಡೆಯಾಗುತ್ತಾರೆ ಎಂದುಕೊಳ್ಳೋಣ. ದೀಕ್ಷಾ ನಂತರ ಅವರು x ಬರೆಸಬೇಕೋ y ಬರೆಸಬೇಕೋ ? ಅವರಿಗೆ ಹುಟ್ಟುವ ಮಕ್ಕಳು ಏನೆಂದು ಬರೆಸಬೇಕು ? ಬಸವಾಯತ ಎಂದು ಬರೆದರೆ ಸಮಸ್ಯೆ ಪರಿಹಾರವಾಗುವುದಿಲ್ಲವೆ ? ಬಣಜಿಗ, ಸಾಧು, ರೆಡ್ಡಿ ಎಂಬ ಭೇದವಿರದ ಶರಣ ಸಮಾಜದ ಸದಸ್ಯನ ಹೆಸರೇ ಬಸವಾಯತ. ಎಷ್ಟು ಸಮಗ್ರ ಮತ್ತು ಸುಂದರ ಪರಿಕಲ್ಪನೆಯಲ್ಲವೆ ?

ಭಕ್ತಿ ಪಾಪಡೆ, ಕೋಳಾರ, ಬೀದರ್.- ಬಸವ ಗುರುಸ್ತುತಯಲ್ಲಿ ಸತಿಯಳನ್ನೆ ತಾಯಿ ಎಂದ ನಿಜ ವಿರಕ್ತ ಬಸವಗುರು ಎಂದು ಕೊಂಡಾಡಿದ್ದೀರಿ. ಆದರೆ ಶರಣು ಶರಣಾರ್ಥಿಯಲ್ಲಿ ಬಾಲ ಸಂಗಯ್ಯ ಧರ್ಮಪಿತ ಬಸವಣ್ಣನವರ ಮಗ ಎಂದಿದ್ದೀರಿ. ಇದು ಹೇಗೆ ?

★ ಒಂದು ಮಗು ಆಗುವವರೆಗೂ ದಾಂಪತ್ಯ ಜೀವನದಲ್ಲಿದ್ದ ಧರ್ಮಪಿತರು ನಂತರ ಬ್ರಹ್ಮಚರ್ಯ, ವೈರಾಗ್ಯ ವ್ರತ ತೊಟ್ಟರು. ನಂತರ ಪತ್ನಿಯನ್ನು ತಾಯಿ ಎಂದೇ ಭಾವಿಸಿದರು. ಮಗು

ಬಾಲ ಸಂಗಯ್ಯ ಬೇಗನೆ ಲಿಂಗೈಕ್ಯನಾದರೂ ತಾವು ತೊಟ್ಟ ವ್ರತ ಮುರಿದು, ಮಕ್ಕಳನ್ನು ಪಡೆಯಲು ಎಳಸಲಿಲ್ಲ. ಅವರ ಆ ಸಂಯಮ ನೋಡಿ ಬೆರಗಾಗಿ ಅಲ್ಲಮ ಪ್ರಭುದೇವರು ಹೇಗೆ ಉದ್ಗರಿಸುತ್ತಾರೆ:

ಸತಿಯ ಹಿಡಿದು ವ್ರತಿಯಾದ ಬಸವಣ್ಣ
ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ
ಬ್ರಹ್ಮಚಾರಿಯಾಗಿ ಭವಗೆಟ್ಟ ಬಸವಣ್ಣ
ಗುಹೇಶ್ವರ ಲಿಂಗದಲ್ಲಿ ಬ್ರಹ್ಮಚಾರಿ ಬಸವಣ್ಣನೊಬ್ಬನೆ !

ಸತಿಯನ್ನು ಹೊಂದದೆ ಸಂಯಮಿಗಳಾಗಿದ್ದ ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮೇಶ್ವರರು, ಪತ್ನಿಗೆ ಅಗ್ಗಳ ಚೆಲುವೆ ನೀಲಲೋಚನೆಯನ್ನು ಹೊಂದಿದ್ದು ಸಹ ಬ್ರಹ್ಮಚಾರಿಯಾದ ಬಸವಣ್ಣನವರನ್ನು ಬೆರಗಾಗಿ ಸ್ತುತಿಸುವುದು ಇದಕ್ಕಾಗಿಯೇ.

ಸಂಧ್ಯಾ, ಬಿ.ಆರ್, ಭದ್ರಾವತಿ.- ಧರ್ಮಪಿತರನ್ನು ವಿಶ್ವಗುರು ಎನ್ನುತ್ತೀರಿ. ಒಂದೇ ವಿಶ್ವ ಅದಕ್ಕೆ ಅವರು ಗುರು ಎಂದು ಭಾವಿಸೋಣ. ಆಗ ನೀವು ಜಗದ್ಗುರು ಎಂದು ಬರೆದುಕೊಳ್ಳುವುದು ಸರಿಯಾಗುವುದೆ ?

★ ಜಗತ್ತು ಎಂದರೆ ನಾವು ವಾಸಿಸುವ ಪೃಥ್ವಿ, ಇಲ್ಲಿ 6 ಖಂಡಗಳಿವೆ. ನಮ್ಮ ಪುರಾಣಗಳ ಪ್ರಕಾರ ನವಖಂಡಗಳು. ಇಲ್ಲೀಗ 7 ಸ್ವತಂತ್ರ ಧರ್ಮಗಳಿವೆ. ವೈದಿಕ-ಹಿಂದು, ಜೈನ, ಬೌದ್ಧ, ಯಹೂದಿ, ಕ್ರೈಸ್ತ ಪಾರ್ಸಿ, ಇಸ್ಲಾಂ, ಲಿಂಗಾಯತ. ಸಿಖ್. ಇನ್ನೂಳಿದವು ಮತ-ಪಂಥಗಳು. ಈ ಎಲ್ಲ ಧರ್ಮಾನುಯಾಯಿಗಳಲ್ಲಿ ಸಧ್ಯ ಮಹಿಳಾ ಜಗದ್ಗುರುವಾಗಿರುವುದು ನಾವೇ! ಆದ್ದರಿಂದ ಮಹಿಳಾ ಜಗದ್ಗುರು ಎಂಬ ಪದ ಸೂಕ್ತವಾಗಿ ಅನ್ವಯಿಸುವುದು. ವಿಶ್ವ ಎಂದರೆ cosmos ಬ್ರಹ್ಮಾಂಡ. ಬಸವಣ್ಣನವರ ವ್ಯಾಪ್ತಿ ಇನ್ನೂ ದೊಡ್ಡದು. ಅವರ ಸಂದೇಶ ಸೀಮಾತೀತ. ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು ಹೇಳುವರು :

ಆದಿಯಲ್ಲಿ ಬಸವಣ್ಣನುತ್ಪತ್ತಿಯಾದ ಕಾರಣ,
ನಾಗಲೋಕದ ನಾಗಗಣಂಗಳಿಗೆಯೂ ಬಸವಣ್ಣನ ಪ್ರಸಾದ
ಮರ್ತ್ಯಲೋಕದ ಮಹಾಗಣಂಗಳಿಗೆಯೂ ಬಸವಣ್ಣನ ಪ್ರಸಾದ
ದೇವಲೋಕದ ದೇವ ಗಣಂಗಳಿಗೆಯೂ ಬಸವಣ್ಣನ ಪ್ರಸಾದ
ಗುಹೇಶ್ವರಾ, ನಿಮ್ಮಾಣೆ
ಎನಗೆಯೂ ನಿನಗೆಯೂ ಬಸವಣ್ಣನ ಪ್ರಸಾದ

ಜಗದ್ಗುರು ಪದವನ್ನು ಎಲ್ಲರೂ ಬಳಸಿ ಸವಕಳಿಯಾಗಿದೆ. ಅದಕ್ಕೇ ನಾವು ಧರ್ಮಪಿತರನ್ನು ವಿಶ್ವಗುರು ಎನ್ನುತ್ತೇವೆ. ಆಗಲೇ ಅದನ್ನು ಮಾಜಿ ಸಚಿವ ಸೋಮಣ್ಣನವರು ಯಾರ್‍ಯಾರನ್ನೋ ಓಲೆ ಸಲು ಬಿರುದಾಗಿ ಬಳಸಿ ಸವಕಳಿ ಮಾಡುತ್ತಿದ್ದಾರೆ.

ವಚನ ಸುಧಾ, ಚಿತ್ರದುರ್ಗ .- ವೀರಶೈವ ಮಹಾಸಭಾಧ್ಯಕ್ಷ ಭೀಮಣ್ಣ ಖಂಡ್ರೆಯವರು ವೀರಶೈವ ಮಠಾಧಿಪತಿಗಳ ಒಕ್ಕೂಟ ಮಾಡುವುದಾಗಿಯೂ, ಕೂಡಲ ಸಂಗಮದಲ್ಲಿ ಸಾವಿರಾರು ಮಠಾಧಿಪತಿಗಳು ಸೇರುವುದಾಗಿಯೂ ಹೇಳಿಕೆ ನೀಡಿದ್ದಾರೆ. ನಮಗೆ ಒಂದು ರೀತಿಯ ಭಯವಾಗುತ್ತಿದೆ; ಇದರಲ್ಲಿ ಏನಾದರೂ ಕುತಂತ್ರವಿದೆಯೋ ಎಂದು. ಅದೇಕೆ ಕೂಡಲ ಸಂಗಮದಲ್ಲೇ ಸೇರಬೇಕು? ನಮ್ಮ ಸಂದೇಹ ಪರಿಹರಿಸಿ

★ ನಮ್ಮ ಮಠಾಧೀಶರು ಒಂದು ರೀತಿಯ ಭಯೋತ್ಪಾದಕರೇನೋ ಎಂಬಂತೆ ನೀವು ಭಾವಿಸುವುದು ನನಗೆ ನಾಚಿಕೆಯನ್ನು ಉಂಟುಮಾಡುತ್ತಿದೆ. ಪ್ರಭುದೇವರು ಹೇಳುವಂತೆ ಜಂಗಮ ತಂಗಾಳಿಯಂತೆ ಸಂಚರಿಸಬೇಕು, ಬಿರುಗಾಳಿಯಂತಲ್ಲ? ನಿಮ್ಮ ಭಯ ಅನವಶ್ಯಕ. ಕೂಡಲ ಸಂಗಮವು

ಶೈವರು ಮತ್ತು ಲಿಂಗಾಯತರು ಉಭಯತರಿಗೂ ಶ್ರದ್ಧಾಕೇಂದ್ರ. ಸಂಗಮೇಶ್ವರ ದೇವಾಲಯದಿಂದಾಗಿ ಶೈವರ ಶ್ರದ್ಧಾಕೇಂದ್ರವಾದರೆ, ಬಸವೈಕ್ಯ ಮಂಟಪದಿಂದಾಗಿ ಲಿಂಗಾಯತರ ಶ್ರದ್ಧಾಕೇಂದ್ರ. ಆದ್ದರಿಂದ ಶೈವರಾದ ಪಂಚಾಚಾರ್ಯರು, ಲಿಂಗಾಯತರಾದ ವಿರಕ್ತರು; ಇವೆರಡೂ ಅಲ್ಲದೆ ಎಡಬಿಡಂಗಿಗಳಾದ ವೀರಶೈವರು ಈ ಮೂವರೂ ಒಂದೆಡೆ ಸೇರುವುದು ಅಭಿನಂದನಾರ್ಹ. ಹೀಗೆ ಎಲ್ಲರೂ ಧರ್ಮಕ್ಷೇತ್ರ ಕೂಡಲಸಂಗಮಕ್ಕೆ ಬರುವಂತಾಗಬೇಕು ಎಂಬ ನಮ್ಮ ಆಸೆ ಹೀಗೆ ನೆರವೇರುತ್ತಿದೆ. ಅದ್ದರಿಂದ ಕಳವಳ ಬೇಡ !

ಗುರು ಬಸವ ಪ್ರಭು, ಬಳ್ಳಾರಿ.- ವೀರಶೈವ ಮಠಾಧೀಶರು ಬೆಂಗಳೂರಲ್ಲಿ(ಗುಟ್ಟಾಗಿ) ಸಭೆ ಸೇರಿದ್ದು ಪತ್ರಿಕೆಗಳ ಮೂಲಕ ತಿಳಿಯಿತು. ಇರುವ ಮಹಿಳಾ ಜಗದ್ಗುರುಗಳು ನೀವೊಬ್ಬರೆ. ನಿಮ್ಮನ್ನೇಕೆ ಆಹ್ವಾನಿಸಲಿಲ್ಲ ?

★ ನಾವು ವೀರಶೈವರಲ್ಲವಲ್ಲ; ಆದ್ದರಿಂದ ವೀರಶೈವ ಸ್ವಾಮಿಗಳ ಸಭೆಗೆ ಆಹ್ವಾನಿಸದಿರುವುದೇ ಸರಿ: ವೀರಶೈವ ಮಠಗಳು ಕುರಿತು ಓರ್ವ ವಿದ್ವಾಂಸರು ಒಂದು ಗ್ರಂಥ ಸಿದ್ಧಪಡಿಸಿದ್ದಾರೆ. ಅವರು ನಮಗೂ ಒಂದು ಪತ್ರ ಕಳಿಸಿ, ನಮ್ಮ ಮಠದ ಕಾರ್ಯವಿಸ್ತಾರದ ವಿವರ ಕೇಳಿದ್ದರು. ಸ್ವತಂತ್ರ ಧರ್ಮವಾದ ಲಿಂಗಾಯತ ಪರಂಪರೆಯ ಪೀಠ(ಮಠ) ನಮ್ಮದಾದ ಕಾರಣ ವೀರಶೈವ ಮಠಗಳ ಸಾಲಿನಲ್ಲಿ ಸೇರಲು ಇಷ್ಟವಾಗಲಿಲ್ಲ. ಆದ್ದರಿಂದ ಯಾವ ಮಾಹಿತಿಯನ್ನು ನಾನು ಕಳಿಸಲಿಲ್ಲ. ವೀರಶೈವ ಮತದ ನಂಬಿಕೆ, ಆಚರಣೆ, ವರ್ಣಾಶ್ರಮ ವ್ಯವಸ್ಥೆ ಎಲ್ಲ ಅರಿತ ಬಳಿಕ ನಾವು ವೀರಶೈವರು ಎನ್ನಲು ನಮಗೆ ನಾಚಿಕೆ ಎನಿಸುತ್ತಿದೆ. ಲಿಂಗಾಯತ ಧರ್ಮ ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ. ಬಸವಣ್ಣನವರೇ ಇದರ ಆದ್ಯರು: ವಚನ ಸಾಹಿತ್ಯವೇ ಇದರ ಧರ್ಮ ಸಂಹಿತೆ ಎಂದು ಧೃಢವಾಗಿ ಹೇಳುವ ನಮ್ಮ ವಿಚಾರಧಾರೆ, ಪ್ರಚಾರ ಕಾರ್ಯವನ್ನು ಮಂಕು ಮಾಡಬೇಕೆಂದೇ ಅನೇಕ ಮಠಾಧೀಶರು ಒಂದಾಗುತ್ತಿರುವಾಗ ಇನ್ನೂ ಅವರು ನಮ್ಮನ್ನು ಆಹ್ವಾನಿಸಬೇಕೆಂದು ಬಯಸುವ ನೀವೆಂಥಾ ದಡ್ಡರು ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಓರ್ವ ಬಸವ ಭಕ್ತ, ಊರು ಬೇಡ.- ಪ್ರವಚನದಿಂದ ನಮೂರಲ್ಲಿ ಒಳ್ಳೆಯ ಜಾಗೃತಿ ಮಾಡಿದಿರಿ. ಸಂಘಟನೆಯೂ ಚೆನ್ನಾಗಿ ಆಯಿತು. ರಾಷ್ಟ್ರೀಯ ಬಸವ ದಳವೂ ಆಗಿ, ಚೆನ್ನಾಗಿ ನಡೆಯುತ್ತಿದೆ. ಆದರೆ ಇತ್ತೀಚೆಗೆ ಒಂದು ಸಮಸ್ಯೆ ತಲೆದೋರಿದೆ. ನಮ್ಮ ರಾಷ್ಟ್ರೀಯ ಬಸವ ದಳದ ಮುಖ್ಯಸ್ಥರಲ್ಲಿ ಓರ್ವ ಗೃಹಸ್ಥ ಶರಣೆಯರೇ ಪ್ರಧಾನ. ಪ್ರಾರ್ಥನಾ ನಂತರ ಪ್ರವಚನ ಸಹ ಚೆನ್ನಾಗಿ ಹೇಳುತ್ತಾರೆ. ಆದರೆ ಅವರು ಎಲ್ಲರೂ ತಮಗೆ ಪಾದನಮಸ್ಕಾರ ಮಾಡಬೇಕೆಂದು ನಿರೀಕ್ಷಿಸುತ್ತಾರೆ. ಯಾರು ಮಾಡುವುದಿಲ್ಲವೋ ಅವರನ್ನು ಅಸಹನೆಯಿಂದ ನೋಡುತ್ತಾರೆ, ಮಾತನಾಡಿಸುವುದೇ ಇಲ್ಲ. ಇಂಥವರು ಬರಲೇ ಬಾರದು ಎಂಬಂತೆ ವರ್ತನೆ ಮಾಡುತ್ತಾರೆ. ಅವರನ್ನು ಮಾತಾಜಿ ಎಂದು ಕರೆಯಬೇಕು ಎಂದು ನಿರೀಕ್ಷಿಸುವುದೇ ಅಲ್ಲದೆ ಹಾಗೆ ಕರೆಯದೆ ಇದ್ದವರು ಮತ್ತು ಪಾದ ನಮಸ್ಕಾರ ಮಾಡದೆ ಇದ್ದವರನ್ನು ಬಹಳ ದ್ವೇಷಿಸುತ್ತಾರೆ. ವಾರದ ಪ್ರಾರ್ಥನೆ ನಮ್ಮ ಆದ್ಯ ಕರ್ತವ್ಯ ಎಂದು ಭಾವಿಸಿ ಬರುವ ಅನೇಕರು ಇಂಥವರ ವರ್ತನೆಯಿಂದ ಬಹಳ ನೊಂದು ಕೊಳ್ಳುತ್ತಿದ್ದಾರೆ. ಇದಕ್ಕೇನು ಪರಿಹಾರ? ಮಾತಾಜಿ ಎಂಬ ಪದ ಧರ್ಮಪೀಠಕ್ಕೆ ಏರಿದವರಿಗಷ್ಟೇ ಮೀಸಲಾಗಿದ್ದರೆ ಒಳ್ಳೆಯದಲ್ಲವೆ ?

★ ಈ ಸಮಸ್ಯೆಗಳು ನಿಮ್ಮ ರಾಷ್ಟ್ರೀಯ ಬಸವ ದಳದಲ್ಲಿ ಮಾತ್ರವಲ್ಲ ಇನ್ನು ಅನೇಕ ಬಸವ ದಳಗಳಲ್ಲಿ ಪ್ರಾರಂಭವಾಗಿವೆ. ಬೇರೆ ಸಂಘ-ಸಂಸ್ಥೆಗಳಲ್ಲಿ ಅಹಂ ಗಾಗಿ ಬಡಿದಾಡುವವರೇ ಬಹಳ ಜನರು ಇರುತ್ತಾರೆ. ಆದರೆ ಆಧ್ಯಾತ್ಮ ಜೀವಿಗಳ ಒಕ್ಕೂಟವಾದ ರಾಷ್ಟ್ರೀಯ ಬಸವ ದಳಗಳಲ್ಲಿ ಹೀಗಾದಾಗ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಅದನ್ನೇ ಧರ್ಮಪಿತರು ಹೀಗೆ ಹೇಳುವುದು:

ಅವರಿವರೆನ್ನದೆ ಚರಣಕ್ಕೆರಗಲು ಆಯತನವೇರಿ

ಬೆಬ್ಬನೆ ಬರಿವೆ ನಾನು; ಕೆಚ್ಚು ಬೆಳೆಯಿತ್ತಯ್ಯಾ!
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರದಂತೆ ಮಾಡು ಲಿಂಗದೇವಾ. ಬ.ವ.ದೀ - 255

ಜಂಗಮ ಒಂದು ಜಾತಿಯಾಗಿ ವಿಕೃತಗೊಂಡುದು ಇಂದು ಏನೆಲ್ಲ ಅನಾಹುತಗಳಿಗೆ ಕಾರಣವಾಗಿದೆ. ಅದೇ ರೀತಿ ಈ ತಾತ್ವಿಕ ಜಂಗಮ ರೂ ಪುನಃ ಪ್ರತಿಷ್ಠೆ ಬೆಳೆಸಿಕೊಳ್ಳುತ್ತಿರುವುದು ವಿಷಾದನೀಯ. ಈ ಕಾರಣದಿಂದಲೇ ನಾನು ಪಾದ ನಮಸ್ಕಾರವನ್ನೇ ನಿಷೇಧಿಸಿ, ಬರೀ ಶರಣು ಶರಣಾರ್ಥಿ ಎಂದು ಕೈಮುಗಿಯುವ ಪದ್ಧತಿ ಬೆಳೆಸೋಣ ಎಂದುಕೊಂಡೆ. ಇದು ಸಾಧ್ಯವಾಗುತ್ತಿಲ್ಲ. ಲಿಂಗದೇವ ನನ್ನು ಅಳವಡಿಸಿಕೊಂಡವರು ಸಹ ಪಾದನಮಸ್ಕಾರ ನಿಷೇಧ ಬೇಡ ಎನ್ನುತ್ತಾರೆ. ರಾಷ್ಟ್ರೀಯ ಬಸವ ದಳ ನಡೆಸುವವರು ವಿನಯ ಪೂರ್ಣರೂ, ವಿಶಾಲ ಹೃದಯಿಗಳು, ಎಲ್ಲರನ್ನೂ ಆದರಿಸುವವರು, ಯಾರಾದರೂ ಕ್ಷುಲ್ಲಕ ಮಾತುಗಳಿಂದ ಮನ ನೋಯಿಸಿದರೂ ಅದನ್ನು ತಡೆದುಕೊಂಡು, ಪುನಃ ಅವರನ್ನು ಆದರಿಸಿ ಮನ ಪರಿವರ್ತನೆ ಮಾಡುವವರಾಗಬೇಕು. ಏನು ಮಾಡುವುದು, ಮಾನವನ ದೌರ್ಬಲ್ಯ ಹಲವು ಬಗೆಯಲ್ಲಿ ಕಾಡಿ, ವ್ಯಕ್ತಿಯನ್ನು ಹಾಳು ಮಾಡುತ್ತದೆ! ಮಾತಾಜಿ ಎಂದು ನೀವು ಕರೆದುಕೊಳ್ಳಬೇಡಿ ಎಂದು ನಾವು ಹೇಳಿದರೆ ಅದು ನಮ್ಮ ಸಣ್ಣತನವಾಗುತ್ತದೆ. ಆವರಾಗಿ ನನ್ನನ್ನು ಹಾಗೆ ಕರೆಯಬೇಡಿರಿ; ಗುರುಗಳಿಗೆ ಅದನ್ನು ಕಾಯ್ದಿಡೋಣಾ ಎಂದರೆ ಅದು ಅವರ ದೊಡ್ಡತನವಾಗುತ್ತದೆ. ಆ ತಿಳುವಳಿಕೆ ಬರಲಿ ಎಂದು ಹಾರೈಸೋಣಾ.

ವೆಂಕನಗೌಡ ಸಣ್ಣಸಕ್ಕರಗೌಡ್ರ, ಮೂಡಲಗೇರಿ .- ನಾನೀಗ ಪಿಹೆಚ್. ಡಿ ಮಾಡುತ್ತಿದ್ದೇನೆ. ನೀವು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಅಪಾರ; ಧಾರ್ಮಿಕ ರಂಗದಲ್ಲಿ ಮಾಡಿರುವ ಕ್ರಾಂತಿ ಅಪೂರ್ವ ಅದಕ್ಕಾಗಿ ನನ್ನ ಸಂಶೋಧನಾ ಪ್ರಬಂಧಕ್ಕೆ ಮಾತೆ ಮಹಾದೇವಿಯವರ ವ್ಯಕ್ತಿತ್ವ ಹಾಗೂ ಲಿಂಗಾಯತ ಧರ್ಮಕ್ಕೆ ಅವರ ಕೊಡುಗೆ ಎಂಬ ವಿಷಯ ಆರಿಸಿಕೊಳ್ಳಬಯಸಿ ಹಲವು ಮಾರ್ಗದರ್ಶಿಗಳನ್ನು (Guides) ಕೇಳಿದೆ. ಯಾರೂ ಒಪ್ಪಲಿಲ್ಲ. ಬಹಳ ನಿರಾಶೆಯಾಯಿತು. ಬೇರೆ ವಿಷಯ ಆರಿಸಿಕೊಂಡು ಪಿಹೆಚ್. ಡಿ ಮಾಡುತ್ತಿದ್ದೇನೆ ! ಹೀಗೇಕೆ ಅವರು ನಿರಾಕರಿಸಿದರು ?

★ ರಾಗ-ದ್ವೇಷಗಳಿಂದ ದೂರವಿರಬೇಕಾದ ಮಠಾಧೀಶರೇ ನಮ್ಮನ್ನು ಕಂಡು ಮತ್ಸರದಿಂದ ಕುದಿಯುವಾಗ ಇನ್ನು ಸಾಮಾನ್ಯ ಸಾಹಿತಿಗಳು ಮತ್ತು ವಿಶ್ವವಿದ್ಯಾಲಯಗಳ ವಿದ್ವಾಂಸರ ಪಾಡೇನು! ಸತ್ತ ಎಮ್ಮೆಗೆ ಸೇರು ತುಪ್ಪ ಎಂಬಂತೆ ಮಹಾತ್ಮರು, ಪ್ರತಿಭಾವಂತರನ್ನು ಸತ್ತ ನಂತರವೇ ಗುರುತಿಸಿ ಸಾಹಿತಿಗಳು ಅಧ್ಯಯನ, ಸಂಶೋಧನೆ ಮಾಡುವುದು. ನಮ್ಮ ದೇಶದಲ್ಲಿ ಗುಣ ಗ್ರಾಹಕತ್ವ ಎಂಬುದು ಬಹಳ ಕಡಿಮೆ ಎಂದೇ ಅನೇಕರು ವಿದೇಶಗಳಿಗೆ ಹೋಗಿ ತಮ್ಮ ಪ್ರತಿಭೆಯ ಸದುಪಯೋಗ ಪಡೆದುಕೊಳ್ಳುವುದು.

ವೆಂಕನಗೌಡ, ಮೂಡಲಗೇರಿ.- ವೇದ-ಶಾಸ್ತ್ರ-ಗೀತೆ ಮುಂತಾದುವನ್ನು ತಿಳಿಯಲು ಗುರುಬೇಕು. ಅದನ್ನು ತಿಳಿದರೂ ಗುರುವಿನಿಂದ ದೀಕ್ಷೆ ಪ್ರಾಪ್ತಿಯಾಗದಿದ್ದರೆ ಮೋಕ್ಷವಿಲ್ಲ ಎನ್ನುವರು. ಇದು ಸರಿಯೆ ?

★ ಯಾವುದೇ ತತ್ತ್ವಶಾಸ್ತ್ರ-ಸಿದ್ಧಾಂತ ತಿಳಿಯಲು ಗುರುಬೇಕು. ಆಗ ಮಾತ್ರ ಕ್ರಮಬದ್ಧ ಅಧ್ಯಯನವಾಗುವುದು. ಆದರೆ ಮೋಕ್ಷಕ್ಕೆ ಶಾಸ್ತ್ರಜ್ಞಾನವೇನೂ ಅಗತ್ಯವಲ್ಲ, ಗುರುವಿನಿಂದ ದೀಕ್ಷಾನುಗ್ರಹ ಮಾತ್ರ ಅತ್ಯಗತ್ಯ!

ಎಸ್. ಎಂ. ನಟರಾಜ, ರಾ.ಬ.ದ, ಬಳ್ಳಾರಿ .- ವೀರಶೈವ-ಲಿಂಗಾಯತ ಬೇರೆ ಬೇರೆ ಎಂದು ನೀವು ಹೇಳುತ್ತೀರಿ. ನಿಮ್ಮನ್ನು ಟೀಕಿಸಿ, ಸಲ್ಲದ ಮಾತುಗಳನ್ನಾಡಿ (6-2-2003 ಪತ್ರಿಕೆ) ಎರಡೂ ಒಂದೇ ಎಂದು ಪಂಚಪೀಠದವರು ಹೇಳುತ್ತಾರೆ. ಲಿಂಗಾಯತ ಧರ್ಮದ ಪ್ರಕಾರ ಯಾರು ಬೇಕಾದರೂ ಗುರು, ಜಗದ್ಗುರು ಆಗಬಲ್ಲರು. ಎರಡೂ ಒಂದೇ ಆಗಿದ್ದರೆ ಹಾಗಾದರೆ ಪಂಚಪೀಠದವರು ಇತರರನ್ನು ಏಕೆ

ಜಗದ್ಗುರು ಎಂದು ಮಾನಿಸುವುದಿಲ್ಲ. ಬಸವಣ್ಣನವರು ಗುರುವಲ್ಲ, ವಿಶ್ವಗುರುವಲ್ಲ ಎಂದು ಹಳಿಯುತ್ತಾರೆ. ಹಾಗಾದರೆ ಇವರು ಬಸವಣ್ಣನವರಿಗಿಂತ ದೊಡ್ಡವರೆ ? ಬಸವಣ್ಣನವರು ಇವರ ಪೀಠದ ಭಕ್ತರಂತೆ, ತಾವಷ್ಟೇ ಗುರುಗಳಂತೆ. ಇಂಥ ಮಾತುಗಳನ್ನು ಓದಿದಾಗ ನಮಗೆ ನೋವು-ಕೋಪ ಎರಡೂ ಉಂಟಾಗುತ್ತದೆ.

★ ಶಾಂತಿ ಶಾಂತಿ: ಮೂರ್ಖರ ಮಾತಿಗೆ ಕೋಪ ಮಾಡಿಕೊಳ್ಳದೆ ನಕ್ಕು ಬಿಡಬೇಕು. ಸೂರ್ಯನ ಬೆಳಕು ನೋಡಲಾರದ ಗೂಬೆ ಸೂರ್ಯನನ್ನು ನಿಂದಿಸುತ್ತದೆ. ಸಂಗನ ಬಸವಣ್ಣನು ಎನಗೆಯೂ ಗುರು ನಿನಗೆಯೂ ಗುರು ಜಗವೆಲ್ಲಕ್ಕೂ ಗುರುಕಾಣಾ ಗುಹೇಶ್ವರ ಎಂದು ಶೂನ್ಯ ಪೀಠಾಧೀಶ, ವ್ಯೋಮಕಾಯ ಸಿದ್ಧ ಅಲ್ಲಮಪ್ರಭುಗಳು ಹೇಳುತ್ತಾರೆ. ಅವರ ಮುಂದೆ ಇವರು ಯಾವ ಗಿಡದ ತಪ್ಪಲು ? ವಿಶ್ವಗುರು ಬಸವಣ್ಣನವರ ವ್ಯಕ್ತಿತ್ವ, ಸಂದೇಶ, ಸಾಧನೆಯ ಮುಂದೆ ಇವರು ಸೂರ್ಯನ ಮುಂದೆ ಮಿಣುಕು ಹುಳಗಳಂತೆ. ಅವರ ಬಾಲಿಶ ಮಾತುಗಳಿಂದ ನಾವೇಕೆ ಕೋಪಗೊಳ್ಳಬೇಕು ? ಧರ್ಮಪಿತ ಬಸವಣ್ಣನವರು ದೇವರಿಗೆ ಭಕ್ತರು, ಜನತೆಗೆ ಗುರು ಒಂದು ಸಣ್ಣ ಮಗು ಎಲ್.ಕೆ.ಜಿ ಯಿಂದ ಯು.ಕೆ.ಜಿಗೆ ತೇರ್ಗಡೆ ಹೊಂದಿ, ಮನೆಗೆ ಬಂದಾಗ ಹೇಳಿತಂತೆ, ನಾನು ಜಾಣೆ, ನಮ್ಮ ಟೀಚರ್ ದಡ್ಡಿ. ನಾನು ಎಲ್.ಕೆ.ಜಿಯಿಂದ ಯು.ಕೆ.ಜಿಗೆ ಪಾಸಾದೆ. ನಮ್ಮ ಟೀಚರ್ ಫೇಲಾಗಿ ಅಲ್ಲೇ ಇದ್ದಾರೆ ಎಂದು. ಬಸವಣ್ಣನವರು ಕಲಿಯಲಿಕ್ಕೆ ಬಂದವರಲ್ಲ, ಕಲಿಸಲಿಕ್ಕೆ ಬಂದ ಪರಿಪೂರ್ಣಾತ್ಮರು.

ಮಾತೆ ಕಸ್ತೂರಿಯವರು, ಬಸವ ಗಂಗೋತ್ರಿ.- ಮುಸ್ಲಿಮರೊಬ್ಬರು ಕೇಳಿದರು, ನೀವು ಸಾಮೂಹಿಕ ಪ್ರಾರ್ಥನೆ ಮಾಡುವಾಗ ಕೆಲವರು ಎತ್ತರದ ವೇದಿಕೆ ಮೇಲೆ ಮತ್ತೆ ಕೆಲವರು ಕೇಳಗೆ ಕೂಡುವರು. ನಮ್ಮಲ್ಲಿ ಎಲ್ಲರೂ ಸಮಾನವಾಗಿ ನೆಲದ ಮೇಲೆ ಕೂಡ್ರುವರು. ಅಂದಾಗ ನಿಮ್ಮಲ್ಲಿ ಸಮಾನತೆ ಎಲ್ಲಿದೆ ? ಎಂದು.

★ ಮುಸ್ಲೀಮರಲ್ಲಿ ಸಾಮಾನ್ಯವಾಗಿ ಸಮಾನವಾಗಿ ಕುಳಿತರೂ ಪ್ರಾರ್ಥನೆ ಮಾಡುವ ಮುಖ್ಯಸ್ಥ ಮುಂದೆ ನಿಂತು ಮಾರ್ಗದರ್ಶನ ಮಾಡುತ್ತಾನೆ. ನಮ್ಮಲ್ಲಿ ಮತ್ತು ಕ್ರೈಸ್ತ ಧರ್ಮದಲ್ಲಿ ವೇದಿಕೆ ಮೇಲೆ ನಿಂತು ಗುರುಗಳು ಧಾರ್ಮಿಕ ವಿಧಿ ನೆರವೇರಿಸುತ್ತಾರೆ. ಇದು ಅಸಮಾನತೆಯ ದ್ಯೋತಕವಲ್ಲ ಪ್ರವಚನ ಕೇಳುವ ಜನರ ದೃಷ್ಟಿಗೆ ಗುರುಗಳು ಗೋಚರವಾಗಲೆಂದು. ಆದು ಅಸಮಾನತೆ ಯಾವಾಗ ಆಗುತ್ತದೆಂದರೆ ಯಾವುದೇ ಕಾರಣ ಹಿಡಿದು ಅಂದರೆ ಜಾತಿ, ಉದ್ಯೋಗ, ಅಂತಸ್ತು, ಸ್ತ್ರೀ-ಪುರುಷ ಭೇದದ ಆಧಾರದ ಮೇಲೆ ನೀನು ಈ ಜಾಗವನ್ನು ಏರಲಾರೆ ಎಂದಾಗ ಮಾತ್ರ. ಕೆಳಗೆ ಕುಳಿತವರೆಲ್ಲರೂ ವೇದಿಕೆ ಮೇಲೆ ಏರಲು ಹಕ್ಕು ಹೊಂದಿದ್ದಾರೆ ಎಂದಾಗ ಅದು ಸಂಪೂರ್ಣ ಸಮಾನತೆ. ರಾಷ್ಟ್ರಪತಿಗೆ ಒಂದು ಕುರ್ಚಿ, ಪ್ರಧಾನಿಗೆ ಬೇರೊಂದು, ಸಭಾಪತಿಗೆ ಇನ್ನೊಂದು ಇದು ಅಸಮಾನತೆಯಲ್ಲ, ಶಿಷ್ಟಾಚಾರ. ಒಂದು ವೇಳೆ ನೀನು ಈ ಜಾತಿಯವನು, ಆ ಉದ್ಯೋಗಿ - ಆದ್ದರಿಂದ ಇಂಥ ಕುರ್ಚಿ ಏರಲಾರೆ ಎಂದಾಗ ಅದು ಅಸಮಾನತೆ.

ಇಸ್ಲಾಂದಲ್ಲಿ ಇಂದಿಗೂ ಬಹಿರಂಗದಲ್ಲಿ ಬಂದು ಪುರುಷನ ಸಮಾನ ಪಂಕ್ತಿಯಲ್ಲಿ ನಿಂತು ಮಹಿಳೆ ನಮಾಜ್ ಮಾಡಲಾರಳು. ಲಿಂಗಾಯತ ಧರ್ಮದಲ್ಲಿ ವೇದಿಕೆಯ ಮೇಲೆ ನಿಂತು ಗುರುವಾಗಿ ಬೋಧೆ ಮಾಡಬಲ್ಲಳಲ್ಲವೆ ?

ನಿರಂಜನ, ಬೆಂಗಳೂರು.- ತತ್ತ್ವ ವಿರೋಧಿ ಆಚರಣೆಗಳಿಗಾಗಿ ಲಿಂಗಾಯತ ಸಮಾಜವನ್ನು ನಿಂದಿಸಿದರೆ ನಿಮಗೆ ಸಿಟ್ಟು ಬರುವುದೆ ?

★ ಖಂಡಿತಾ ಇಲ್ಲ; ಹಾಗೆ ನಾವು ಬೈಯುತ್ತ ಬಂದೆವು ಎಂದೇ ಆತ್ಮಾವಲೋಕನ ಮಾಡಿಕೊಂಡು ಅನೇಕ ವಚನ ಸಾಹಿತ್ಯ ದರ್ಪಣದಲ್ಲಿ ನೋಡಿಕೊಳ್ಳುತ್ತ, ತಿದ್ದಿಕೊಂಡು ಶರಣ ಪಥಿಕರಾಗುತ್ತಿದ್ದಾರೆ. ಆದರೆ, ಬೈಯ್ಯುವಾಗ ಯಾವ ಭಾಷೆಯಲ್ಲಿ ಬೈಯುತ್ತೀರಿ ಎಂಬುದು ಗಮನಾರ್ಹ. ಲಿಂಗಾಯತೇತರರಾಗಿ ಹುಟ್ಟಿ ಬಸವ ತತ್ತ್ವಕ್ಕೆ ಮಾರುಹೋಗಿ ಕೆಲವರು ಲಿಂಗಾಯತ ದೀಕ್ಷೆ

ಪಡೆಯುತ್ತಾರೆ. ಅನೇಕ ಹುಟ್ಟು ಲಿಂಗಾಯತರಿಗಿಂತಲೂ ಸ್ವಯಂ ಪ್ರೇರಣೆಯಿಂದ ದೀಕ್ಷೆ ಪಡೆದವರೇ ಶುದ್ಧ ಶರಣ ಮಾರ್ಗಿಗಳಾಗುತ್ತಾರೆ. ಆದರೆ ಕೆಲವೊಮ್ಮೆ ನೀವು ಲಿಂಗಾಯತರು, ನಿಮ್ಮ ಸಮಾಜ ಎಂದು ದೂಷಿಸಿದಾಗ ಲಿಂಗಾಯತರಿಗೆ ಸಿಟ್ಟು ಬರುತ್ತದೆ. ಅದರ ಬದಲು ನಮ್ಮ ಧರ್ಮ, ನಮ್ಮ ಸಮಾಜ ಎಷ್ಟೂ ಪರಿವರ್ತನೆ ಆಗುತ್ತಿಲ್ಲ ಎನ್ನಿರಿ, ಆಗ ನಿಮ್ಮ ಬಗ್ಗೆ ವಿಪರೀತ ಅಭಿಮಾನ ಹುಟ್ಟುವುದೇ ಅಲ್ಲದೆ ಪ್ರೀತಿಯಿಂದಲೇ ಬೈಸಿಕೊಳ್ಳುತ್ತಾರೆ. ಹೊರಗೆ ನಿಂತು ದೂಷಿಸದೆ, ಒಳಗೆ ನಿಂತು ತಿದ್ದುವುದೇ ಜಾಣತನ.

ಸರ್ವಮಂಗಳಾ, ಬೆಂಗಳೂರು.- ಜಗನ್ಮಾತಾ ಅಕ್ಕಮಹಾದೇವಿ ಬಸವಣ್ಣನವರನ್ನು ಹೊಗಳುವಾಗ ಜಂಗಮ ನಿಂದೆಯ ಸೈರಿಸ ಎನ್ನುತ್ತಾರೆ. ಇದರರ್ಥವೇನು ?

★ 1. ಜ್ಞಾನಿಗಳು, ಮಹಾತ್ಮರು, ಧರ್ಮ ಪ್ರಚಾರಕರನ್ನು ನಿಂದಿಸಿದರೆ ಅದನ್ನು ಧರ್ಮಪಿತರು ಸಹಿಸಿಕೊಳ್ಳುತ್ತಿರಲಿಲ್ಲ.

2. ಸಮಾಜವನ್ನು ಜಂಗಮ ಎಂದು ಕರೆದಿರುವ ಬಸವಣ್ಣನವರು ಧರ್ಮ ಸ್ವೀಕಾರ ಮಾಡಿದ ಶರಣರಲ್ಲಿ ಇವರು ಮೇಲು ಕುಲದವರು, ಇವರು ಕೀಳುಕುಲದವರು ಎಂದು ಜರಿದರೆ ಸಹಿಸಿಕೊಳ್ಳುತ್ತಿರಲ್ಲಿಲ್ಲ ಎಂದು ಅರ್ಥ. ಕುಲಮದದಿಂದ ಜಂಗಮರಲ್ಲಿ ಭೇದ ಮಾಡುವುದನ್ನು ತೀಕ್ಷ್ಣವಾಗಿ ಖಂಡಿಸುತ್ತಾರೆ.

ರಮೇಶ , ಗುಲಬರ್ಗಾ.- ಜಂಗಮವೆಂಬ ಶಿಕ್ಷಾಶಸ್ತ್ರದಲ್ಲಿ ಬೈದು, ಹೊಯ್ದು ರಕ್ಷಿಸು ಎಂದು ಲಿಂಗದೇವನಲ್ಲಿ ಬೇಡುವ ಬಸವಣ್ಣನವರು ಸಿಂಹಕ್ಕೊಲಿದ ಮದಕರಿಯಂತೆ ಆನು ಜಂಗಮಕ್ಕೊಲಿದೆ ಎನ್ನುತ್ತಾರೆ ಇದರರ್ಥವೇನು ?

★ ನಿಸ್ವಾರ್ಥಿಯೂ, ನಿರಾಭಾರಿಯೂ ಆದ ಜಂಗಮ ಸಮಾಜಕ್ಕೆ ಶ್ರೇಷ್ಠ ಶಿಕ್ಷಕ. ಅವನ ಉದ್ದೇಶ ಜನರ ಉದ್ಧಾರ, ಉತ್ಥಾನವೇ ಹೊರತು ದಮನವಲ್ಲ, ನಾಶವಲ್ಲ. ಆದ್ದರಿಂದ ಭಕ್ತನ ಹಿತಚಿಂತಕನಾದ ಜಂಗಮ ತಪ್ಪನ್ನು ತಿದ್ದಿದಾಗ, ಹೇಳಿದಾಗ ಕನೆಯದೆ, ವಿನಯದಿಂದ ತಿದ್ದಿಕೊಳ್ಳುವ ಬುದ್ಧಿ ಕೊಡು ಎಂದು ದೇವನಲ್ಲಿ ಪ್ರಾರ್ಥಿಸುತ್ತಾರೆ. ಹೇಗೆ ಸಿಂಹವನ್ನು ನೋಡಿ ಬಲಿಷ್ಠವಾದ ಆನೆ ಶರಣಾಗುವುದೋ ಹಾಗೆ ಎಷ್ಟೇ ದೊಡ್ಡ ಮನುಷ್ಯನಿರಲಿ ಶರಣ ಗಣಕ್ಕೆ ಶರಣಾಗಬೇಕು. ಈ ಸೂತ್ರವಾಕ್ಯಗಳನ್ನೇ ನಾನು ಈ ರೀತಿ ಬರೆದಿರುವುದು

1. ಶ್ರೀ ಗುರು ಬಸವಂಗೆ (ಗುರು) ಶರಣಾಗಿಹೆ.
2. ಲಿಂಗದೇವನಿಗೆ (ಲಿಂಗ) ಶರಣಾಗಿಹೆ.
3. ಶರಣಗಣಕ್ಕೆ (ಜಂಗಮ) ಶರಣಾಗಿಹೆ.

ಶಿವಪ್ರಸಾದ್, ಮರಿಯಪ್ಪನ ಹಳ್ಳಿ- ಮಂತ್ರಪುರುಷ ಬಸವಣ್ಣನವರು ನಮ್ಮ ಲೌಕಿಕ ಪಾರಲೌಕಿಕ ಇಷ್ಟಾರ್ಥಗಳನ್ನೆಲ್ಲ ಪೂರೈಸುವ ಮಹಾನುಭಾವರು. ನೀವು ನಿರ್ದೇಶಿಸಿದಂತೆ ನಾವು ಈಗ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಗುರು ಬಸವಣ್ಣನವರಲ್ಲೇ ನಮ್ಮ ಬೇಡಿಕೆ ಸಲ್ಲಿಸುತ್ತೇವೆ. ಅವು ಪೂರೈಸುತ್ತಿವೆ. ಹಾಗೆಯೇ ನೀವು ಬೇಡಿಕೆ ಸಲ್ಲಿಸುತ್ತೀರಾ ?

★ ನಾವು ಬೇಡಿಕೆ ಸಲ್ಲಿಸುವ ಅಗತ್ಯವಿಲ್ಲ. ಧರ್ಮಪಿತರೇ ನಮಗೆ ಒಂದಾದ ಮೇಲೆ ಒಂದು ಆದೇಶ ನೀಡಿ ಈ ಕೆಲಸ ಮಾಡಿರಿ ಎನ್ನುವರು. ಆದರಿಷ್ಟೇ ಧರ್ಮಪಿತರ ಯೋಜನೆ ಬೃಹತ್ತಾಗಿ ಇದ್ದರೂ ಅದನ್ನು ಕಾರ್ಯರೂಪಕ್ಕೆ ಇಳಿಸುವ ನಮ್ಮ ಶಕ್ತಿ ಸೀಮಿತವಾಗಿರುವುದರಿಂದ ನಿಧಾನವಾಗುತ್ತಿದೆ.

ಸಂಗಮೇಶ್, ಗಣಾಚಾರಿ ದಳ, ಬೆಂಗಳೂರು.- ನೀವು ಅದೆಷ್ಟೊಂದು ಯೋಜನೆ ಹಾಕುತ್ತೀರಿ. ನಿಮ್ಮ ಯೋಜನೆಗಳ ಬೃಹತ್ ಸ್ವರೂಪ ನೋಡಿದರೆ ನಿಮಗೆ ಯಾವುದಾದರೂ ಒಂದು ಸೂಪರ್ ಲಾಟರಿ ಹೊಡೆಯಬಾರದೆ ಎನ್ನಿಸುತ್ತದೆ.

★ ನಿಮ್ಮ ಆಲೋಚನೆ ಸರಿ. ನಮ್ಮ ಆಶ್ರಮವಾಸಿಗಳೂ ಅದನ್ನೇ ಅನ್ನುತ್ತಾರೆ. ಕೈಯಲ್ಲಿ 50ರೂ. ಇದ್ದರೆ ಐದು ಸಾವಿರ ರೂಪಾಯಿ ಯೋಜನೆ ಹಾಕುತ್ತೀರಿ ಎಂದು ನಮ್ಮ ಆತ್ಮೀಯರು ಅಂದು ಲಾಟರಿ ಟಿಕೆಟಾದರೂ ಖರೀದಿಸಿರಿ ಎನ್ನುವರು. ಆದರೆ ನಮ್ಮ ಧರ್ಮಪಿತ ಬಸವಣ್ಣನವರು ಅಡ್ಡದಾರಿಯಿಂದ ಬಂದ ಹಣ ಬೇಡ ಎನ್ನುವರು. ಆದ್ದರಿಂದ ಗುರುವಿನ ಕಾಯಕವಾದ ಬೋಧೆ ಮಾಡಿ, ಜನ ಕೊಡುವ ಕಾಣಿಕೆಯಿಂದ, ವಿಳಂಬವಾದರೂ ಚಿಂತೆಯಿಲ್ಲ ಕೆಲಸ ಮಾಡಿರಿ ಎನ್ನುವರು.

ಷಹಪುರಕರ್, ಹುಬ್ಬಳ್ಳಿ .- ನಾನು ಒಂದು (ಮಿಶ್ರ ವೀರಶೈವರ) ಧಾರ್ಮಿಕ ಸಭೆಗೆ ಹೋಗಿದೆ. ಅಂದು ಓರ್ವ ವಿರಕ್ತ ಸ್ವಾಮಿಗಳು ಆಗಮಿಸಿದ್ದರು. ಅವರು ಹೌದಪ್ಪನ ಚಾವಡಿಯಲ್ಲಿ ಹೌದಪ್ಪ, ಅಲ್ಲಪ್ಪನ ಚಾವಡಿಯಲ್ಲಿ ಅಲ್ಲಪ್ಪ ಎಂದು ಅವರವರಿಗೆ ತಕ್ಕಂತಹ ರಂಜನಿಯ ಮಾತು ಆಡುವವರು ಎಂದೇ ಎಲ್ಲರ ಅಭಿಪ್ರಾಯ. ಆದರೆ ಅಂಥವರು ಈ ಧರ್ಮ ಲಿಂಗಾಯತ, ಇದರ ಸಂಸ್ಥಾಪಕರು ಬಸವಣ್ಣನವರು ಎಂದು ಸ್ಪಷ್ಟವಾಗಿ ಹೇಳುತ್ತಲೇ ಬಸವಣ್ಣನವರ ಹೆಸರಿನಿಂದ ಸಂಸ್ಥೆ ಕಟ್ಟಿಕೊಂಡಿರುವ ಆ ಸಮಿತಿಯ ಸದಸ್ಯರಲ್ಲಿ ಕೆಲವರು ಗದ್ದಲಮಾಡಿ, ಸ್ವಾಮಿಗಳ ಮಾತನ್ನು ಮುಂದುವರಿಸಲು ಬಿಡಲಿಲ್ಲ. ಇಂಥವರು ಅವರನ್ನು ಕರೆಸಬೇಕೇಕೆ ?

★ ವೀರಶೈವ ಸಮಾಜದ ಒಂದು ವಿಶೇಷವೇನೆಂದರೆ ಇಲ್ಲಿ ನಾಯಿ ಬಾಲವನ್ನು ಅಲ್ಲಾಡಿಸದು, ಬಾಲವೇ ನಾಯಿಯನ್ನು ಅಲ್ಲಾಡಿಸುವ ಪರಿಸ್ಥಿತಿ ಇದೆ. ಗುರುಗಳ ಮಾತನ್ನು ಭಕ್ತರು ಕೇಳುವ ಬದಲು ಭಕ್ತರೇ ಗುರುಗಳನ್ನು ನಿಯಂತ್ರಿಸುತ್ತಾರೆ. ಆದ್ದರಿಂದ ಮಿಶ್ರ ವೀರಶೈವರಿಗೆ ಬೇಕಾಗುವಂತೆ ಸತ್ಯವನ್ನು ತಿರುಚಿ ಹೇಳುವವರನ್ನು ಸಭೆಗೆ ಆಹ್ವಾನಿಸುತ್ತಾರೆ. ಅಪ್ಪಿತಪ್ಪಿ ಸತ್ಯ ಹೇಳಿದರೆ ಅದು ವಿವಾದ, ವಿಷಯಾಂತರ ಎಂದು ಬಾಯಿ ಮುಚ್ಚಿಸುತ್ತಾರೆ. ಇಲ್ಲವೇ ಯಾರು ಏನಾದರೂ ಹೇಳಿಕೊಳ್ಳಲಿ ಎಂದು ಮೌನವಾಗಿ ಇರುವ ಗುರುಗಳನ್ನು ಸಾಕ್ಷಿ ಭೂತವಾಗಿ ಕೂರಿಸಿರುತ್ತಾರೆ. ಹೀಗೆ ಸತ್ಯವನ್ನು ನುಡಿಯಲು, ಕೇಳಲು, ಹೇಳಲು ಭಯಂಕರವಾಗಿ ಹೆದರುವ (ಹೆದರಿಸುವ) ಮಹನೀಯರು ಈ ವೀರಶೈವರು.

ಅನಿಕೇತನ, ಧಾರವಾಡ .- ನಿಮಗೆ ದುಡ್ಡಿನ ದಾಹ ವಿಪರೀತ. ಅದನ್ನು ಕಲ್ಯಾಣ ಕಿರಣದಲ್ಲಿ ಪ್ರಕಟವಾಗುವ ಪ್ರಕಟಣೆಗಳಲ್ಲಿ ನೋಡಬಹುದು. ಕೋಟಿಗಟ್ಟಳೆ ಹಣ ಸಂಗ್ರಹ ಮಾಡುತ್ತಿದ್ದೀರಿ. ಮುಂದೆ ಯಾರ ಪಾಲಾಗುವುದೊ ?

★ ನೀವು ಆಗಾಗ ಅನಾಮಧೇಯ ಪತ್ರಗಳನ್ನು ಬರೆಯುತ್ತಿರುತೀರಿ. ನಿಮ್ಮನ್ನು ವಿರೋಧಿ ಎಂದು ಭಾವಿಸೋಣವೆಂದರೆ ಧೈರ್ಯವಾಗಿ ಹೆಸರನ್ನು ಬರೆಯುವುದಿಲ್ಲ; ಹಿತೈಷಿ ಎಂದು ಭಾವಿಸೋಣವೆಂದರೆ ಹತ್ತಿರ ಬಂದು ಕಾರ್ಯಕಲಾಪಗಳನ್ನು ಪ್ರಾಂಜಲ ಮನಸ್ಸಿನಿಂದ ನೋಡಿ ಅರ್ಥ ಮಾಡಿಕೊಳ್ಳುವುದೂ ಇಲ್ಲ, ನಿಮ್ಮ ಉದ್ದೇಶ ಚುಚ್ಚು ಮಾತುಗಳನ್ನು ಆಡಿ ನಮ್ಮನ್ನು ನೋಯಿಸಿದರೆ ಆಗ ನಾವು ಉತ್ಸಾಹ ಕುಂದಿ ಮುಂದೆ ಸತ್ಯವನ್ನು ಪ್ರತಿಪಾದಿಸುವುದಿಲ್ಲ ಎಂಬುದಿರಬಹುದು. ಆದರೆ ನಾವು ಹಾಗೆ ಎದೆಗೆಡುವವರಲ್ಲ. ಏಕೆಂದರೆ ನಿಮ್ಮಂತೆ ಚುಚ್ಚು ಮಾತನಾಡುವವರು ನಮಗೆ ಇದ್ದರೂ, ನಮೊಡನೆ ಆತ್ಮೀಯವಾಗಿ ಒಡನಾಡಿ, ಸುಖದುಃಖಗಳಲ್ಲಿ ಭಾಗಿಗಳಾಗಿ ಹೆಗಲು ಕೊಡುವ ಸಹಸ್ರಾರು ಜನರು ಇದ್ದಾರೆ. ಬಸವ ಕಲ್ಯಾಣದಲ್ಲಿ ಜಾಗ ತೆಗೆದುಕೊಳ್ಳುವ ಪ್ರಸಂಗ ಬಂದಾಗ ನಮ್ಮ ಶರಣರು ಹಣವನ್ನು ಸಾಲವಾಗಿ ಕೊಟ್ಟುದನ್ನು ನೆನಪಿಸಿಕೊಂಡರೆ ಹೃದಯ ತುಂಬಿ ಬರುತ್ತದೆ. ಆದ್ದರಿಂದ ನಿಮ್ಮಂಥವರು ಬೈದು ಬರೆಯುವ ಪತ್ರಗಳು ಮನಸ್ಸಿಗೆ ಗಾಯವನ್ನು ಉಂಟು ಮಾಡದಂತೆ ಆತ್ಮೀಯ ಶರಣರ ನಡೆ-ನುಡಿ-ಕೃತಿಗಳು ಗುರಾಣಿಯಾಗಿ ಕೆಲಸ ಮಾಡುತ್ತವೆ. ಬಸವ ಧರ್ಮಪೀಠದಲ್ಲಿ ಇರುವ ನಿಸ್ವಾರ್ಥ ತ್ಯಾಗಿಗಳು ಅನೇಕರು. ಅವರು ಸಮರ್ಥರೂ ಅಹುದು. ಆದ್ದರಿಂದ ನಮ್ಮ ಸಂಸ್ಥೆಯ ಆಸ್ತಿಯ ಚಿಂತೆ ನಿಮಗೇಕೆ ? ಅದರ ಯೋಗಕ್ಷೇಮ ನೋಡಿಕೊಳ್ಳುವರು ಧರ್ಮಗುರು ಬಸವಣ್ಣನವರು.

ಬಸವ ಕಲ್ಯಾಣದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ

2003 ರ ಏಪ್ರಿಲ್ 18 ರಿಂದ ಮೇ 2 ರವರೆಗೆ

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. (ಬ.ವ.ದೀ. 68)

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿವರ್ಷವೂ ಬೇಸಿಗೆಯ ರಜಾ ಕಾಲದಲ್ಲಿ ಮತ್ತು ಅಕ್ಟೋಬರ್ ರಜೆಯ ಕಾಲದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟವನ್ನು ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ, 2002 ನೆಯ ಸಾಲಿನ ತರಬೇತಿ ಕಮ್ಮಟವನ್ನು ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದ ಶರಣ ಶೈಲದ ಮೇಲೆ ನಡೆಸಲಾಯಿತು. ತರಬೇತಿ ಕಮ್ಮಟವು ಅತ್ಯಂತ ಯಶಸ್ವಿಯಾಯಿತು. ಇದರಿಂದ ಪ್ರೇರಣೆಗೊಂಡ ಶರಣ ಬಂಧುಗಳು ಈ ವರ್ಷದ ಬೇಸಿಗೆ ರಜೆಯಲ್ಲೂ ಶಿಬಿರ ನಡೆಸಲು ಒತ್ತಾಯಿಸುತ್ತಿದ್ದಾರೆ. ಇದಕ್ಕಾಗಿ ತಾತ್ಕಾಲಿಕ ತಂಗುದಾಣಗಳನ್ನು ನಿರ್ಮಿಸಲಾಗುತ್ತದೆ. ಬೀದರ್, ಗುಲಬರ್ಗಾ ಜಿಲ್ಲೆಗಳವರಿಗೆ ಮಹಾರಾಷ್ಟ್ರದ ಸೊಲ್ಲಾಪುರ, ಉದಗೀರ್, ಆಂಧ್ರ ಪ್ರದೇಶದ ಹೈದ್ರಾಬಾದ್, ಜಹಿರಾಬಾದ್ ಮುಂತಾದ ಪ್ರದೇಶಗಳ ಮುಮುಕ್ಷುಗಳಿಗೆ ಭಾಗಿಗಳಾಗಲು ಸದವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಬಸವ ಕಲ್ಯಾಣದ ಪವಿತ್ರ ಶರಣ ಭೂಮಿಯಲ್ಲಿದ್ದು ಅನುಷ್ಠಾನ ಮಾಡುವ ಸದವಕಾಶ ಎಲ್ಲ ಜನರಿಗೆ ಲಭ್ಯವಾಗುತ್ತದೆ. ತರಬೇತಿ ಕಮ್ಮಟಗಳಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ತಮ್ಮ ಸಂದೇಹಗಳಿಗೆ ಸೂಕ್ತ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ.
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದೆ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ.
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ-ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಿಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಅಲ್ಲಮಪ್ರಭು ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಶರಣ. ವೀರಣ್ಣ ಕೊರ್ಲಹಳ್ಳಿ ಮುಂತಾದವರು ಭಾಗವಹಿಸಿ ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ. 18-4-2003 ರಿಂದ 2-5-2003 ರವರೆಗೆ 15 ದಿವಸಗಳ ಕಾಲ ನಡೆಯುವ ಶಿಬಿರ ಮತ್ತು ಕಲ್ಯಾಣ ಪರ್ವ ಶುಲ್ಕ ಒಬ್ಬರಿಗೆ 450 ರೂ. ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ರಿಯಾಯಿತಿಯೊಡನೆ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಆಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300 ರೂಗಳು.

ಪರವಾನಗಿಯೊಡನೆ ಉಚಿತ ಅವಕಾಶ : ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಧರ್ಮಪ್ರಚಾರ ಮತ್ತು ಸಂಘಟನೆ ಮಾಡುವ ಕಳಕಳಿಯುಳ್ಳವರು ಶಿಬಿರ ಶುಲ್ಕವನ್ನು ಕಟ್ಟಲು ಅಸಮರ್ಥರಾಗಿದ್ದರೆ ಅವರು ಮೊದಲೇ ಪತ್ರ ಬರೆದು ಉಚಿತವಾಗಿ ಭಾಗವಹಿಸಲು ಪರವಾನಗಿ ಪಡೆದುಕೊಳ್ಳಲು ಅವಕಾಶವಿದೆ. ಅಂಥವರು ಕೊಟ್ಟಿರುವ ವಿಳಾಸಗಳಿಗೆ ಪತ್ರ ಬರೆಯಬೇಕು. ಆಸಕ್ತರಾದ ಶಿಬಿರಾರ್ಥಿಗಳು ಬಡವರಿದ್ದರೆ ರಾಷ್ಟ್ರೀಯ ಬಸವ ದಳದವರು ಅವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ ತರಬೇತಿಗೆ ಒಳ್ಳೆಯ ಕಾರ್ಯಕರ್ತರನ್ನು ಆಯ್ಕೆಮಾಡಿ ಕಳಿಸಬೇಕು.

1. ಶಿಬಿರಾರ್ಥಿಗಳು ಏಪ್ರಿಲ್ 17 ರ ಸಂಜೆಯೊಳಗೆ ಅಥವಾ 18 ನೇ ತಾರೀಖು 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ - ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣಿ ಬರೆದುಕೊಳ್ಳಲು ಪುಸ್ತಕ, ಪೆನ್ನು ತಂದಿರಬೇಕು.
3. ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ಧತೆಯ ಸೇವಾ ಕಾರ್ಯದಲ್ಲಿ ತೊಡಗುವ ಭೃತ್ಯಾಚಾರಿಗಳು(ಸ್ವಯಂ ಸೇವಕರು) ಬೆಳಿಗ್ಗೆ ಮತ್ತು ರಾತ್ರಿ ಯೋಗಾಸನ, ಪೂಜೆ, ಪ್ರವಚನಗಳಲ್ಲಿ ಭಾಗವಹಿಸಿ ಉಳಿದ ಸಮಯದಲ್ಲಿ ಸೇವಾಕಾರ್ಯ ಮಾಡುವುದರಿಂದ ಅವರಿಗೆ ತರಬೇತಿ ಕಮ್ಮಟದಲ್ಲಿ ಉಚಿತ ಪ್ರವೇಶವಿದೆ. ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಲು ಸ್ವಯಂ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಸೂಚನೆ. ಪ್ರಾಥಮಿಕ ಶಾಲಾ ಹಂತದಿಂದ ಯಾವುದೇ ವಯಸ್ಸಿನ ವಿದ್ಯಾರ್ಥಿಗಳು ತರಬೇತಿ ಕಮ್ಮಟದ ಸದುಪಯೋಗ ಮಾಡಿಕೊಳ್ಳಬಹುದು.

ದಾನಿಗಳು ಮತ್ತು ರಾಷ್ಟ್ರೀಯ ಬಸವ ದಳಗಳವರಲ್ಲಿ ಕೋರಿಕೆ

ಬಸವ ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಇನ್ನೂ ಕಾಯಂ ವಸತಿ ಗೃಹ ಆಗಿಲ್ಲದೆ ಇರುವುದರಿಂದ ತಾತ್ಕಾಲಿಕವಾದ ತಂಗುದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಕೂಡಲ ಸಂಗಮದಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ಅದೇ ರೀತಿ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸಾಕಷ್ಟು ಕಟ್ಟಡಗಳಿವೆ, ಮೇಲಾಗಿ ಧಾರ್ಮಿಕ ಕಾರ್ಯಕ್ರಮಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡುವುದೇ ಅಲ್ಲದೆ ತರಕಾರಿ, ದವಸ-ಧಾನ್ಯಗಳನ್ನು ಉಚಿತವಾಗಿ ಕೊಡುವರು. ಆದರೆ ಬೀದರ್-ಗುಲಬರ್ಗಾ-ಹೈದರಾಬಾದ್, ಉದ್ಗೀರ್ ಜನರು ಬಸವ ಕಲ್ಯಾಣದಲ್ಲಿ ಶಿಬಿರ ನಡೆಸಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ದಾನಿಗಳು ಉದಾರವಾದ ಕಾಣಿಕೆಯನ್ನು ಧನ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುವ ಔದಾರ್ಯ ತೋರಬೇಕು. ಈಗಾಗಲೇ ನಮ್ಮ ಅನುಭವದಂತೆ ಆರ್ಥಿಕವಾಗಿ ದುರ್ಬಲರಾಗಿರುವ ಯುವಕ-ಯುವತಿಯರು ಧರ್ಮ ಪ್ರಚಾರ, ಸಮಾಜ ಸಂಘಟನೆ ಮಾಡುವ ಹಂಬಲದಿಂದ ದುಡಿಯಲು ಉತ್ಸುಕರಾಗಿ ಶಿಬಿರಗಳಲ್ಲಿ ಉಚಿತವಾಗಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಪ್ರವೇಶ ನಿರಾಕರಿಸಲು ನಮಗೆ ಮನಸ್ಸು ಬರದು. ಆದ್ದರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರು ಹಣವನ್ನು, ದವಸ - ಧಾನ್ಯವನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಬೇಕು.

ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಪ್ರಸಾದ (ಊಟ), ಸಂಜೆ ಚಹಾ - ಕಷಾಯ, ರಾತ್ರಿ ಊಟ - ಹೀಗೆ ಕೊಡಲಾಗುವುದು. ಒಬ್ಬೊಬ್ಬ ದಾನಿಗಳು ಒಂದು ಹೊತ್ತಿನ ಪ್ರಸಾದ ಸಿದ್ಧಪಡಿಸಲೂ ಕಾಣಿಕೆ ನೀಡಬಹುದು. ಸದ್ಯ ಆರ್ಥಿಕವಾಗಿ ನಮಗೆ ಬಹಳ ಸಂಕಷ್ಟವಿರುವುದಾದರೂ ತರಬೇತಿ ತೀರಾ ಅಗತ್ಯವಿದೆ ಎಂಬ ಕಾರಣಕ್ಕೆ ನಾವು ಕಮ್ಮಟವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಆದ ಕಾರಣ ಶರಣ ಬಂಧುಗಳು ಸಹಕರಿಸಬೇಕು.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎ : 0848-651921/652856

ರಾಷ್ಟ್ರೀಯ ಬಸವ ದಳಗಳಿಗೆ ಕರೆ

ರಾಷ್ಟ್ರೀಯ ಬಸವ ದಳದ ಪರಿಕಲ್ಪನೆ 1981 ರಲ್ಲಿಯೇ ಮೂಡಿದರೂ, ಅದಕ್ಕೊಂದು ಸಾಂಘಿಕ ರೂಪ ಬರತೊಡಗಿದ್ದು 1988 ರಿಂದ. ಆದರ್ಶವಂತ ಕಾರ್ಯಕರ್ತರನ್ನು, ಶರಣ ಪಥಿಕರನ್ನು ಹೊಂದಿರುವ ರಾಷ್ಟ್ರೀಯ ಬಸವ ದಳ ಇನ್ನು ನಮ್ಮ ನಿರೀಕ್ಷೆಗೆ ತೃಪ್ತಿ ನೀಡುವಂತೆ ಬೆಳೆದಿಲ್ಲವಾದರೂ ವಿರೋಧಿಗಳು ಹೊರಗೆ ಮತ್ಸರಪಟ್ಟರೂ ಒಳಗೆ ಮೆಚ್ಚುಗೆ ಸೂಸುವಂತೆ ಬೆಳೆದಿದೆ. ಅಧ್ಯಾತ್ಮವನ್ನು ಮೈಗೂಡಿಸಿಕೊಂಡು ಬೆಳೆಯುವ ಸಾತ್ವಿಕ ಮತ್ತು ಸಾಂಘಿಕ ಶಕ್ತಿ ಇದಾಗಿರುವುದು ಬಹುಜನರ ವಿಶ್ವಾಸ, ಮೆಚ್ಚುಗೆಗೆ ಪಾತ್ರವಾಗಿದೆ.

ಎಷ್ಟೋ ಊರುಗಳಲ್ಲಿ ರಾಷ್ಟ್ರೀಯ ಬಸವ ದಳದವರು ಸೈಟುಗಳನ್ನು ಪಡೆದುಕೊಂಡಿದ್ದಾರೆ, ಕಟ್ಟಡಗಳನ್ನು ಕಟ್ಟಿದ್ದಾರೆ. ಇದು ಬಹಳ ಅಭಿನಂದನೀಯ. ಏಕೆಂದರೆ ಬಸವ ತತ್ತವನ್ನು ಅನೇಕ ಶ್ರೀಮಂತ ಮುಂದಾಳುಗಳು, ರಾಜಕಾರಣಿಗಳು ಹಣ ಗಳಿಸುವ ಸಾಧನವಾಗಿ ಮಾಡಿಕೊಂಡ ಸಭೆ, ಸಮ್ಮೇಳನ ನಡೆಸಿದರೂ ನಡಾವಳಿಕೆಯಲ್ಲಿ ಬಸವ ತತ್ವ ಮೈಗೂಡಿಸಿಕೊಳ್ಳಲು ಇಷ್ಟಪಡುವುದಿಲ್ಲ. ಸಮಾನತೆ, ಸರಳ ಜೀವನ, ವೈಚಾರಿಕತೆ ಇವುಗಳಿಗೆ ಒತ್ತುಕೊಡುವ ಬಸವ ಪಥ ಆಡಂಬರದ ಶ್ರೀಮಂತ ಶಾಹಿಜನರಿಗೆ ಅಪಥ್ಯ ಹೀಗಾಗಿ ಹುಟ್ಟಿದಂದಿನಿಂದಲೂ ಮಧ್ಯಮ ವರ್ಗದವರು, ಕಾಯಕ ಜೀವಿಗಳು. ಶ್ರೀಸಾಮಾನ್ಯರಿಂದಲೇ ಪೋಷಿಸಲ್ಪಡುತ್ತಿರುವ ಬಸವ ಧರ್ಮವನ್ನು ಇಂದೂ ಸಹ ಕಟ್ಟುವವರು ನಿಜವಾದ ಧರ್ಮವಂತ ಶ್ರದ್ಧಾಳುಗಳು. ಇಂಥ ಜನರು ಪ್ರಾರ್ಥನೆ, ಪೂಜೆ ಮಾಡಬೇಕೆಂದರೆ ಸಂಪ್ರದಾಯವಾದಿ ಲಿಂಗಾಯತರು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರುವ ಶಿವಾಲಯಗಳು, ಬಸವಣ್ಣ ದೇವರ ಗುಡಿಗಳು ಮತ್ತು ಮಠಗಳಲ್ಲಿ ಅವಕಾಶ ಸಿಗುವುದಿಲ್ಲ. ಬಹುಪಾಲು ಅಕ್ಕನ ಬಳಗಗಳು ಬಸವಾದಿ ಪ್ರಮಥರ ತತ್ತ್ವಗಳಿಂದ ದೂರವೇ ಇದ್ದು ಪ್ರತಿಷ್ಠೆಯ ಕಣಗಳಾಗಿ ಉಳಿದು ಅಲ್ಲಿಗೆ ದೊಡ್ಡ ಬಾರ್ಡರ್ ಜರಿ ಸೀರೆ ಉಟ್ಟು, ಬಂಗಾರದ ಒಡವೆ ಜಾಸ್ತಿ ಹಾಕಿಕೊಂಡು ಬಂದವರನ್ನು ನಿರ್ಲಕ್ಷ್ಯದಿಂದ ನೋಡುವ ನೋಟಕ್ಕೆ ಹೆದರಿ ನಿಜವಾದ ಶರಣ ಮಾರ್ಗಿಗಳು ಅಲ್ಲಿಗೆ ಬರುವ ಸಾಹಸ ಮಾಡುವುದಿಲ್ಲ. ಹೀಗಾಗಿ ಅಧ್ಯಾತ್ಮಾ ಜೀವಿ ಬಸವ ಭಕ್ತರಿಗೆ ತಮ್ಮದೇ ಆದ ಒಂದು ದಿವ್ಯಾಲಯ-ಬಸವ ಮಂಟಪ ನೆಮ್ಮದಿಯಿಂದ ಪೂಜೆ - ಪ್ರಾರ್ಥನೆ ಮಾಡಲು ಬೇಕೇ ಬೇಕು. ಈ ಅವಶ್ಯಕತೆ ಅನುಸರಿಸಿ ಪ್ರತಿ ಊರುಗಳಲ್ಲೂ ಬಸವ ಮಂಟಪ ಕಟ್ಟಿ ವಾರದ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗಾರ್ಚನೆ ಇತ್ಯಾದಿ ನಡೆಸಲು ನಾವು ಕರೆಕೊಡುವುದು ಸರಿಯಷ್ಟೆ, ಕಟ್ಟಡವಿಲ್ಲದಿದ್ದರೆ ಹೋಗಲಿ ತೆಂಗಿನ ಗರಿಯ ಒಂದು ಚಪ್ಪರ ಹಾಕಿಕೊಂಡು ಅಧ್ಯಾತ್ಮಿಕ ಕಾರ್ಯಕ್ರಮ ನಡೆಸಿರಿ ಎಂದು ನಾವು ಕರೆಕೊಡುತ್ತೇವೆ.

ಈಗ ಇನ್ನೊಂದು ಸಮಸ್ಯೆ ಎದುರಾಗುತ್ತಿದೆ. ಸಾಮಾನ್ಯವಾಗಿ ರಾಷ್ಟ್ರೀಯ ಬಸವ ದಳಗಳಿಗೆ ಸ್ಥಳೀಯ ಸಂಪ್ರದಾಯಿಕ ಮಠಾಧೀಶರ ಬೆಂಬಲ ಸಿಗದು; ಹೇಗೆ ಇದನ್ನು ಒಡೆಯ ಬೇಕು. ದುರ್ಬಲಗೊಳಿಸಬೇಕು ಎಂದು ಅವರು ತಂತ್ರಗಳನ್ನು ಮಾಡುತ್ತಲೇ ಇರುತ್ತಾರೆ. ಅಂಥ ವಿರೋಧದ ಮಧ್ಯೆಯೇ ಕೆಲವರು ರಾಷ್ಟ್ರೀಯ ಬಸವ ದಳಗಳನ್ನು ಎದೆಗೆಡದೆ, ನಿಷ್ಠೆಯಿಂದ ಬೆಳೆಸಿಕೊಂಡು ಹೋಗುತ್ತಿರುವುದು ಅಭಿನಂದನೀಯ. ತೀರಾ ಅನಿವಾರ್ಯವಾಗಿರುವುದರಿಂದ ಬಸವ ಮಂಟಪಗಳನ್ನು ಕಟ್ಟಲು ಜಾಗಪಡೆಯಲು ಪ್ರಯತ್ನಿಸುವುದುಂಟು. ಕೆಲವರು ಸ್ಥಳೀಯವಾಗಿ ಪ್ರಯತ್ನಿಸಿ ಜಾಗಪಡೆದು, ಕಟ್ಟಡ ಕಟ್ಟಿಸುವರು ನಮ್ಮ ಮೇಲೆ ಯಾವುದೇ ಭಾರ ಹಾಕರು. ಮತ್ತೆ ಕೆಲವರು ಜಾಗ ಖರೀದಿಸಲು ನಮ್ಮ ಆರ್ಥಿಕ ಬೆಂಬಲ ಕೇಳುವರು, ಕಟ್ಟಡ ಕಟ್ಟಿಸಲು ಹಣ ಕೇಳುವರು. ಇದು ನಮಗೆ ಬಹಳ ಮಾನಸಿಕ ಯಾತನೆಯನ್ನು ಉಂಟುಮಾಡುತ್ತಿದೆ.

ಏಕೆಂದರೆ, ಹಾಗೆ ಕೇಳುವವರ ಉದ್ದೇಶ ಒಳ್ಳೆಯದಾಗಿದೆ. ನಮ್ಮ ಮಾತನ್ನು ಪಾಲಿಸಲೆಂದೇ ಅವರು ಬಸವ ಮಂಟಪ ಕಟ್ಟುವುದು. ನಮ್ಮಲ್ಲಿನ ನಿಷ್ಠೆ ತೊರೆದು ಹೊರಗೆ ಹೋದರೆ ರಾಷ್ಟ್ರೀಯ ಬಸವ ದಳದವರಿಗೆ ರತ್ನ ಗಂಬಳಿ ಹಾಸಿ ಸ್ವಾಗತಿಸುವವರುಂಟು, ಧರ್ಮ ಪ್ರಚಾರಕ್ಕೆ ಜೀಪು, ಕಾರು ಕೊಡಿಸುವ ಆಮಿಷ ತೋರುವವರುಂಟು. ಅನೇಕ ಬಿರುದು-ಪ್ರಶಸ್ತಿ-ಶಾಲು ಹಿಡಿದು ಕೊಡಲು ಕಾಯುತ್ತಿರುವವರುಂಟು. ಇಂಥ ಎಲ್ಲದರ ಮಧ್ಯೆ ತತ್ತ್ವನಿಷ್ಠೆ ಮೈಗೂಡಿಸಿಕೊಂಡ ನಮ್ಮ ಶರಣರಿಗೆ ಬಸವ ' ಕಟ್ಟಲು ನೆರವು ನೀಡಬೇಕಾದ್ದು ಕೇಂದ್ರ ಸಂಸ್ಥೆಯವರಾದ ನಮ್ಮ ಕರ್ತವ್ಯ. ಆದರೆ ನಮ್ಮ ಪರಿಸ್ಥಿತಿ ಹಾಸಿಕೊಂಡರೆ

ಹೊದೆಯಲು ಇಲ್ಲ; ಹೊದ್ದುಕೊಂಡರೆ ಹಾಸಿಕೊಳ್ಳಲು ಇಲ್ಲ , ಎಂಬಂತಿದೆ. ಕಲ್ಯಾಣ ಕಿರಣದಲ್ಲಿ ಬರುವ ಯಾದಿ ನೋಡಿ ನಾವೀಗ ಕೋಟಿಗಟ್ಟಳೆ ಹಣ ಸಂಗ್ರಹ ಮಾಡಿಕೊಂಡಿದ್ದೇವೆ ಎಂದು ಅನಿಕೇತನ ಎಂಬ ಅನಾಮಧೇಯ ಹೆಸರಿನಿಂದ ಆಗಾಗ ನಿಂದಿಸಿ ಪತ್ರ ಬರೆಯುವಂಥವರು ಇದ್ದಾರೆ. ಕಲ್ಯಾಣ ಕಿರಣದಲ್ಲಿ ಮುದ್ರಣವಾಗುವವು ವಾಗ್ದಾನದ ಹೆಸರುಗಳು. ಅದರಲ್ಲಿ ಕೆಲವರು ಕೊಟ್ಟು ಹೆಸರು ಹೇಳಿರುತ್ತಾರೆ. ಇನ್ನು ಕೆಲವರು ಹೆಸರು ಮುದ್ರಣವಾದ ಮೇಲೆ ನಂತರ ಕೊಡುತ್ತೆ. ಕೆಲವರು ಕೊಡುವುದೇ ಇಲ್ಲ. ನಾವು ಲಿಸ್ಟಿನಲ್ಲಿ ಇವರು ಕ್ರಿಯಾದಾನಿಗಳು, ಅವರು ಕ್ರಿಯಾದಾನಿಗಳು ಎಂದು ಕಾಣಿಸಲು ಬರುವುದೆ? ಪಾಪ! ಅನಿಕೇತನರು ಎಲ್ಲವನ್ನು ಟೋಟಲ್ ಮಾಡಿಟ್ಟುಕೊಂಡು ನಮ್ಮ ಬಳಿ ಈಗ ಕೋಟಿಗಟ್ಟಳೆ ಹಣವಿದೆ ಎಂದೇ ನಿರ್ಧರಿಸಿ ಬಿಟ್ಟಿದ್ದಾರೆ. ದಾಸೋಹಿಗಳು ಬೇರೆಬೇರೆ ಉದ್ದೇಶಕ್ಕೆ ಕೊಟ್ಟಿರುತ್ತಾರೆ. ಉದಾಹರಣೆಗೆ ಕಟ್ಟಡನಿಧಿಗೆ. ದಾನಿಗಳು ಕೊಟ್ಟ ಹಣಕ್ಕೆ ಇನ್ನಷ್ಟು ಸಂಗ್ರಹಿಸಿ ನಾವು ಕಟ್ಟಡ ಕಟ್ಟಿಸಿರುತ್ತೇವೆ. ಅಂದಾಗ ಆ ಹಣ ಹಾಗೆಯೇ ಉಳಿದಿರುವುದೆ ? ನಮಗೆ ಗೊತ್ತು, ನಾವೇನು ಎಳೆಯ ಬುದ್ದಿಯವರಲ್ಲ. ವಾಗ್ಬಾಣಗಳಿಂದ ನಮ್ಮನ್ನು ನೋಯಿಸಿದರೆ ನಿರುತ್ಸಾಹಗೊಳಿಸಿದರೆ ನಾವು ಉತ್ಸಾಹ ಕುಂದಿ ನಿಷ್ಕ್ರಿಯರಾಗುತ್ತೇವೆ ಎಂಬುದು ಅನಿಕೇತನರಂಥವರ ಉದ್ದೇಶ. ಅಂಥ ದುರ್ಬಲರೇ ನಾವಾಗಿದ್ದಿದ್ದರೆ ಬೆಂಕಿಯಲ್ಲಿ ಅರಳಿದ ಹೂವುಗಳಂತೆ ಆರಂಭದ ದಿನದಿಂದಲೂ ಅನೇಕ ಮಠಾಧೀಶರ, ರಾಜಕೀಯ ಮುಂದಾಳುಗಳ, ವೀರಶೈವ ಗಣ್ಯರ ವಿರೋಧ, ಉದಾಸೀನ, ತಿರಸ್ಕಾರ, ದ್ವೇಷಗಳ ಮಧ್ಯೆ ಮೇಲೇರಲು ಆಗುತ್ತಲೇ ಇರಲಿಲ್ಲ. ದಾನಿಗಳ ಹೆಸರನ್ನು ಮುದ್ರಿಸದೆ ಇದ್ದರೆ, ಒಂದನ್ನು ಅಕಸ್ಮಾತ್ ಮರೆತರೂ ಅವರು ಮುನಿಸಿಕೊಳ್ಳುತ್ತಾರೆ, ವಾಗ್ದಾನವನ್ನು ಕ್ರಿಯಾದಾನವಾಗಿ ಮಾಡುವುದೇ ಇಲ್ಲ.

ಇಂಥ ಸಂಕಷ್ಟದ ಮಧ್ಯದಲ್ಲೇ ಅಪ್ಪ ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ಕರುಳು ಬಸವ ಕಲ್ಯಾಣಕ್ಕೆ ನಮ್ಮನ್ನು ಕರೆಯಿತು. ಆ ಕರ್ತವ್ಯ ಪೂರೈಸಲೇ ಬೇಕು ಎಂಬುದು ಅಂತರಂಗದಲ್ಲಿ ಮೊರೆಯಿತು. ಜಾಗ ಖರೀದಿಸುವ ನಿರ್ಧಾರ ಕೈಗೊಂಡೆವಾದರೂ ಶರಣ ಬಂಧುಗಳಲ್ಲಿ ಸಾಲ ಕೇಳಬೇಕಾಯಿತು. ಪವಾಡ ಸದೃಶವಾಗಿ ಕೆಲವರು ಬಡ್ಡಿರಹಿತವಾಗಿ ಕೆಲವರು ಬಡ್ಡಿ ಸಹಿತವಾಗಿ ಅಂತೂ ಒದಗಿಸಿದ್ದಾರೆ. ಮೂರು ಮತ್ತು ಹದಿಮೂರುವರೆ ಎಕರೆ ಕೊಂಡಿದ್ದೇವೆ. ನಮ್ಮ ಶರಣರಿಗೆ ವಾಪಸ್ಸು ನಾವು ಕೊಡಲೇಬೇಕಾದ ಹೊಣೆ ಹೊತ್ತಿದ್ದೇವೆ. ಸನ್ಯಾಸಿಯಾದರೇನು, ಸಂಸಾರಿಯಾದರೇನು ಋಣ ಮುಕ್ತರಾಗಲೇಬೇಕು. ಕೆಲವರು ತಮ್ಮ ಅತ್ಯಂತ ಅಗತ್ಯಕ್ಕಾಗಿ ಇಟ್ಟುಕೊಂಡಿದ್ದ ಹಣವನ್ನೇ ಕೊಟ್ಟಿದ್ದಾರೆ. ಅದನ್ನು ವಾಪಸ್ಸು ಮಾಡಬೇಕಾದ್ದು ನಮ್ಮ ಆದ್ಯ ಕರ್ತವ್ಯವಲ್ಲವೆ ? ಸಾಲ ತೀರಿಸಲಿಕ್ಕೇ ಇನ್ನೂ ಸಮಯಬೇಕಾಗಿದೆ. ಜೊತೆಗೆ ಕೊಂಡ ಜಮೀನಿನಲ್ಲಿ ಕೆಲವು ಅತ್ಯಗತ್ಯವಾಗಿರುವ ಕೆಲಸ ಮಾಡಿಸಲೇಬೇಕಾಗಿದೆ. ಭಾವಿ ತೆಗೆಸುವುದು, ಬೋರ್ ಹಾಕಿಸುವುದು, ನೀರಿನ ಟ್ಯಾಂಕ್ ಕಟ್ಟಿಸುವುದು, ಶೌಚಾಲಯ-ಸ್ನಾನಗೃಹ, ಪಾಠಶಾಲೆ ನಿರ್ಮಾಣ ಇವೆಲ್ಲ ಅತೀವ ಅವಶ್ಯಕತೆಗಳು. ನಮ್ಮ ಮಠ ಇದೆ ಎಂದಾಗ ಬರುವ ಶರಣರ ಸಂಖ್ಯೆಯೂ ಬಹಳ, ದಾಸೋಹ ಕಾರ್ಯವೂ ಆರಂಭವಾಗಿದೆ. ಪ್ರತಿ ತಿಂಗಳಿನ ಹುಣ್ಣಿಮೆಯಂದು ವಿಶೇಷ ಕಾರ್ಯಕ್ರಮ ನಡೆಯುತ್ತಲಿದೆ. ಇಂಥ ಸನ್ನಿವೇಶದಲ್ಲಿ ನಮ್ಮ ಪ್ರಯತ್ನ ತುಂಡಾದ ಹೊದ್ದಿಕೆಯನ್ನು ಹೊದ್ದು ಕೊಂಡಂತಿದೆ. ಮುಖ ಮುಚ್ಚಿಕೊಳ್ಳಲು ಹೋದರೆ ಕಾಲು ಹೊರಗಾಗುತ್ತದೆ, ಕಾಲು ಮುಚ್ಚಿಕೊಳ್ಳಲು ಹೋದರೆ ಮುಖ ಹೊರಬರುತ್ತದೆ. ಇದೆಲ್ಲ ವಿಷಯದಲ್ಲಿ ಯಾವ ಮುಚ್ಚುಮರೆಯಿಲ್ಲ; ಬಸವ ಧರ್ಮ ಪೀಠದ ತ್ಯಾಗಳಿಗೆ, ಗಣನಾಯಕ-ನಾಯಕಿಯರಿಗೆ, ಆತ್ಮೀಯ ಭಕ್ತರಿಗೆ ಎಲ್ಲ ತಿಳಿದಿದೆ. ಅಂತೆಯೇ ನಂಬಿ, ಸಾಲವನ್ನು ಕೊಟ್ಟಿದ್ದಾರೆ. ಇಂಥ ತಾಪತ್ರಯದಲ್ಲಿ ರಾಷ್ಟ್ರೀಯ ಬಸವ ದಳಗಳವರು ಅವರವರ ಊರುಗಳಲ್ಲಿ ಜಾಗ ಕೊಳ್ಳಲು, ಬಿಲ್ಡಿಂಗ್ ಕಟ್ಟಲು ನಮ್ಮನ್ನು ಹಣ ಕೇಳಿದರೆ ಎಲ್ಲಿಂದ ತರಬೇಕು? ನಮ್ಮ ದೇಶದಲ್ಲಿ, ಸಮಾಜದಲ್ಲಿ ಒಳ್ಳೆಯ ಕಾರ್ಯಕ್ಕೆ ಕೊಡುವ ಮನಸ್ಸುಳ್ಳವರು ಬಹಳ ಜನ. ಅದನ್ನು ಪಡೆದು ಸಾರ್ಥಕ ಪಡಿಸಿಕೊಳ್ಳುವವರ ಮತ್ತು ಉತ್ತಮ ನಾಯಕರ ಕೊರತೆ ಇದೆ ಅಷ್ಟೆ; ಆದ್ದರಿಂದ ರಾಷ್ಟ್ರೀಯ ಬಸವ ದಳದ ಶರಣರು ತಮ್ಮ ಸಂಘಟನೆಯ ಸದಸ್ಯರನ್ನು ಒಟ್ಟು ಮಾಡಿಕೊಂಡು ಜನರಿಂದ ಕಾಣಿಕೆ ಸಂಗ್ರಹಿಸಬೇಕೇ

ವಿನಾ ಕೇಂದ್ರ ಸಂಸ್ಥೆಯ ಮೇಲೆ ಭಾರಹಾಕುವುದು ಸರ್ವದಾ ಸರಿಯಲ್ಲ. ನಾವು ಅದನ್ನು ಬಾಯಿಬಿಟ್ಟು ಹೇಳಲು ನಮಗೆ ಸಂಕೋಚ. ಅದಕ್ಕೇ ಪತ್ರಿಕೆ ಮುಖಾಂತರ ತಿಳಿಸುತ್ತಿದ್ದೇನೆ. ಎಲ್ಲ ರಾಷ್ಟ್ರೀಯ ಬಸವ ದಳದವರು ಕೇಳಿದರೆ ನಾವು ಎಲ್ಲಿಂದ ತರಬೇಕು ? ''ಜಾಗ ಆಯಿತು, ಕಟ್ಟಡವೂ ಆಯಿತು; ನಮಗೆ ಒಬ್ಬ ಸ್ವಾಮಿಗಳನ್ನು ಕೊಡಿರಿ'' ಎನ್ನುತ್ತಾರೆ. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಅಚ್ಚು ಹಾಕಿ! ಸ್ವಾಮಿಗಳನ್ನು ತಯಾರು ಮಾಡಲು ಬರುವುದೆ ? ಹಾಗೆ ಕೊಟ್ಟಂತಹ ವ್ಯಕ್ತಿಗಳಲ್ಲಿ ಪರಿಪೂರ್ಣತೆಯನ್ನು ಹುಡುಕಿ ''ಇವರು ಬೇಡ, ಬೇರೆಯವರನ್ನು ಕೊಡಿರಿ'' ಎನ್ನುತ್ತಾರೆ. ಹೀಗೆ ಕೊಟ್ಟಂತಹ ಓರ್ವ ಪ್ರಳಯಾಂತಕ ಕಾವಿಧಾರಿ ವಾಚಾಳಿ ಮೀರ್ ಸಾದಕನ ಕೆಲಸ ಮಾಡಿ, 15 ಲಕ್ಷ ರೂಪಾಯಿಗಳ ಬಸವ ಮಂಟಪ ಒಬ್ಬ ವ್ಯಾಪಾರಿ ಗೂಂಡಾ ಸ್ವಾಮಿಯ ಕೈಗೆ ಹೋಗಿ ಅಲ್ಲಿ ಬಸವ ತತ್ತ್ವದ ಯಾವುದೇ ಚಟುವಟಿಕೆ ನಡೆಯದೆ, ಬರೀ ಬಾಡಿಗೆಗೆ ಕೊಡುವ ಕೆಲಸ, ಕುಡುಕರು ಸೇರಿ ಆ ಹಣವನ್ನು ಹಂಚಿ ತಿನ್ನುವ ಕೆಲಸ ನಡೆಯುತ್ತಲಿದೆ. ಇದರಿಂದ ಮನೆಮನೆ, ಅಂಗಡಿ ಸುತ್ತಿ ಹಣ ಎತ್ತಿ ಬಸವ ಮಂಟಪ ಕಟ್ಟಿದ ವೃದ್ಧ ಶರಣರು ಈ ದುರಂತ ನೋಡಿ ಕಣ್ಣೀರು ಕರೆಯುತ್ತ, ನೋವು ಅನುಭವಿಸುತ್ತಿದ್ದಾರೆ. ಅಂದಾಗ ಬಸವ ಮಂಟಪ ನೋಡಿಕೊಳ್ಳಲು ಸ್ವಾಮಿಯನ್ನು ಕೊಡಿರಿ ಎಂದರೆ ಹೇಗೆ ಕೊಡುವುದು ?

ಸ್ಥಳೀಯ ಬಸವ ಮಂಟಪ ನೋಡಿಕೊಂಡು, ಸ್ಥಳೀಯ ಭಕ್ತರನ್ನು ಜಾಗೃತವಾಗಿ ಇಡುವುದಕ್ಕೆ ನಮಗೊಬ್ಬ ಸ್ವಾಮಿಗಳು ಬೇಕು ಎಂದು ನಮ್ಮ ರಾಷ್ಟ್ರೀಯ ಬಸವ ದಳಗಳ ಮುಖಂಡರು ಕೇಳುವುದರಲ್ಲಿ ಅಸಹಜತೆ ಏನೂ ಇಲ್ಲ; ಅದು ಸಹಜವಾದ ಬೇಡಿಕೆ. ಏಕೆಂದರೆ ಹಿಂದು ಸಮಾಜದ ಗರ್ಭದಲ್ಲೇ ಜನಿಸಿದ ಲಿಂಗಾಯತ ಸಮಾಜದ ಶಿಶು ಅದರ ಪಾರಂಪರಿಕ ರೋಗಗಳನ್ನು (heriditary disease) ಹೊಂದಿರುವುದು ಸಹಜ. ಹಿಂದುಗಳಲ್ಲಿ ತತ್ತ್ವನಿಷ್ಠೆ, ಏಕದೇವನಿಷ್ಠೆ ಇತ್ಯಾದಿ ಬಹು ಕಡಿಮೆ. ಆ ಪವಾಡಪುರುಷನ ಹಿಂದೆ ಅಷ್ಟುದಿನ ಸುತ್ತಿದರೆ, ಇನ್ನೊಬ್ಬ ಪವಾಡ ಪುರುಷ ಹುಟ್ಟುತ್ತಲೇ ಈತನ ಹಿಂದೆ ಅಷ್ಟು ಸುತ್ತುತ್ತಾರೆ. ಮುಸ್ಲೀಮರು, ಕ್ರೈಸ್ತರಲ್ಲಿ ಒಬ್ಬ ದೇವ, ಓರ್ವ ಧರ್ಮಗುರು ಅವರು ತಮ್ಮಪಾಡಿಗೆ ತಾವು ಒಂದು ಮಾರ್ಗದಲ್ಲಿ ಸಾಗುತ್ತಾರೆ. ಪಾಪ ಈ ಜನ ಯಾರ್‍ಯಾರ ಹಿಂದೆಯೋ ಸುತ್ತಿ ಬಸವಳಿದು ನಿಂತು, ನಂತರ ದೇವರನ್ನು ದೂಷಿಸಲು ತೊಡಗುತ್ತಾರೆ. ಇದೇ ಬುದ್ಧಿ ಬೆಳೆಸಿಕೊಂಡಿರುವ ಲಿಂಗಾಯತರನ್ನು ಸದಾ ಜಾಗೃತವಾಗಿಡಲು ಬಲೇ ಸಾಹಸ ಮಾಡಬೇಕು. ಅದಕ್ಕಾಗಿ ಗುರುಗಳು ಬೇಕು ಎಂದು ರಾಷ್ಟ್ರೀಯ ಬಸವ ದಳದವರ ಅಪೇಕ್ಷೆ ನಿಜ, ಅಷ್ಟು ಜನ ಗುರುಗಳನ್ನು ತರುವುದು ಹೇಗೆ? ಜಡವಾದ ಕಟ್ಟಡ ಕಟ್ಟುವುದು ಎಷ್ಟೋ ಸುಲಭ, ಆದರ್ಶವಂತ ಗುರುಗಳನ್ನು ಪಡೆಯುವುದು ಕಷ್ಟ ಸಾಧ್ಯ!

ಒಂದು ಊರಿನಲ್ಲಿ ಸ್ಥಳೀಯರು ಸೇರಿ ಒಂದು ಪ್ರಾರ್ಥನಾ ಮಂದಿರ ಕಟ್ಟಿದರಂತೆ, ರಾಮಕೃಷ್ಣ ಮಿಷನ್‌ದವರನ್ನು ಸ್ವೀಕರಿಸಲು ಕೇಳಿದರಂತೆ. ಆಗ ಅವರು ಹೇಳಿದರಂತೆ, ಅದಕ್ಕೆ ಸೂಕ್ತ ಸನ್ಯಾಸಿ ಸಿಕ್ಕಾಗ ಒಪ್ಪಿಸಿಕೊಳ್ಳುತ್ತೇವೆ ಎಂದು. ನಮ್ಮ ಸಮಾಜದ ಓರ್ವ ಮಠಾಧೀಶರಿದ್ದಾರೆ ಒಪ್ಪಿಸಿ ಕೊಳ್ಳಿರಿ ಎಂದು ಕೇಳುವುದಿರಲಿ, ಯಾರ ಸಂಘ-ಸಂಸ್ಥೆ ಸಿಗುತ್ತವೋ ಎಂದು ಗುಳಂ ಗುಟಕ್ ಮಾಡಲು ನಾಲಿಗೆ ಚಪ್ಪರಿಸುತ್ತಾ ಕುಳಿತಿರುತ್ತಾರೆ. ಕೊಡದಿದ್ದರೂ ನುಂಗುವ ಅಸಾಮಾನ್ಯ ಶಕ್ತಿ ಹೊಂದಿದ್ದಾರೆ.

ನಮ್ಮಲ್ಲಿ ಈಗ ಅನೇಕ ತ್ಯಾಗಿಗಳಾದ ಸ್ವಾಮಿಗಳು ಮತ್ತು ಮಾತೆಯವರುಗಳು ಇದ್ದಾರೆ. ಇವರು ಯಾರೂ ಸ್ವಾರ್ಥಿಗಳಲ್ಲ, ಸೋಮಾರಿಗಳಲ್ಲ, ವಿಷಯ ಲಂಪಟರಲ್ಲ. ಬಸವ ಕೃಪೆಯಿಂದ ಅಂಥವರು ಹೊರಬಿದ್ದು ಹೋಗಿದ್ದಾರೆ. ಆದರೆ ಈಗಿರುವ ಇವರುಗಳಲ್ಲಿ ಕೆಲವರು ಪ್ರವಚನ ಮಾಡುವ ಶಕ್ತಿ ಇದ್ದರೂ ಸಂಸ್ಥೆಯ ಹಿತದೃಷ್ಟಿಯಿಂದ ಸಂಸ್ಥೆಯ ಜವಾಬ್ದಾರಿ ಹೊರುತ್ತಿದ್ದಾರೆ. ಇನ್ನಿತರರು ಒಂದು ದಿನವೂ ಬಿಡದೆ ಪ್ರವಚನ ಕಾಯಕದಲ್ಲಿ, ಧರ್ಮ ಪ್ರಚಾರದಲ್ಲಿ ನಿರತರಾಗಿದ್ದಾರೆ. ಪ್ರವಚನವು ಒಂದು ಬಗೆಯ ಪರುಷವಿದ್ದಂತೆ. ಪರುಷವು ಹೇಗೆ ಕಬ್ಬಿಣವನ್ನು ಹೊನ್ನನ್ನಾಗಿ ಪರಿವರ್ತಿಸುವುದೋ ಹಾಗೆ ಪ್ರವಚನವು ಜನರ ಮನಸ್ಸನ್ನು ಪರಿವರ್ತಿಸುತ್ತದೆ, ಮುದಗೊಳಿಸುತ್ತದೆ, ಚೇತನಿಸುತ್ತದೆ. ಸಂಚರಿಸಿ, ಪ್ರವಚನ ಮಾಡಬೇಕಾದ ಕ್ಷೇತ್ರವು ಬಹು ವಿಶಾಲವಾಗಿದೆ. ಹೀಗೆ ಇರುವ ಕೆಲವೇ ಬೋಧಕರನ್ನು ಒಂದೊಂದು ಜಾಗದಲ್ಲಿ ಕುಳ್ಳಿರಿಸಿದರೆ

ಧರ್ಮಪ್ರಚಾರವು ಕುಂಠಿತವಾಗುತ್ತದೆ.

ಈಗ ಸದ್ಯ ನಮ್ಮ ಸಂಸ್ಥೆಗೆ ಇರುವ ಏಕೈಕ ಆದಾಯಮೂಲವೆಂದರೆ ಪ್ರವಚನ ಕಾಯಕ. ಪ್ರವಚನ ಕೇಳಿ ಜನರು ಕೊಡುವ ಕಾಣಿಕೆಯೊಂದೇ ಸಂಸ್ಥೆಯನ್ನು ನಡೆಸಲು ಮತ್ತು ಹೊಸ ಯೋಜನೆಗಳನ್ನು ಕೃತಿಗಿಳಿಸಲು ಸಾಧನ. ಅಪ್ಪಾಜಿ ಹೇಳಿ ಹೋಗಿದ್ದಾರೆ, ಪ್ರವಚನ ಒಂದು ತಪಸ್ಸು. ಯೋಗಾಭ್ಯಾಸ, ಧ್ಯಾನಗಳಲ್ಲಿ ಮಾಡುವವನಷ್ಟೇ ಆನಂದ ಹೊಂದುತ್ತಾನೆ. ಪ್ರವಚನ ತಪಸ್ಸಿನಲ್ಲಿ ಹೇಳುವವರು, ಕೇಳುವವರು ಉಭಯತರೂ ಆನಂದಿಸುವರು. ನಾನು ಆರಂಭಿಸಿದ ಈ ಕಾಯಕ ನನ್ನೊಡನೆಯೇ ಕೊನೆಗೊಳ್ಳಬಾರದು. ಅನೇಕರು ಮುಂದುವರಿಸಬೇಕು . ಹೀಗಾಗಿ ನಮ್ಮ ಸಂಸ್ಥೆಯ ಧರ್ಮ ಬೋಧಕರು ನಿರಂತರವಾಗಿ ಸಂಚರಿಸಬೇಕಾಗುತ್ತದೆ. ಒಂದೇ ಕಡೆ ಸೀಮಿತಗೊಳಿಸಿದರೆ ಅವರ ಪ್ರತಿಭೆ ಕುಂಠಿತವಾಗುವುದಲ್ಲದೆ ಧರ್ಮ ಪ್ರಚಾರ ಕಾರ್ಯವು ಕುಂಠಿತವಾಗುತ್ತದೆ.

ಆದ್ದರಿಂದ ಈ ಎಲ್ಲ ವಿವರಣೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಬಸವ ದಳದವರಿಗೆ ಕೆಲವು ಸಲಹೆ ನೀಡ ಬಯಸುತ್ತೇನೆ.

1. ಸ್ಥಳೀಯವಾಗಿ ಬಸವ ಮಂಟಪ ಕಟ್ಟುವುದು ಅತಿ ಅವಶ್ಯ.

2. ಇದಕ್ಕೆ ಸ್ಥಳೀಯವಾಗಿ ಅಥವಾ ಪರವೂರಿನ ದಾನಿಗಳಿದ್ದರೆ ಅವರಿಂದ ದೇಣಿಗೆ ಪಡೆದು ಸಾಮೂಹಿಕವಾಗಿ ಸಂಗ್ರಹಿಸಿ ಜಾಗ ಪಡೆದು, ಖರೀದಿಸಿ ಬಸವ ಮಂಟಪ ಕಟ್ಟಲು ಪ್ರಯತ್ನಿಸಬೇಕು. ಕೇಂದ್ರ ಸಂಸ್ಥೆಯಿಂದ ಮಾರ್ಗದರ್ಶನ ಪಡೆಯಬೇಕೇ ವಿನಾ ಹಣದ ನೆರವು ನಿರೀಕ್ಷಿಸಬಾರದು.

3. ಬಸವ ಮಂಟಪದ ಕಾರ್ಯಚಟುವಟಿಕೆ ನಡೆಸಲು ಸ್ಥಳೀಯವಾಗಿ ಶರಣ ಕಾರ್ಯಕರ್ತರು ತಯಾರಾಗಬೇಕು. ವಾರದ ಸಮೂಹಿಕ ಪ್ರಾರ್ಥನೆ, ಬಸವ ಜ್ಯೋತಿ, ವಿವಾಹ, ನಾಮಕರಣ, ಲಿಂಗಧಾರಣೆ, ಲಿಂಗೈಕ್ಯ ಸಂಸ್ಕಾರ ಮಾಡುವುದಲ್ಲದೆ, ವಚನಗಳ ಮೇಲೆ ಪ್ರವಚನ ಮಾಡುವುದು ಕಲಿಯಬೇಕು. ಬಾಡಿಗೆ ಕೊಟ್ಟು ಪುರಾಣಕಾರರನ್ನು ಕರೆಸಿದರೆ ಅವರು ಪುನಃ ಜನರನ್ನು ಹಾದಿ ತಪ್ಪಿಸುವರು.

3. ಪ್ರತಿ ತಿಂಗಳು 50, 25 ಹೀಗೆ ಹಣವನ್ನು ಶಕ್ತಿಯುಳ್ಳವರು ಹಾಕಿ ಮಂಟಪದ ನಿರ್ವಹಣೆಗೆ ಗೌರವ ಧನ ಕೊಟ್ಟು ವ್ಯಕ್ತಿಗಳನ್ನು ಇಡಬೇಕು. ಹಾಗೆ ಬಸವ ಮಂಟಪ ನೋಡಿಕೊಳ್ಳಲು ಇಡುವ ವ್ಯಕ್ತಿಗಳಿಗೆ ಕೇಂದ್ರ ಸಂಸ್ಥೆ ಹಣ ಕಳಿಸಲೆಂದು ನಿರೀಕ್ಷಿಸಬಾರದು.

4. ಅತಿ ಮಹತ್ವದ ಸಂಗತಿ ನೆನಪಿಡಬೇಕು. ಊರೂರಿಗೆ ಒಂದು ವಿದ್ಯುತ್ ಗ್ರಾಹಕ ಸ್ಥಾವರ ಮಾಡಿ, ವಿದ್ಯುತ್ ಉತ್ಪಾದನೆ ಮಾಡುವ ಕೇಂದ್ರವನ್ನು ನಿರ್ಲಕ್ಷಿಸಬಾರದು. ಕೇಂದ್ರ ಸಂಸ್ಥೆಯೊಂದರ ಆಧಾರವಿಲ್ಲದೆ ಎಲ್ಲ ಮಠಗಳವರು ಸ್ವತಂತ್ರರಾಗಿ ವ್ಯವಹರಿಸಿದ್ದರಿಂದ ಲಿಂಗಾಯತ ಸಮಾಜದಲ್ಲಿ ಒಳಜಗಳಗಳು ಆಗುತ್ತಿರುವುದು. ಗಿಡದ ಬುಡಕ್ಕೆ ನೀರೆರೆಯದೆ ಟೊಂಗೆಗೆ ನೀರೆರೆದಂತೆ ಆಗಿ ಅಖಂಡ ಸಮಾಜ ಬಾಡುತ್ತಿರುವುದು. ಹಾಗೆ ಸ್ಥಳೀಯ ಬಸವ ಮಂಟಪಗಳನ್ನಷ್ಟೇ ಭದ್ರಪಡಿಸುತ್ತ, ಬಸವ ಧರ್ಮ ಪೀಠ, ಶರಣ ಮೇಳ, ಕಲ್ಯಾಣ ಪರ್ವ ಕಡೆಗಣಿಸಿದರೆ ಪುನಃ ಶಿಥಿಲತೆ ಪ್ರಾಪ್ತವಾಗುವುದು.

ಲಿಂಗಾಯತ ಸಮಾಜದ ದುರ್ದೆಶೆಗೆ ಕಾರಣಗಳನ್ನು ಹುಡುಕಿ ಪರಿಹಾರ ಕಂಡುಕೊಂಡ ಬಳಿಕ ಪುನಃ ಹಳೆಯ ತಪ್ಪು ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕು. ಒಳ್ಳೆಯ ಕೆಲಸಕ್ಕೆ ದಾನಕೊಡುವ ಜನರ ಸಂಖ್ಯೆ ಕಡಿಮೆಯಿಲ್ಲ. ಆದ್ದರಿಂದ ಹಲವಾರು ಜನ ಕೂಡಿ ಹೋಗಿರಿ ಹೊಸ ಹೊಸ ಜನರನ್ನು ಕಾಣಿರಿ. ನಿಮ್ಮ ಧ್ಯೇಯೋದ್ದೇಶ ಮನವರಿಕೆ ಮಾಡಿಕೊಡಿರಿ. ಬೈದರೆ ಬೈಸಿಕೊಳ್ಳಿರಿ. ನೀವು ಸ್ವಾರ್ಥಿಗಳಲ್ಲ, ಪ್ರಯತ್ನಿಸಿದರೆ ಫಲ ಇದ್ದೇ ಇದೆ. ಮಲಗಿ ನಿದ್ರಿಸುವ ಸಿಂಹದ ಬಾಯಿಗೆ ಯಾವ ಮೃಗವು ಬಂದು ಬೀಳಲಾರದು ಎನ್ನುತ್ತದೆ ಒಂದು ಸುಭಾಷಿತ. ಪ್ರಯತ್ನವನ್ನೇ ಮಾಡದೆ ಕೇಂದ್ರ ಸಂಸ್ಥೆಯ ಮೇಲೆ ಭಾರಹಾಕಬಾರದು ಮಾತ್ರವಲ್ಲ ಈಗ ನಾವು ಶರಣ ಬಂಧುಗಳಿಂದ ಪಡೆದಿರುವ ಸಾಲವನ್ನು ವಾಪಸ್ಸು ಮಾಡಲು, ಹೊಸ ಯೋಜನೆಗಳ ಕಾರ್ಯಾಚರಣೆಗೆ ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ವಚನ ಬಲ

- ಮಾತೆ ಕಸ್ತೂರಿದೇವಿ.

ಕಾಮಿಸಿದೆನಯ್ಯಾ ಬಸವಣ್ಣನ ಭಕ್ತಿಗೆ
ಕಾಮಿಸಿದೆನಯ್ಯಾ ಬಸವಣ್ಣನ ಯುಕ್ತಿಗೆ
ಕಾಮಿಸಿದ ಕಾಮವೆ ಕೈಸಾರಿತ್ತಯ್ಯ
ಬಸವಣ್ಣನ ಕರುಣದಿಂದ, ಕಪಿಲ ಸಿದ್ಧ ಮಲ್ಲಿನಾಥಯ್ಯ.

- ಬಸವಯೋಗಿ ಸಿದ್ಧರಾಮೇಶ್ವರರು (ಸಿ.ವ.-೯೩೧)

ಧರ್ಮಪಿತ, ವಿಶ್ವಗುರು ಬಸವಣ್ಣನವರು ಜಗದ್ವಂದ್ಯರಾದುದು, ಜನಸಾಮಾನ್ಯರ ಹೃದಯದ ಭಾಗ್ಯಜ್ಯೋತಿ ಆಗಿದ್ದು ಹೇಗೆ ಮತ್ತು ಯಾವ ಬಲದಿಂದ ?! ಮುಖ್ಯವಾಗಿ ಸರಳ ಸುಂದರವಾಗಿರುವ ತಮ್ಮ ವಚನಗಳಿಂದ. ಅಪ್ಪನವರ ವಚನಗಳು ಅಂದಿಗೂ - ಇಂದಿಗೂ ಅಷ್ಟೊಂದು ಜನಪ್ರಿಯವಾಗಲೂ ಕಾರಣವೇನು ? ಅವುಗಳ ಇಂಪು, ಕಂಪು, ಪೆಂಪಿಗೆ ಜನ ಮಾರುಹೋಗುವುದು ಏಕೆ ? ಬಸವಣ್ಣನವರ ಪವಿತ್ರನಾಮವನ್ನು ಮತ್ತು ವಚನಗಳನ್ನು ಬಿಟ್ಟುಕೊಟ್ಟರೆ ''ತಮ್ಮ ರಚನೆಗಳಿಗೆ ಮಹತ್ವ ಸಿಗುವುದಿಲ್ಲ'' ಎಂದು ಭ್ರಾಂತಿಗೊಳಗಾದ ಪೂರ್ವಾಗ್ರಹ ಪೀಡಿತರು ಧರ್ಮಪಿತರ ಹಂಗಿಗೆ ಒಳಗಾಗಿರುವುದೇಕೆ ? ಅದರಲ್ಲೂ ಕೆಲವು ಮತಾಂಧರಂತೂ ಅಪ್ಪನವರ ವಚನಗಳಿಗೆ ಹೆದರಿಕೊಂಡು ನಾಶ ಮಾಡಲು ಪ್ರಯತ್ನಿಸಿದ್ದರೂ, ಅವರಿಂದ ತಪ್ಪಿಸಿಕೊಂಡು ಜನರ ಕೈಗೆ ತಲುಪಬೇಕಾದರೆ ಅವುಗಳಲ್ಲಿರುವ ಸಂಕಲ್ಪ ಶಕ್ತಿ ಯಾವುದು ? ವಚನ ಸಾಹಿತ್ಯ ಕ್ಷೇತ್ರದಲ್ಲಿ ಬಸವಣ್ಣನವರ ವಚನಗಳಿಗೆ ಅಗ್ರಪೀಠ ಸಲ್ಲುತ್ತಿರುವುದು ಏಕೆ?

ಬಸವ ವಚನ ದೀಪ್ತಿಯನ್ನು ಪಾರಾಯಣ ಮಾಡುತ್ತಾ, ಅರ್ಥವನ್ನು ಸವಿಯುತ್ತಾ, ಚಿಂತನೆಗೈಯುತ್ತಾ ಆನಂದಿಸುತ್ತಿರುವಾಗ ಮೇಲಿನ ಪ್ರಶ್ನೆಗಳು ಸಾಲಾಗಿ ಬೆನ್ನು ಹತ್ತುತ್ತವೆ. ಬುದ್ಧಿಗೆ ಸವಾಲು ಹಾಕುತ್ತವೆ. ಲೇಖನಿಗೆ ಕೆಲಸ ಕೊಡುತ್ತವೆ. ಜಡವಾಗಿದ್ದ ತನು, ಮನ, ಮತಿ, ಆತ್ಮಗಳನ್ನು ಜಾಗೃತಗೊಳಿಸಿ ಚೇತನಿಸುತ್ತವೆ. ಹೊಸ ಮನುಷ್ಯರನ್ನಾಗಿ ರೂಪಿಸುತ್ತವೆ. ಕೊನೆಗೆ ತಮ್ಮ ವಿಶಾಲವಾದ ಬಾಹುಗಳಲ್ಲಿ ಅಪ್ಪಿಕೊಂಡು, ಮಂತ್ರಮುಗ್ಧಗೊಳಿಸಿ, ತಮ್ಮವರನ್ನಾಗಿ ಮಾಡಿಕೊಂಡು ಬಿಡುತ್ತವೆ. ಅಷ್ಟೇ ಅಲ್ಲ ವಚನಗಳನ್ನು ತಲೆ ಮೇಲೆ ಇಟ್ಟುಕೊಂಡು ಕುಣಿದಾಡುವಂತೆ ಪ್ರಚೋದಿಸುತ್ತವೆ. ಲೋಕಾನುಭವದೊಂದಿಗೆ ಆತ್ಮಾನುಭವವನ್ನು ಪ್ರತಿಬಿಂಬಿಸುತ್ತವೆ.

ಶರಣ ಬಂಧುಗಳೇ, ಇಷ್ಟೆಲ್ಲ ಕೆಲಸ ಮಾಡುತ್ತಿರುವ ಧರ್ಮಪಿತರ ವಚನಗಳಲ್ಲಿ ಅಡಗಿರುವ, ಗುಪ್ತಗಾಮಿನಿಯಾಗಿ ಹರಿಯುತ್ತಿರುವ, ಅಗೋಚರವಾದ ಮಾಂತ್ರಿಕ ಶಕ್ತಿ ಯಾವುದಿರಬಹುದೆಂದು ತಮಗೆ ಮನವರಿಕೆ ಮಾಡಿಕೊಡಲು ಒಂದು ದೃಷ್ಟಾಂತವನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಬಾಲ್ಯದಲ್ಲಿ ''ರಾಬಿನ್ ಸನ್ ಕ್ರೂಸೋ'' ಎಂಬ ಒಂದು ಆಂಗ್ಲ ಚಲನ ಚಿತ್ರ ನೋಡಿದ್ದೆ. ಅದರಲ್ಲಿ ರಾಬಿನ್ ಸನ್ ಒಂದು ದೊಡ್ಡ ಹಡಗಿನಲ್ಲಿ ಕುಳಿತು ಸಮುದ್ರದ ಮಧ್ಯೆ ಪ್ರಯಾಣ ಮಾಡುತ್ತಿದ್ದಾನೆ. ಆಗ ಇದ್ದಕ್ಕಿದ್ದಂತೆ ಸಮುದ್ರದಲ್ಲಿ ಎದ್ದ ಭಯಂಕರ ಚಂಡಮಾರುತಕ್ಕೆ ಸಿಕ್ಕಿದ ಹಡಗು ಗೊತ್ತುಗುರಿ ಇಲ್ಲದೆ. ತರಗೆಲೆಯಂತೆ ಹೊಯ್ದಾಡುತ್ತಾ, ತೂರಾಡುತ್ತ ಹೋಗಿ ಒಂದು ಅಜ್ಞಾತವಾದ ದಡಕ್ಕೆ ಜೋರಾಗಿ ಅಪ್ಪಳಿಸುತ್ತದೆ. ಉಳಿದವರೆಲ್ಲರು ನೀರು ಪಾಲಾಗಿದ್ದರೂ, ಈತ ಮಾತ್ರ ಪವಾಡ ಸದೃಶ ರೀತಿಯಲ್ಲಿ ಬದುಕಿ ಉಳಿಯುತ್ತಾನೆ. ಸರ್ವಸ್ವವನ್ನೂ ಕಳೆದುಕೊಂಡಿದ್ದ ಅವನು ಬದುಕುವ ಆಸೆಯನ್ನು ಬಿಟ್ಟು, ಭಾರವಾದ ನಿಟ್ಟುಸಿರು ಬಿಡುತ್ತಾ, ಹತಾಶನಾಗಿ ಸಮುದ್ರದ ದಡದಲ್ಲಿರುವ ಮರಳಿನ ದಂಡೆಯ ಮೇಲೆ ಕುಸಿಯುತ್ತಾನೆ. ತಾನು ಕುಳಿತ ಜಾಗವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವನ ಎದೆ ನಡುಗುತ್ತದೆ ?! ಏಕೆಂದರೆ ಅದು ನರಭಕ್ಷಕರಿರುವ ಕಾಡು !! ಮುಂದಿನ ಕ್ಷಣಗಳನ್ನು ಭಯದಿಂದ ಎದುರು ನೋಡುತ್ತಾ

ಉಸಿರು ಬಿಗಿಹಿಡಿದು, ದಿಕ್ಕು ತೋಚದಂತಾಗಿ ಕಲ್ಲಿನಂತೆ ಕುಳಿತುಬಿಡುತ್ತಾನೆ. ಅದೃಷ್ಟವೆಂಬಂತೆ, ಆತನ ಪಕ್ಕದಲ್ಲೆ ಒಂದೇ ಒಂದು ಗೊದ್ದ (ಕರಿ ಬಣ್ಣದ ದೊಡ್ಡ ಜಾತಿಯ ಇರುವೆ) ಲಗುಬಗೆಯಿಂದ ಮರಳಿನ ಮೇಲೆ ಹೋಗುತ್ತಿದೆ. ಅದನ್ನು ನೋಡಿದ ಅವನು ಯೋಚಿಸುತ್ತಾನೆ. ''ಆಹಾ ! ಈ ಪುಟ್ಟ ಕೀಟ, ತಾನು ಒಂಟಿಯಾಗಿದ್ದರೂ ಯಾವುದೇ ರೀತಿಯ ಚಿಂತೆ, ಭಯ ಭ್ರಾಂತಿಗೆ ಒಳಗಾಗದೆ, ಇಂಥ ನರಕ ಸದೃಶವಾದ ಪರಿಸರದಲ್ಲಿ ಅದೆಷ್ಟು ಆತ್ಮವಿಶ್ವಾಸದಿಂದ ನಡೆದುಕೊಂಡು ಬರುತ್ತಿದೆ! ಇದರ ಮುಂದೆ ನಾನು ಕೀಳಾಗುವುದೆ ? ಕೂಡದು. ಆದರೂ ಇದರ ಉತ್ಸಾಹಕ್ಕೆ ಕಾರಣವೇನಿರಬಹುದು ? ಪರೀಕ್ಷಿಸಿ ನೋಡಬಾರದೇಕೆ ?'' ಎಂದು ಗೊದ್ದದೊಳಗೆ ಹುದುಗಿರುವ ಚೈತನ್ಯ ಶಕ್ತಿಯನ್ನು ಪರೀಕ್ಷಿಸಲು ತೊಡಗುತ್ತಾನೆ. ಚುರುಕಾಗಿ ನಡೆದು ಬರುತ್ತಿರುವ ಅದರ ಮೇಲೆ ಒಂದು ಹಿಡಿ ಮರಳನ್ನು ಸುರಿಯುತ್ತಾನೆ. ಅದು ನಿಧಾನವಾಗಿ ಮರಳನ್ನು ಕೆದಕಿಕೊಂಡು ಮೇಲೆ ಬಂದು ಬಿಡುತ್ತದೆ. ಸರಿ, ಮತ್ತೊಮ್ಮೆ ಅದೇ ರೀತಿ ಒಂದು ಬೊಗಸೆ ಮರಳನ್ನು ಅದರ ಮೇಲೆ ಸುರಿದು ಬಿಡುತ್ತಾನೆ. ಮತ್ತೆ ಅದು ಮೊದಲಿನಂತೆ ಮೇಲೆ ಬರುತ್ತದೆ. ಹೀಗೆ ೩ - ೪ ಸಾರಿ ಮಾಡುತ್ತಾನೆ. ಆದರೂ ಅದು ಸೋಲನ್ನು ಒಪ್ಪಿಕೊಳ್ಳದೆ ತನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿಕೊಂಡು, ಮತ್ತೆ ಮತ್ತೆ ಮೇಲೆ ಬಂದು ಅವನು ಒಡ್ಡಿದ ಎಲ್ಲಾ ಪರೀಕ್ಷೆಗಳಲ್ಲೂ ಗೆದ್ದು ಜಯಶಾಲಿಯಾಗುತ್ತದೆ. ಈ ಪುಟ್ಟ ಗೊದ್ದ ಕಲಿಸಿದ ಪಾಠದಿಂದ ಸ್ಫೂರ್ತಿ ಪಡೆದ ರಾಬಿನ್ ''ಇನ್ನು ನಾನು ಎಷ್ಟೆ ಕಷ್ಟ ಬಂದರೂ ಹೆದರಬಾರದು'' ಎಂಬ ದೃಢ ಸಂಕಲ್ಪದಿಂದ ಮೇಲೆದ್ದು, ಕಳೆದುಕೊಂಡಿದ್ದ ಆತ್ಮಚೈತನ್ಯವನ್ನು ಮೈಗೂಡಿಸಿಕೊಂಡು ತನ್ನಲ್ಲಿ ಮನೆಮಾಡಿದ್ದ ಹತಾಶೆಯನ್ನು ಕೊಡವಿಕೊಂಡು, ಜೀವನಾಸಕ್ತಿಯನ್ನು ತುಂಬಿಕೊಂಡು ಮುಂದಿನ ಭಯಾನಕ ದಿನಗಳನ್ನು ಎದುರಿಸಲು ಮಾನಸಿಕವಾಗಿ ಸದ್ಧನಾಗುತ್ತಾನೆ ; ದೈಹಿಕವಾಗಿ ಸಾಹಸದ ಜೀವನಕ್ಕೆ ಅಣಿಯಾಗುತ್ತಾನೆ. ನರಭಕ್ಷಕರ ಕಾಡಿನಲ್ಲಿ ಕೆಲವು ವರ್ಷ ಒಂಟಿಯಾಗಿದ್ದುಕೊಂಡೇ ಯಶಸ್ವಿಯಾಗಿ ಕಳೆದು ಕೊನೆಗೆ ಒಂದು ದಿನ ತನ್ನ ತಾಯ್ನಾಡನ್ನು ಸೇರುತ್ತಾನೆ.

ಧರ್ಮಪಿತರ ವಚನಗಳು ನೋಡಲು ೪-೫-೬ ಸಾಲುಗಳಲ್ಲಿ ಪುಟ್ಟ ಪುಟ್ಟದಾಗಿದ್ದರೂ ಅಬ್ಬಾ ! ಅದೆಷ್ಟೊಂದು ಕೆಲಸ ಮಾಡುತ್ತವೆ. ಸ್ಫೂರ್ತಿ ತುಂಬುತ್ತವೆ. ಅವು ನಮಗೆ ಹೇಳುತ್ತವೆ ''ನೋಡು, ನೀನು ಯಾವ ರೀತಿಯಲ್ಲಿಯೂ ದುರ್ಬಲ, ಅಶಕ್ತ, ಪಾಪಯೋನಿಜ ಎಂದು ಚಿಂತಿಸಬೇಡ. ಏಕೆಂದರೆ ಈ ದುರ್ಬಲತೆಗಳನ್ನೆಲ್ಲ ದಾಟಿ ಮೇಲೆರುವ ಶಕ್ತಿ ನಿನ್ನೊಳಗಿದೆ. ಹೂಂ... ಎದ್ದೇಳು, ಜಾಗೃತನಾಗು, ಪ್ರಯತ್ನಿಸು ಮುಂದಿನ ಬದುಕನ್ನು ಎದುರಿಸಲು ಸಿದ್ಧನಾಗು. ಎಂಥಾ ಪ್ರಸಂಗದಲ್ಲಿಯೂ ಸೋಲನ್ನು ಒಪ್ಪಿಕೊಳ್ಳಬೇಡ'' ಎಂದು ಜೀವನೋತ್ಸಾಹವನ್ನು ತುಂಬುತ್ತವೆ. ಇಹಕ್ಕೂ ಪರಕ್ಕೂ ಸಲ್ಲುವಂತೆ ಬಾಳಲು - ಬದುಕಲು ಕಲಿಸುತ್ತವೆ. ಭವಸಾಗರದಲ್ಲಿ ತೇಲುತ್ತಿರುವ ಈ ಶರೀರವೆಂಬ ಹಡಗನ್ನು ತಾಪತ್ರಯಗಳೆಂಬ ಚಂಡಮಾರುತಕ್ಕೆ ಸಿಕ್ಕಿದರೂ ಜರ್ಜರಿತವಾಗದಂತೆ, ಮುಳುಗದಂತೆ ಸುರಕ್ಷಿತವಾಗಿ ಎತ್ತಿ ಹಿಡಿದು ದಡ ಮುಟ್ಟಿಸುತ್ತವೆ. ಅದು ಹೇಗೆ ಎಂಬುದಕ್ಕೆ ಧರ್ಮಪಿತರ ಕೆಲವು ವಚನಗಳನ್ನು ನೋಡೋಣ.

ಕದ್ದ ಕಳ್ಳನ ಬಿಟ್ಟ ಮಂಡೆಯ ಹಿಡಿದು
ಹುಡುಕು ನೀರೊಳಗದ್ದುವಂತೆ ಮುಳುಗಲಾರೆನು
ಹಿಂಡಲಾರೆನು - ಹಿಂಗಿದೆನಯ್ಯ ಎನ್ನ ಹಾರುವ ಕುಲವನು
ಮುಳುಗುವವನ ಕೈಯ ಹಿಡಿದೆತ್ತಿದ ನಮ್ಮ ಲಿಂಗದೇವಾ. - ಬ.ವ.ದೀ - ೮೮

ಜಗತ್ತಿನಲ್ಲಿ ಎರಡು ರೀತಿಯಿಂದ ಬದುಕಲು ಸಾಧ್ಯವಿದೆ. ಒಂದು ಸಗಣಿಯ ಹುಳುವಿನಂತೆ ವ್ಯರ್ಥವಾಗಿ, ನಿರರ್ಥಕವಾಗಿ ಬರೀ ಲೋಕ ವ್ಯವಹಾರಗಳಲ್ಲಿ ಆಸಕ್ತರಾಗಿ ಜೀವನ ಕಳೆಯುವುದು, ಇನ್ನೊಂದು ಗಂಧದಂತೆ ಸಾರ್ಥಕವಾಗಿ, ಪರೋಪಕಾರಕ್ಕಾಗಿ, ಲೋಕಕಲ್ಯಾಣಕ್ಕಾಗಿ ಬದುಕನ್ನು ಸವೆಸುವುದು. ''ಇರುವಷ್ಟು ದಿನ ಹೇಗಾದರೂ ಬದುಕಿದರಾಯಿತು'' ಎಂದು ಪರಿಸ್ಥಿತಿಗಳೊಂದಿಗೆ ರಾಜಿ

ಮಾಡಿಕೊಂಡು ಬದುಕುವವರಿಗೆ ಗುರುವಾಗಲಿ, ಧರ್ಮ ತತ್ತ್ವ ಸಿದ್ಧಾಂತಗಳಾಗಲಿ ಅಥವಾ ಯಾವುದೇ ಆದರ್ಶ ಮೌಲ್ಯಗಳಾಗಲಿ ಬೇಕಾಗುವುದಿಲ್ಲ. ಆದರೆ ಬಹುಬೆಲೆ ಬಾಳುವ ಜೀವನವನ್ನು ಸಾರ್ಥಕವಾಗಿ ಕಳೆಯ ಬೇಕೆನ್ನುವವರಿಗೆ ಎಲ್ಲಿಯೂ ಆದರ್ಶ ಮತ್ತು ಸಂಪೂರ್ಣ ಸದಭಿರುಚಿಯಿಂದ ಕೂಡಿದ ಸುಂದರವಾದ ಪರಿಸರ ಎಂಬುದು ಸಿಗುವುದಿಲ್ಲ. ಅಂಥ ಪರಿಸರವನ್ನು ಹುಡುಕಿಕೊಂಡು ಜಗತ್ತು ಸುತ್ತಿದರೂ ಒಂದಲ್ಲ ಹಲವಾರು ಸಮಸ್ಯೆಗಳು ಕಾಡುತ್ತಲೇ ಇರುತ್ತವೆ. ಅಲ್ಲಿ ಸರಿಯಿಲ್ಲ ; ಇಲ್ಲಿ ಸುಖವಿಲ್ಲ ಎಂದು ಕೊಂಡು ಮತ್ತೊಂದು, ಮಗದೊಂದು ತಾಣವನ್ನು ಅರಸುವ ಪ್ರಯತ್ನಗಳಲ್ಲೆ ಸಾಧಕನ ಆಯುಷ್ಯ ಕಳೆದು ಹೋದರೆ ಇನ್ನು ಗುರಿ ಮುಟ್ಟುವುದು ಯಾವಾಗ ? ಆದ್ದರಿಂದ ಭಕ್ತನಾದವನು ಒಮ್ಮೆ ದಾರಿ ಮತ್ತು ಗುರಿಯನ್ನು ಸ್ಪಷ್ಟವಾಗಿ ಕಂಡುಕೊಂಡ ಮೇಲೆ ಸಾಧನೆಯ ಹಾದಿಯಲ್ಲಿ ಎದುರಾಗುವ ನಿರಂತರವಾದ ಸಮಸ್ಯೆಗಳನ್ನು - ಕಷ್ಟಗಳನ್ನು ಎದುರಿಸುತ್ತಾ, ಅವುಗಳ ಮಧ್ಯೆಯೇ ತನ್ನನ್ನು ತಾನು ಉಳಿಸಿಕೊಂಡು, ಆದರ್ಶಗಳನ್ನು ಬಲಿಕೊಡದೆ, ಮುಳುಗದೆ, ಹಲ್ಲುಗಳ ಮಧ್ಯೆ ನಾಲಿಗೆ ಚಾಕಚಕ್ಯತೆಯಿಂದ ತಪ್ಪಿಸಿಕೊಂಡು ಹೇಗೆ ಜೀವಿಸುತ್ತಿದೆಯೋ ಹಾಗೇ, ಬದುಕುವ ಕಲೆಯನ್ನು ರೂಢಿಸಿಕೊಳ್ಳಬೇಕು. ಯಾರೂ ತಮ್ಮ ಅಮೂಲ್ಯವಾದ ಜೀವನವನ್ನು ಹಾಳುಮಾಡಿಕೊಳ್ಳಲು ಅಥವಾ ಬೇರೆಯವರ ಸ್ವಾರ್ಥಕ್ಕೆ ಬಲಿಕೊಡಲು ಬಯಸುವುದಿಲ್ಲ. ಆದರೆ ಎಷ್ಟು ಜನ ಇದರ ಮರ್ಮವನ್ನರಿತು ಸಾರ್ಥಕವಾಗಿ ಬದುಕುತ್ತಿದ್ದಾರೆ ? ಕೆಲವೊಮ್ಮೆ ನಮ್ಮ ದುರ್ಬಲತೆಯಿಂದಾಗಿ ಬದುಕಿನಲ್ಲಿ ಮೇಲೇಳಲು ಆಗದಿದ್ದಾಗ ಸುತ್ತಮುತ್ತಲಿನ ಪರಿಸರವನ್ನಾಗಲಿ ಅಥವಾ ಜನರನ್ನಾಗಲಿ ''ನನ್ನ ಅವನತಿಗೆ ಈ ಪರಿಸರ ಮತ್ತು ಜನರೇ ಕಾರಣ'' ಎಂದು ದೂರುತ್ತಾ ತಿರುಗಿದರೆ ಅದಕ್ಕೆ ಅರ್ಥವೂ ಇಲ್ಲ ; ಅದರಿಂದ ಪ್ರಯೋಜನವೂ ಇಲ್ಲ. ಬದಲಿಗೆ ಇಂಥ ವ್ಯಕ್ತಿ ಮತ್ತಷ್ಟು ಅಧೋಗತಿಗೆ ಇಳಿಯುತ್ತಾನೆ. ಕೆಲವೊಮ್ಮೆ ''ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೆ ಅಪರಾಧಿ'' ಎಂಬಂತೆ ನಮ್ಮನ್ನು ತಪ್ಪಿತಸ್ಥರ ಸಾಲಿನಲ್ಲಿ ನಿಲ್ಲಿಸಿ ನೋಡುವವರ ಮಧ್ಯೆ ನಾವು ಬದುಕುತ್ತಿರಬಹುದು. ಅಂಥ ಪ್ರಸಂಗದಲ್ಲಿ ಜನ ಯಾವ ರೀತಿ ಕಳ್ಳತನ ಮಾಡಿ ಸಿಕ್ಕಿಕೊಂಡ ಕಳ್ಳನನ್ನು, ತಲೆಹಿಡಿದು ಬಲಪ್ರಯೋಗದಿಂದ ನೀರೊಳಗದ್ದುವ ಶಿಕ್ಷೆಗೆ ಗುರಿ ಮಾಡಿದಂತೆ ನಮ್ಮ ನಿಜವಾದ ವ್ಯಕ್ತಿತ್ವ ವಿಕಾಸವಾಗದಂತೆ, ಬೆಳೆಯಲಾರದಂತೆ, ಬದುಕಿನಲ್ಲಿ ಮೇಲೇಳಲಾರದಂತೆ ತಮ್ಮ ಅಜ್ಞಾನ, ಮೂಢನಂಬಿಕೆ, ಮತಾಂಧತೆಯ ಕಟ್ಟುಪಾಡುಗಳು ಎಂಬ ಕೈಗಳಿಂದ ಗಟ್ಟಿಯಾಗಿ ಅದುಮಿ ಹಿಡಿಯುತ್ತಾರೆ. ಇಂಥ ಜನ ಅಥವ ಒತ್ತಿ ಹಿಡಿಯುವ ಶಕ್ತಿಗಳು ಕುಟುಂಬದಲ್ಲಿರಬಹುದು, ನೆರೆಹೊರೆಯಲ್ಲಿರಬಹುದು, ಶಾಲೆಗಳಲ್ಲಿರಬಹುದು, ಮಠಗಳಲ್ಲಿರಬಹುದು, ಸಮಾಜದಲ್ಲಿರಬಹುದು ಅಷ್ಟೆ ಏಕೆ ಪಾಪ ಪ್ರಜ್ಞೆ, ಕೀಳರಿಮೆ, ಅರಿಷಡ್ವರ್ಗ ಸಪ್ತಮದಗಳ ರೂಪದಲ್ಲಿ ನಮ್ಮೊಳಗೂ ಇರಬಹುದು. ಇಂಥ ವಿಷವರ್ತುಲದಿಂದ ಹೊರಗೆ ಜಿಗಿದು, ದುರ್ಬಲತೆಯನ್ನು ಮೆಟ್ಟಿನಿಂತು, ಗುರಿ ಸೇರಲು, ನಮ್ಮೊಳಗಿನ ಸೃಜನಾತ್ಮಕ ಶಕ್ತಿ ವಿಕಾಸ ಹೊಂದಲು ನಮಗೆ ಒಂದು ಪ್ರಬಲವಾದ ಸರ್ವೋನ್ನತ ಶಕ್ತಿಯ ಆಸರೆ ಬೇಕಾಗುತ್ತದೆ. ಅಂಥ ಆಸರೆಯನ್ನು ಕುರಿತು ಅಪ್ಪನವರು ತಮ್ಮ ವಚನದಲ್ಲಿ ''ಮುಳುಗುವವನ ಕೈಯ ಹಿಡಿದೆತ್ತಿದ ನಮ್ಮ ಲಿಂಗದೇವ'' ಎಂದು ಸತ್ಯದ ಹಾದಿಯಲ್ಲಿರುವ ಸಾಧಕರಿಗೆ, ಭಕ್ತರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

ನಮ್ಮನ್ನು ''ಎಲ್ಲಾ ರೀತಿಯ ಅವಘಡದಿಂದ ಪಾರುಮಾಡುವ, ಮೇಲೆತ್ತುವ ಸರ್ವಶಕ್ತವಾದ ಅಗೋಚರವಾದ ಚಿಚ್ಛಕ್ತಿಯಿದೆ. ಅದನ್ನು ನಮ್ಮ ನೆರವಿಗೆ ಕರೆಯಬೇಕು, ಮೊರೆಯಿಡಬೇಕೆಂದು'' ಎಷ್ಟು ಜನರಿಗೆ ತಿಳಿದಿದೆ. ?! ಎಲ್ಲೋ ಕೆಲವರಿಗೆ ಗೊತ್ತಿದೆ ಎಂದು ಭಾವಿಸಿಕೊಂಡಿದ್ದರೂ ಅದನ್ನು ಜಗತ್ತಿಗೆ ತಿಳಿಸುವ ಪ್ರಾಮಾಣಿಕ ಪ್ರಯತ್ನವನ್ನು ಎಷ್ಟು ಜನ ಮಾಡಿದ್ದಾರೆ. ? ಆದರೆ ''ಸಕಲ ಜೀವಾತ್ಮರಿಗೂ ಲೇಸನ್ನೆ ಬಯಸಿದ'' ನಮ್ಮ ಬಸವಣ್ಣನವರು ಹಾಗಲ್ಲ. ಯಾರಾದರೂ ಇರಲಿ ಭೇದಭಾವವಿಲ್ಲದೆ ಅವರಿಗೆಲ್ಲ

ದೇವರನ್ನು ನಂಬಲು ಕರೆಯಲು, ಶರಣೆನ್ನಲು, ಪೂಜಿಸಲು ಕಲಿಸುತ್ತಾ ಮತ್ತು ತಮ್ಮ ಪಥದಲ್ಲಿರುವ ಭಕ್ತನು ದಾರಿಯಲ್ಲಿ ನಿಲ್ಲದೆ, ಮುಂದೆ ಸಾಗಲು ಪ್ರೇರಣೆ ತುಂಬುತ್ತಾ ಅಪ್ಪನವರ ಈ ವಚನ ಹೇಗೆ ಬೆನ್ನು ತಟ್ಟುತ್ತಿದೆ ನೋಡಿರಿ.

ಆಡಿಕೊಂಡಿಹರೆಂದು ಅಂಜಲದೇಕೆ ?
ನಾಸ್ತಿಕವಾಡಿಹರೆಂದು ನಾಚಲದೇಕೆ ?
ಆರಾದಡಾಗಲಿ ಶ್ರೀ ಮಹಾದೇವಂಗೆ ಶರಣೆನ್ನಿ
ಏನೂ ಅರಿಯೆನೆಂದು ಮೌನಗೊಂಡಿರಬೇಡ ಲಿಂಗದೇವರ ಮುಂದೆ ದಂದಣ ದತ್ತಣ ಎನ್ನಿ.

ಪಾಪ, ಕೆಲವರಿಗೆ ದೇವರು, ಧರ್ಮ, ದೀಕ್ಷಾಸಂಸ್ಕಾರ - ಇವುಗಳ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಇಂಥವರು ಸದ್ಗುರುವಿನ ಉಪದೇಶಗಳಿಂದ ಪ್ರಭಾವಿತರಾಗಿ, ಇನ್ನು ಮುಂದೆ ಸತ್ಪಥದಲ್ಲಿ ಸಾಗಬೇಕೆಂದು ನಿರ್ಧರಿಸಿಕೊಂಡು ದೀಕ್ಷಾಸಂಸ್ಕಾರ ಪಡೆಯುತ್ತಾರೆ. ದೇವರೊಂದಿಗೆ ಮಾತಾಡುವುದನ್ನು ಕಲಿಯುತ್ತಾರೆ. ತಮ್ಮ ಸಾಧನೆಯ ಹಾದಿಯಲ್ಲಿ ಮುನ್ನಡೆದಿದ್ದಾರೆ. ಆದರೆ ಇವರಿಗಿನ್ನು ಸರಿಯಾಗಿ ಮಂತ್ರಗಳನ್ನು ಉಚ್ಚರಿಸಲು, ವಚನಗಳನ್ನು ಹಾಡಲು ಬರುತ್ತಿಲ್ಲ. ಇದನ್ನು ಕಂಡ ಸುತ್ತಮುತ್ತಲಿನ ನಾಸ್ತಿಕರು, ಸಂದೇಹವಾದಿಗಳು, ಆದರ್ಶಹೀನರು ಆಡಿಕೊಳ್ಳಲು, ನಗಲು, ಅಪಹಾಸ್ಯ ಮಾಡಲು ತೊಡಗುತ್ತಾರೆ. ಏಕೆಂದರೆ ಇವರು ''ತಾವು ಮಾಡರು, ಮಾಡುವವರ ಮಾಡಲೀಯರು'' ಎಂಬ ಗುಂಪಿಗೆ ಸೇರಿದವರು. ಆದರೆ ಭಕ್ತಿ ಪಥದಲ್ಲಿರುವ ಭಕ್ತನು ಇದರಿಂದ ಅಂಜಬೇಕಾಗಿಲ್ಲ, ನಾಚಬೇಕಾಗಿಲ್ಲ, ಸಂಕೋಚಪಡಬೇಕಾಗಿಲ್ಲ, ಮುದುಡಿಕೊಳ್ಳಬೇಕಾಗಿಲ್ಲ ಎನ್ನುತ್ತಾರೆ. ನಮ್ಮೊಳಗಿನ ನಾಚಿಕೆ ಮತ್ತು ಸಂಕೋಚವನ್ನು ಬದಿಗೆ ಸರಿಸುತ್ತಿದ್ದಾರೆ. ಸಾಧನೆಯ ಪ್ರಾರಂಭಾವಸ್ಥೆಯಲ್ಲಿ ಮಂತ್ರಗಳಲ್ಲಿರುವ ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ಬರದಿದ್ದಾಗಲೂ ''ತಪ್ಪಾದರೂ ಚಿಂತೆಯಿಲ್ಲ ; ಮಂತ್ರ ಹೇಳುವುದನ್ನು ದೇವರನ್ನು ಕರೆಯುವುದನ್ನು ಬಿಡಬೇಡ'' ''ನನಗೇನೂ ಬರುವುದಿಲ್ಲ'' ಎಂದು ಆಡಿಕೊಳ್ಳುವವರನ್ನು ನೋಡಿ ನಿನ್ನ ಪ್ರಯತ್ನವನ್ನು ಅಲ್ಲಿಗೆ ನಿಲ್ಲಿಸಬೇಡ. ಏಕೆಂದರೆ ಗುರಿ ಮುಟ್ಟಲು ಸತತವಾದ ಶ್ರದ್ಧೆ - ಸಾಧನೆ ಬೇಕು. ದೇವನು ಕರುಣಾಮಯಿ. ಅವನಿಗೆ ಎಲ್ಲವೂ ಗೊತ್ತಿದೆ. ಹೇಗೆ ಮಾತು ಕಲಿಯಲು ಪ್ರಾರಂಭಿಸಿದ ಮಗು ತಾಯಿ ತಂದೆಯರನ್ನು ಗುರುತು ಹಿಡಿದರೂ, ಸ್ಪಷ್ಟವಾಗಿ ಕರೆಯಲು ಬರದೆ ತೊದಲು ಬಾಲಭಾಷೆಯಲ್ಲಿ ಏನೆಲ್ಲ ಕರೆದರೂ ತಂದೆ ತಾಯಿ ಸಂತೋಷಗೊಳ್ಳುವಂತೆ, ದೇವನು ಸಹ ತನ್ನ ಭಕ್ತನ ನಿರ್ಮಲ ಹೃದಯದ ಬಾಲಭಾಷೆಗೆ ಓಗೊಡುತ್ತಾನೆ, ಮನಸೋಲುತ್ತಾನೆ, ಅನುಗ್ರಹಿಸುತ್ತಾನೆ. ಆದ್ದರಿಂದ ಅಂಜದೆ, ನಾಚದೆ, ''ಲಿಂಗದೇವರ ಮುಂದೆ ದಂದಣ ದತ್ತಣ ಎನ್ನಿ'' ಎಂದು ಹುರಿದುಂಬಿಸುತ್ತಿದ್ದಾರೆ, ಹಿತೋಪದೇಶ ಮಾಡುತ್ತಿದ್ದಾರೆ ತಮ್ಮ ವಚನದಲ್ಲಿ.

ಇಷ್ಟೆಲ್ಲಾ ಕಲಿಸಲು ಪ್ರಯತ್ನಿಸಿದರೂ, ಬೆನ್ನುತಟ್ಟಿದರೂ ಅವನಿಗೇಕೋ ಧೈರ್ಯ, ನಂಬಿಕೆ ಬರವೊಲ್ಲದು. ಮುಂದೆ ಬರಲು ಹಿಂಜರಿಯುತ್ತಿದ್ದಾನೆ. ''ಏಕೆ ?'' ಎಂದು ಕೇಳಿದರೆ ''ದೇವರನ್ನು ಕಾಣಲು, ಪೂಜಿಸಲು, ಮಹಾತ್ಮರನ್ನು ದರ್ಶಿಸಲು, ಉಪದೇಶ ಕೇಳಲು, ಧರ್ಮಗ್ರಂಥಗಳನ್ನು ಮುಟ್ಟಲು - ಓದಲು ಪುಣ್ಯ ಮಾಡಿದವರಿಗೆ ಮಾತ್ರ ಎಂದು ಶಾಸ್ತ್ರಗಳು ಹೇಳುತ್ತವಂತೆ. ಆದ್ದರಿಂದ ನಮ್ಮಂಥ ಪಾಪಿಗಳಿಗೆ ಅದೆಲ್ಲ ಸಾಧ್ಯವೇ ?'' ಎಂದು ಮುಗ್ಧಭಯದಿಂದ ಪ್ರಶ್ನಿಸುತ್ತಾನೆ. ಭಕ್ತಿ ಪಥದಿಂದ ದೂರವೇ ಉಳಿಯುತ್ತಾನೆ. ಇಂಥವರನ್ನು ಆಕರ್ಷಿಸುವುದು ಹೇಗೆ ? ಯಾರ ಬದುಕೇ ಆಗಿರಲಿ ನಷ್ಟಹೊಂದುವದು ಅಪ್ಪನವರಿಗೆ ಇಷ್ಟವಿಲ್ಲ. ಆದ್ದರಿಂದ ಪಾಪಪ್ರಜ್ಞೆಯಿಂದ ನರಳುತ್ತಿರುವವರು, ಕೀಳರಿಮೆಯಿಂದ ಬಳಲುತ್ತಿರುವವರು ಕಹಿಸೋರೆಕಾಯಿಯ ಜೀವನವನ್ನು, ಸೂನೆಗಾರನ ಕತ್ತಿಯ ಪರಿವರ್ತನೆಯನ್ನು ನೋಡಿಯಾದರೂ ಬದುಕುವುದನ್ನು ಕಲಿಯಬೇಕು ಎನ್ನುತ್ತಿದ್ದಾರೆ ಧರ್ಮಪಿತರು ಈ ವಚನದಲ್ಲಿ. ಅಷ್ಟೇ ಅಲ್ಲ, ಈ ವಚನ ಪಾಪಕೂಪದಿಂದ ನಮ್ಮನ್ನು ಹೇಗೆ ಮೇಲೆತ್ತುತ್ತಿದೆ ನೋಡಿರಿ.

ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ
ಕಹಿಸೋರೇಕಾಯಿ ತಂದು ವಿಭೂತಿಯ ತುಂಬಿದಡೆ
ಸಿಹಿಯಾಗದೆ ಮೂರು ದಿವಸಕ್ಕೆ ?
ಹಲವು ಕಾಲ ಕೊಂದ ಸೂನೆಗಾರನ ಕೈಯ ಕತ್ತಿಯಾದರೇನು ?
ಪರುಷ ಮುಟ್ಟಲಿಕ್ಕೆ ಹೊನ್ನಾಗದೆ ಅಯ್ಯಾ ?
ಲಲಾಟದಲ್ಲಿ ಶ್ರೀ ವಿಭೂತಿಯ ಬರೆಯಲು ಪಾಪ ಪಲ್ಲಟವಾಗದೆ ಲಿಂಗದೇವಾ ?- ಬ.ವ.ದೀ - ೭೧.

ಆಧುನಿಕ ಶಿಕ್ಷಣ ಶಾಸ್ತ್ರ ಹೇಳುತ್ತದೆ "ಒಬ್ಬ ವ್ಯಕ್ತಿಯು ಅಯೋಗ್ಯನಾಗಿ ವರ್ತಿಸಲು, ಅನೇಕ ಅನುವಂಶೀಯ, ಪರಿಸರದಲ್ಲಿನ ಸಂಕೀರ್ಣ ಪ್ರೇರಣೆಗಳಿರಬಹುದು. ಆದ್ದರಿಂದ ಶಿಕ್ಷಕರು ಕಾರಣಗಳನ್ನು ತಿಳಿದುಕೊಂಡು ವಿದ್ಯಾರ್ಥಿಯ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಬೇಕು" ಎಂದು. ಇದನ್ನು ಧರ್ಮಪಿತರು ೧೨ನೇ ಶತಮಾನದಲ್ಲೇ ಪ್ರಾಯೋಗಿಕ ರೂಪಕ್ಕೆ ತಂದು ಯಶಸ್ವಿಯಾಗಿದ್ದನ್ನು ಕಾಣಬಹುದು. ಬಸವ ಕಾಲದಲ್ಲಿ ಪಾಪಯೋನಿಜರು, ಶೂದ್ರರು,ಅಸ್ಪೃಶ್ಯರು ಎಂದೇ ಮೇಲ್ವರ್ಗದವರಿಂದ ಗುರುತಿಸ್ಪಟ್ಟಿದ್ದ ಸಮಾಜದ ಕೆಳವರ್ಗದ ಜನರು ಅನುಭವ ಮಂಟಪದಲ್ಲಿ ಸಮಾವೇಶವಾಗಿ ಅತ್ಯುನ್ನತ ಮಟ್ಟದ ಚಿಂತನ ಶೀಲರು, ಮಾನವತಾವಾದಿಗಳು, ಆಧ್ಯಾತ್ಮ ಜೀವಿಗಳು ಆಗಿ ಪರಿವರ್ತನೆ ಹೊಂದಿದ್ದು ಇಂದಿಗೂ ಶಿಕ್ಷಣ ವ್ಯವಸ್ಥೆಗೆ ಒಂದು ಸವಾಲಾಗಿಯೇ ಉಳಿದಿದೆ. ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿ ಬೆಳೆಸಲು ಇಂದಿನ ಶಿಕ್ಷಣ ಪದ್ಧತಿ ಬಸವಣ್ಣನವರ ಮುಂದೆ ಸೋಲನ್ನು ಅನುಭವಿಸುತ್ತಿರುವುದರಲ್ಲಿ ಎರಡು ಮಾತಿಲ್ಲ. ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಪರಮಾತ್ಮನ ಚಿದಾಂಶಿಕರೇ ಆಗಿರುವ ಜೀವಾತ್ಮರುಗಳು ತಾವೇ ಸ್ವಯಂಪ್ರೇರಣೆಯಿಂದ ನೇರವಾಗಿ ಪಾಪಮಾಡಲು, ಪಾಪಾತ್ಮರಾಗಲು ಹೇಗೆ ಸಾಧ್ಯ ? ಎಂದು ಈ ವಚನ ಕೇಳುತ್ತಿದೆ! ಇದನ್ನು ಸ್ಪಷ್ಟಪಡಿಸಲು ಎರಡು ಉದಾಹರಣೆಗಳನ್ನು ನಮ್ಮ ಮುಂದಿಟ್ಟಿದೆ. ಅನುಭವಸ್ಥ ಬುದ್ಧಿವಂತನಾದ ರೈತನು ಸದುದ್ದೇಶದಿಂದಲೇ ಸೋರೆಕಾಯಿ ಬೆಳೆಯುತ್ತಾನೆ. ಆದರೆ ಏನೋ ಮೂಲಸತ್ವಕ್ಕೆ ಕೊರತೆಯುಂಟಾಗಿ ಆ ಕಾಯಿ ಸಿಹಿಯ ಬದಲು ಕಹಿಯಾಗಿದೆ ! ಆದರೂ ರೈತ ಇದರಿಂದ ಚಿಂತಿತನಾಗುವುದಿಲ್ಲ. ಏಕೆಂದರೆ ಅವನಿಗೆ ಕಹಿಯನ್ನು ತೆಗೆದು ಸಿಹಿ ಮಾಡಿ ಉಪಯೋಗಿಸುವುದು ಗೊತ್ತಿದೆ. ಮುಂದೆ ಏನು ಮಾಡುತ್ತಾನೆ ? ಕಹಿ ಸೋರೆ ಕಾಯಿಯನ್ನು ತಂದು ತುಂಬಿದ್ದ ಭಾಗಕ್ಕೆ ವಿಭೂತಿ ಹಚ್ಚಿ ಇಡುತ್ತಾನೆ. ೩-೪ ದಿನಗಳ ನಂತರ ನೋಡುತ್ತಾನೆ.ಸಿಹಿಯಾಗಿದೆ !.

ಹಾಗೆಯೇ ಮತ್ತೊಬ್ಬರಿಂದ ಶೋಷಣೆಗೆ ಒಳಗಾದವರು ತುಳಿತಕ್ಕೆ ಸಿಕ್ಕಿದವರು "ನಾವು ಪಾಪಿಗಳು" ಎಂದೇಕೆ ಭಾವಿಸಬೇಕು ? ಎಂಥಾ ಪಾಪಿಗೂ ಭವಿಷ್ಯವಿದೆ ಎಂಬ ಲೋಕೋಕ್ತಿ ಇಲ್ಲವೆ ? ನಿಜ, ಪಾಪವನ್ನು ತೊಳೆದು ಕೊಳ್ಳಲು ಏನು ಮಾಡಬೇಕು. ನಮ್ಮ ಇಹಪರದ ಹಿತವನ್ನು ಬಯಸುವ ಸದ್ಗುರು ಎಂಬ ರೈತನ ಬಳಿಗೆ ಹೋಗಬೇಕು ಅವನಿಂದ ಅನುಗ್ರಹ ಪಡೆಯಬೇಕು. ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಈ ವಚನ ಅದೆಷ್ಟು ಚೆನ್ನಾಗಿ ಉಪದೇಶಿಸುತ್ತಿದೆ ಅಲ್ಲವೆ ? ಹೀಗೆ ಕಹಿ ಸೋರೆಕಾಯಿ ಪ್ರಸಂಗ ಆಂತರಿಕ ಪರಿವರ್ತನೆಯನ್ನು ಪ್ರತಿಬಿಂಬಿಸುತ್ತಿದೆ.

ಇನ್ನು ಒಬ್ಬ ವ್ಯಕ್ತಿ ಬಾಹ್ಯ ಪರಿವರ್ತನೆಗೆ ಒಳಗಾಗುವುದನ್ನು ನೋಡೋಣ. ಸೂನೆಗಾರನ ಕೈಯ ಕತ್ತಿಯಾದರೇನು ? ಪರುಷ ಮುಟ್ಟಲಿಕ್ಕೆ ಹೊನ್ನಾಗದೆ ಅಯ್ಯಾ ? ಎನ್ನುತ್ತಾರೆ. ಭಕ್ತಿ ಪಥವನ್ನು ಒಪ್ಪದ, ಮತ್ತೊಬ್ಬರ ಪ್ರಚೋದನೆಗೆ ಒಳಗಾಗಿ ತಪ್ಪು ಮಾಡಿದವರನ್ನು ಇಲ್ಲಿ ಕಟುಕನ ಕೈಯಲ್ಲಿರುವ ಕತ್ತಿಗೆ ಹೋಲಿಸಿದ್ದಾರೆ. ಕಟುಕನ ಕೈಯ ಕತ್ತಿಯಾದರೂ ಅಷ್ಟೆ, ತಾನೇ ನೇರವಾಗಿ ಯಾರನ್ನು ಕೊಲ್ಲುವುದಿಲ್ಲ. ಅದರ ಒಡೆಯನ ಆದೇಶದಂತೆ ವರ್ತಿಸುತ್ತದೆ. ಹಾಗೇಯೇ ಯಾರೂ ಸ್ವತಃ ತಪ್ಪು ಮಾಡಲು ಬಯಸುವುದಿಲ್ಲ. ತಪ್ಪಿನ ಹಿಂದೆ ಯಾವುದೇ ಪ್ರೇರಣೆ ಕೆಲಸ ಮಾಡಿರುತ್ತದೆ. ಹೀಗೆ ಅಂಥವರು "ನಾವೇ

ತಪ್ಪುಗಳಿಗೆ ನೇರವಾಗಿ ಹೊಣೆಗಾರರು" ಎಂದು ಅಪರಾಧಿ ಪ್ರಜ್ಞೆಯಿಂದ ನರಳುತ್ತಾ ಸತ್ಸಂಗದಿಂದ ದೂರವೇ ಉಳಿಯುತ್ತಾರೆ. ಅಂಥವರನ್ನು ಆಕರ್ಷಿಸಲೆಂದೇ ಕಟುಕನ ಕತ್ತಿಯನ್ನು ತೋರಿಸಿ ಬುದ್ಧಿ ಹೇಳುತ್ತಿದ್ದಾರೆ. ಇಂಥವರು ಸಂಪೂರ್ಣವಾಗಿ ಅಂತರಂಗದ ಪರಿವರ್ತನೆಗೆ ಒಳಗಾಗದಿದ್ದರೂ ಪರವಾಗಿಲ್ಲ, ಪರುಷ ಸ್ಪರ್ಶದಿಂದ ಹೇಗೆ ಕಬ್ಬಿಣದ ಕತ್ತಿ ಹೊನ್ನಿನ ಕತ್ತಿಯಾಯಿತೊ ಹಾಗೇ ಬಾಹ್ಯ ಪರಿವರ್ತನೆಯನ್ನಾದರೂ ಮೊದಲಿಗೆ ಹೊಂದುತ್ತಾ, ಧಾರ್ಮಿಕ ಲಾಂಛನಗಳನ್ನು ಧರಿಸಿಕೊಳ್ಳಲು ಮನಸ್ಸು ಮಾಡಲಿ. ನಂತರ ಒಂದಲ್ಲ ಒಂದು ದಿನ ಮಾನಸಾಂತರ ಹೊಂದಬಹುದು ಎಂಬ ಆಶಾವಾದ, ಮಹದುದ್ದೇಶ ಇದರಲ್ಲಿದೆ. ಅಷ್ಟೇ ಅಲ್ಲ ಒಬ್ಬ ವ್ಯಕ್ತಿಗೆ ಅಂತರಂಗದ ಪರಿವರ್ತನೆಯಷ್ಟೇ ಬಹಿರಂಗದ ಪರಿವರ್ತನೆಯು ಮುಖ್ಯ ಎಂಬುದನ್ನು ಸಹ ಪ್ರತಿಪಾದಿಸುತ್ತಿದೆ. ಈ ಕಾರಣಕ್ಕಾಗಿಯೇ ಮಹಾಮಾನವತಾವಾದಿ ಬಸವೇಶ್ವರರು ದೇವರಿಗಿಂತಲೂ, ಗುರುವಿಗಿಂತಲೂ ಶರಣರ ಸತ್ಸಂಗಕ್ಕೆ ಅತಿ ಹೆಚ್ಚಿನ ಮಹತ್ವ ಕೊಟ್ಟಿರುವುದು. ಏಕೆಂದರೆ ಇಂಥಲ್ಲಿ ಕೆಟ್ಟ ವಿಚಾರಗಳಿಗೆ ಮತ್ತು ಆಚಾರಗಳಿಗೆ ಪ್ರವೇಶವಿಲ್ಲ ಎಂಬುದನ್ನು ಈ ವಚನ ಹೇಗೆ ತೋರಿಸುತ್ತಿದೆ ನೋಡಿರಿ.

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ
"ತಾರೌ ಅಗ್ಘವಣಿಯ, ನೀಡೌ ಪತ್ರೆಯ
ಲಿಂಗಕ್ಕೆ ಬೋನವ ಹಿಡಿಯೌ" ಎಂಬರು.
ಲಿಂಗದೇವನ ಮಹಾಮನೆಯಲ್ಲಿ
ಒಕ್ಕುದನುಣ್ಣೌ ತೊತ್ತೆ" ಎಂಬರು. - ಬ.ವ.ದೀ - ೩೫೬.

ಕೆಲವು ಅಜ್ಞಾನಿ ನಾಸ್ತಿಕರು, ಸಂದೇಹವಾದಿಗಳು ವಾದಿಸುವುದುಂಟು, ಕೇಳುವುದುಂಟು. ದೇವರು, ಧರ್ಮ, ಪೂಜೆ, ಜಪ, ಧ್ಯಾನ, ಸತ್ಸಂಗ ಇವೆಲ್ಲ ಏಕೆ ಬೇಕು ? ಇವಿಲ್ಲದೆ ಬದುಕಲು ಸಾಧ್ಯವಿಲ್ಲವೆ ? ಇರುವಷ್ಟು ದಿನ ಚೆನ್ನಾಗಿ ತಿಂದು ಉಂಡು ಉಟ್ಟು ಬದುಕಿದರಾಯಿತು ಎಂದು. ಸಾಧ್ಯವಿಲ್ಲದೆ ಏನು ? ಹಂದಿ, ನಾಯಿ, ಕುರಿ, ಕೋಳಿಯಂತೆ ಕಾಲನಿಗೆ ಬಲಿಪಶುವಾಗಿ ಹೇಡಿಗಳಂತೆ ಬದುಕಬಹುದು. ಅಂಥವರಿಗೆ ಈ ವಚನ ಹೇಗೆ ಪ್ರಶ್ನಿಸುತ್ತಿದೆ ಮತ್ತು ಉತ್ತರವನ್ನು ಹೇಳುತ್ತಿದೆ ಎಂದು ಗಮನಿಸಿರಿ.

ಅಂಕ ಕಳನೇರಿ ಕೈ ಮರೆದಿರ್ದಡೆ ಮಾರುಕ ಬಂದಿರಿವುದ ಮಾಣ್ಬವೆ ?
ನೆನಹ ಮತಿ ಮರೆದಿರ್ದಡೆ ಪಾಪ ತನುವನಂಡಲೆವುದ ಮಾಣ್ಬುದೆ ?
ಲಿಂಗದೇವನ ನೆನೆದಡೆ ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯ ! - ಬ.ಷ.ದೀ - ೧೮೦

ಪರಸ್ಪರ ಪ್ರಬಲವಾಗಿರುವ ಎರಡು ವೈರಿ ಪಕ್ಷಗಳ ನಡುವೆ ಭಯಂಕರ ಯುದ್ಧ ಪ್ರಾರಂಭವಾಗಿದೆ. ಇಂಥ ತುರ್ತುಪರಿಸ್ಥಿತಿಯಲ್ಲಿ, ಇದುವರೆಗೂ ತಾನು ಪಡೆದಿರುವ ತರಬೇತಿಯ ನೈಜ ಪರೀಕ್ಷೆಗೆಂದು, ಸೈನಿಕನು ಹೋರಾಟ ಮಾಡಲು, ತನ್ನ ವೈಯಕ್ತಿಕ ಸಾಮರ್ಥ್ಯವನ್ನು ತೋರಿಸಲು ಯುದ್ಧರಂಗವನ್ನು ಪ್ರವೇಶಿಸುತ್ತಾನೆ. ಹೀಗೆ ಹೋಗುವ ಮೊದಲು ಅವನು ತನ್ನನ್ನು ರಕ್ಷಿಸಿಕೊಳ್ಳಲು ಗುರಾಣಿಯನ್ನು(ಕೈಮರೆ) ಮತ್ತು ಶತ್ರುವಿನೊಂದಿಗೆ ಹೋರಾಡಲು ಕತ್ತಿಯನ್ನು ತೆಗೆದುಕೊಂಡು ಸಿದ್ಧನಾಗಿ ಹೋಗಬೇಕಿತ್ತಲ್ಲವೆ ? ಆದರೆ ಇಲ್ಲಿ ಅವನು ಮಾಡಿದ್ದು ಏನು ? ಅತ್ಯುತ್ಸಾಹದಿಂದ ಕತ್ತಿಯನ್ನು ಮಾತ್ರ ತೆಗೆದುಕೊಂಡು ಗುರಾಣಿಯನ್ನು ಮರೆತು ರಣರಂಗಕ್ಕೆ ಇಳಿದಿದ್ದಾನೆ. ನಂತರ ತನ್ನ ತಪ್ಪು ಅರಿವಾಗುತ್ತದೆ. ಇದರಿಂದ ಪ್ರಯೋಜನವೇನು ? ಏಕೆಂದರೆ ಹಿಂದಿರುಗಿ ಬಂದು ಗುರಾಣಿಯನ್ನು ತೆಗೆದುಕೊಂಡು ಹೋಗಲು ಶತ್ರು ಬಿಡುತ್ತಾನೆಯೇ ? ಇಲ್ಲ, ಸಿಕ್ಕಿದ ಅವಕಾಶದಿಂದ ವಂಚಿತನಾಗಬಾರದೆಂದು, ಗುರಾಣಿ ಮರೆತ ಸೈನಿಕನನ್ನು ಹೆಚ್ಚು ಶ್ರಮವಿಲ್ಲದೆ ಇರಿದು ಸಾಯಿಸುತ್ತಾನೆ ; ಸೋಲಿಸುತ್ತಾನೆ. ಅದೇ ರೀತಿ ಜೀವನ ಎನ್ನುವ

ರಣರಂಗದಲ್ಲಿ ಜೀವಾತ್ಮ ಎನ್ನುವ ಸೈನಿಕನು ಅಪಮೃತ್ಯು - ಕಾಲಕರ್ಮಗಳು ಎಂಬ ವೈರಿಗಳೊಂದಿಗೆ ಹೋರಾಡುತ್ತಲೇ ಬದುಕಬೇಕಾಗುತ್ತದೆ. ಹೀಗೆ ಬದುಕುತ್ತಿರುವಾಗ ಪರಮಾತ್ಮನ ನೆನಪು - ಸ್ಮರಣೆ ಎನ್ನುವ ಗುರಾಣಿಯನ್ನು ಮರೆತು, ಕೇವಲ ಬುದ್ಧಿಶಕ್ತಿ ಎಂಬ ಕತ್ತಿಯ ಬಲದಿಂದ ಮಾತ್ರ ತನ್ನ ಮುಂದಿರುವ ಬದುಕನ್ನು ಎದುರಿಸಬಲ್ಲೆ ಎಂದು ಅತ್ಯುತ್ಸಾಹದಿಂದ ನುಗ್ಗುವವರನ್ನು ಪಾಪಕರ್ಮಗಳು ಎಂಬ ವೈರಿ ಯಾವ ಶ್ರಮವೂ ಇಲ್ಲದೆ ಅತ್ಯಂತ ಸುಲಭವಾಗಿ ನಮ್ಮನ್ನು ಅಟ್ಟಿಸಿಕೊಂಡು ಅಂಡಲೆಸುತ್ತಾನೆ ; ಇರಿಯುತ್ತಾನೆ ; ಸೋಲಿಸುತ್ತಾನೆ. ಈ ವಚನದಲ್ಲಿ ಬರುವ ''ನೆನಹ ಮತಿ ಮರೆದಿರ್ದಡೆ ಪಾಪ ತನುವನಂಡಲೆವುದ ಮಾಣ್ಬುದೆ ?'' ಎಂಬ ಸಾಲಿನ ಅರ್ಥವನ್ನು ಮನಗಾಣಿಸಲೋಸುಗ ಒಂದು ಘಟನೆಯನ್ನು ವಿವರಿಸಿ ಈ ಲೇಖನಕ್ಕೆ ಮಂಗಳ ಹಾಡುತ್ತೇನೆ.

ಬೆಂಗಳೂರಿನಂಥ ಒಂದು ದೊಡ್ಡ ನಗರ. ಅಲ್ಲಿನ ಪ್ರಸಿದ್ಧ ಕಾಲೇಜೊಂದರಲ್ಲಿ ಆಕೆ ಅಧ್ಯಾಪಕಿಯಾಗಿದ್ದಾಳೆ. ನೋಡಲು ದಷ್ಟಪುಷ್ಟ ಭೀಮ ಕಾಯದ ಎತ್ತರದ ಆಳು. ಕಾಲೇಜಿನಲ್ಲಿ ಆಕೆ sportive lady (ಕ್ರೀಡಾಳು) ಎಂದೇ ಹೆಸರಾಗಿದ್ದಳು. ಸಾಕಷ್ಟು ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಗೆದ್ದು ಕೀರ್ತಿ ಪಡೆದಿದ್ದಳು. ತನ್ನ ಕಾಲೇಜಿಗೂ ಹೆಸರು ತಂದಿದ್ದಳು. ಇದರಿಂದ ಸಹೋದ್ಯೋಗಿಗಳ - ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಗಳಿಸಿದ್ದಳು. ಹೀಗಿರುವಾಗ ಒಂದು ದಿನ ಬೆಳಗ್ಗೆ ನವವಧುವಿನಂತೆ ಸಕಲಾಲಂಕಾರ ಭೂಷಿತಳಾಗಿ ಮನೆಯಿಂದ ಕಾಲೇಜಿಗೆ ಹೊರಟಿದ್ದಾಳೆ. ಹಾದಿಯ ಮಧ್ಯೆ ವಿಶಾಲವಾದ ಟಾರ್ ರಸ್ತೆಯನ್ನು ದಾಟಬೇಕಾಗಿದೆ. ಸರಿ, ದಾಟುವ ಮೊದಲು ನಿಂತು ಕ್ಷಣಕಾಲ ಯೋಚಿಸಿದಳು. ಅತ್ತಲಿತ್ತ ನೋಡಿದಳು, ರಸ್ತೆಯಲ್ಲಿ ಯಾವ ವಾಹನಗಳು ಕಂಡು ಬರಲಿಲ್ಲ. ಆದರೆ ದೂರದಲ್ಲಿ ಮಾತ್ರ ಆಟದ ಸಾಮಾನಿನಂತೆ ಒಂದು ಟ್ರಕ್‌ಲಾರಿ ಬರುತ್ತಿತ್ತು. ಅದು ಹತ್ತಿರ ಬರುವುದರೊಳಗೆ ರಸ್ತೆಯನ್ನು ದಾಟಬಹುದೆಂಬ ಆತ್ಮವಿಶ್ವಾಸದಿಂದ, ಜಿಂಕೆಯ ವೇಗದಲ್ಲಿ ದಾಟಲು ಉಪಕ್ರಮಿಸಿದಳು. ರಸ್ತೆಯ ಮಧ್ಯಭಾಗಕ್ಕೆ ಬಂದಳೋ ಇಲ್ಲವೋ ಅತಿ ವೇಗದಿಂದ ಬಂದ ಭೂತಾಕಾರದ ಲಾರಿ, ಕೂದಲೆಳೆಯ ಅಂತರದಲ್ಲಿ ಆಕೆಗೆ ಬಡಿದು ನೆಲಕ್ಕುರುಳಿಸಿ ಕಾಲಿನ ಮೇಲೆ ಹಾಯ್ದು ಹೋಯಿತು. ಆಸ್ಪತ್ರೆಗೆ ಸಾಗಿಸಿ ತಂದ ಆಕೆಯನ್ನು ಪರೀಕ್ಷಿಸಿದ ತಜ್ಞವೈದರು ಇನ್ನು ಮುಂದೆ ಅಪಘಾತದಲ್ಲಿ ಜಜ್ಜಿ ಹೋಗಿರುವ ಕಾಲುಗಳಿಂದ ಪ್ರಯೋಜನವಿಲ್ಲೆಂದು ತೀರ್ಮಾನಿಸಿ ಎರಡು ಕಾಲುಗಳನ್ನು ಕತ್ತರಿಸಿ ತೆಗೆದರು. ಇಲ್ಲಿ ಆಕೆ ಅಪಮೃತ್ಯುವಿನಿಂದ ಪಾರಾದರೂ ಕಾಲಕರ್ಮದಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ. ಇದರಿಂದ ಬಲವಾದ ಮಾನಸಿಕ ಆಘಾತಕ್ಕೆ ಒಳಗಾದ ಅವಳನ್ನು ನೋಡಲೆಂದು ತಾಯಿ ತಂದೆಯರು ಬಂದಾಗ ಆಕೆ ಗೋಳಾಡುತ್ತಾ ಕೇಳಿದ್ದು ಏನು ಗೊತ್ತೇ ?! ''ನೀವು ನನಗೆ ಜಾತಕ ಬರೆಸಿದಾಗ ಅದರಲ್ಲಿ ಈ ಗಂಡಾಂತರದ ಬಗ್ಗೆ ಏಕೆ ಬರೆದಿಲ್ಲ ? ಮೊದಲೆ ಬರೆದು ತಿಳಿಸಿದ್ದರೆ ನಾನು ಶಾಂತಿ ಮಾಡಿಸಿಕೊಂಡು ಪಾರಾಗುತ್ತಿದ್ದೆನಲ್ಲ'' ಎಂದು. ಈ ಪ್ರಶ್ನೆಗೆ ತಾಯಿ ತಂದೆಯರ ಉತ್ತರ ಏನು ಗೊತ್ತೆ ?! ಧಾರಾಕಾರವಾಗಿ ಹರಿದ ಕಣ್ಣೀರು. ವಿಪತ್ತು ಬರುವ ಮೊದಲಿಗೇ ಸದಾ ದೇವನ ಧ್ಯಾನ - ನೆನಹಿನಲ್ಲಿರಬೇಕು. ಅದಕ್ಕೆ ಅಲ್ಲವೆ ? ''ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ ತಪ್ಪುವವು ಅಪಮೃತ್ಯು - ಕಾಲಕರ್ಮಂಗಳಯ್ಯ'' ಎಂದು. ಧರ್ಮಪಿತರು ನಮಗೆ ಈ ರೀತಿ ಎಚ್ಚರಿಕೆ ಕೊಡುತ್ತಿರುವುದು.

ಹೀಗೆ ಧರ್ಮಪಿತರ ವಚನಗಳು ಬದುಕಿನ ಹಾದಿಯಲ್ಲಿ ಗುರುವಿನಂತೆ ಮಾರ್ಗದರ್ಶನ ಮಾಡುತ್ತವೆ, ಎಚ್ಚರಿಕೆ ನೀಡುತ್ತವೆ. ಸಾಧನೆಯ ಹಾದಿಯಲ್ಲಿ ಕೈಹಿಡಿದು ಗುರಿ ಮುಟ್ಟಿಸುತ್ತವೆ. ತಂದೆಯಂತೆ ಬುದ್ಧಿ ಹೇಳುತ್ತವೆ. ತಾಯಿಯಂತೆ ತಲೆ ನೇವರಿಸುತ್ತವೆ. ಗೆಳೆಯನಂತೆ ಕಷ್ಟಸುಖದಲ್ಲಿ ಪಾಲು ಪಡೆಯುತ್ತವೆ. ಜೀವನ ಕಲೆಯನ್ನು ಬೋಧಿಸುತ್ತವೆ. ಇಂಥ ಪರುಷ ಸದೃಶವಾದ ವಚನಗಳನ್ನು ನಮಗೆ ಕೊಟ್ಟಿರುವ ಅಪ್ಪ ಬಸವಣ್ಣನವರನ್ನು ಹಗಲು - ರಾತ್ರಿ ಸ್ಮರಿಸುತ್ತಾ ಅವರ ಪರುಷಪಾದಕ್ಕೆ ಶರಣುಗೈದು ಧನ್ಯಳಾಗುತ್ತೇನೆ.



ಬೆಂಗಳೂರಿನ ಬಸವ ಮಂಟಪ
ಮಾತಾ ನೀಲಾಂಬಿಕಾ ಸಮುದಾಯ ಭವನದಲ್ಲಿ
ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿಯವರ
58ನೆಯ ವರ್ಧಂತಿ ಉತ್ಸವ

ಪ್ರಭು(ಗುರು)ವಾರ, ದಿ. 13-3-2003 ಪ್ರಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲಸಂಗಮದ ಬಸವ ಧರ್ಮ ಪೀಠದ ದ್ವಿತೀಯ ಪೀಠಾಧ್ಯಕ್ಷರು, ಕ್ರಾಂತಿಕಾರಿ ಧರ್ಮಪ್ರಚಾರಕರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ ಅವರು ದಿ. 13-3-2003 ರಂದು 57 ವರ್ಷಗಳನ್ನು ಪೂರೈಸಿ 58ಕ್ಕೆ ಪಾದಾರ್ಪಣೆ ಮಾಡುತ್ತಿರುವ ನಿಮಿತ್ತ ಪೂಜ್ಯರ ವರ್ಧಂತಿ ಉತ್ಸವವನ್ನು ಅವರ ದಿವ್ಯ ಸನ್ನಿಧಿಯಲ್ಲಿ ಆಚರಿಸಿ, ಕೃತಜ್ಞತೆ ಸಲ್ಲಿಸಲು ಭಕ್ತವೃಂದವು ನಿಶ್ಚಯಿಸಿದೆ.

ಬೆಳಿಗ್ಗೆ 10-00ಕ್ಕೆ	:	ಪ್ರಥಮ ಗಣಾಧೀಶ ಬಸವಣ್ಣನವರ ಪೂಜೆ ಮತ್ತು ಪುಷ್ಪಾರ್ಚನೆ.
		ಪೂಜ್ಯ ಮಾತಾಜಿಯವರಿಗೆ ಪುಷ್ಪವೃಷ್ಟಿ-ಆರತಿ
ಉಪನ್ಯಾಸ ಕಾರ್ಯಕ್ರಮ	:	ಗುರು ವಂದನೆ
ಉದ್ಘಾಟನೆ	:	ಶರಣ. ಗುರುಬಸಪ್ಪ, ಕಾಟೇರಿ
ಉಪನ್ಯಾಸ	:	ಶರಣ. ವೀರಣ್ಣ ಕೊರ್ಲಹಳ್ಳಿ
		ಶರಣೆ. ಲೀಲಾವತಿ ನಾಡಗೌಡರು
		ಶರಣ. ಸಿದ್ಧರಾಮ, ಕಾನೂನು ವಿದ್ಯಾರ್ಥಿ
ಅಧ್ಯಕ್ಷತೆ	:	ಹೆಚ್.ಎ. ಶರಣಪ್ಪ
ಗಣಪ್ರಸಾದ		

ಅಭಿನಂದನಾ ಸಮಾರಂಭ ಸಂಜೆ 6-00 ಗಂಟೆಗೆ

ಉದ್ಘಾಟನೆ	:	ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು
ಸ್ವಾಗತ	:	ಶರಣ. ಎನ್.ಪುಟ್ಟರುದ್ರ
ವಿಶೇಷ ಉಪನ್ಯಾಸ	:	ಶರಣ. ಡಿ.ಪಿ. ಪ್ರಕಾಶ್
		ನಿರ್ದೇಶಕರು, ಜೈನ್ ವೃತ್ತಿಪರ ಶಿಕ್ಷಣ ಸಂಸ್ಥೆ
ಉಪನ್ಯಾಸ	:	ಶರಣ. ಜ. ಜೈರಾಜ್, ವಕೀಲರು
ಅಧ್ಯಕ್ಷತೆ	:	ಶರಣ. ಎಸ್.ಎನ್. ನೀಲಕಂಠ

ಪೂಜ್ಯರ ವರ್ಧಂತಿಯ ನಿಮಿತ್ತ ಮಧ್ಯಾಹ್ನ ಮತ್ತು ರಾತ್ರಿ ಎರಡೂ ವೇಳೆ ಪ್ರಸಾದ ವಿತರಣೆ ಇರುವುದರಿಂದ ಶರಣ ಬಂಧುಗಳು ಉದಾರವಾಗಿ ಕಾಣಿಕೆಯನ್ನು ನೀಡಬೇಕೆಂದು ಕೋರುತ್ತೇವೆ.

ಬಸವ ಮಂಟಪ, 2035, 20ನೆಯ ಮುಖ್ಯ ರಸ್ತೆ,
2ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010,
ದೂರವಾಣಿ : 3325335, 3322790

ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸ, ವಿಳಾಸ ಕಳಿಸಲು ಕೋರಿಕೆ

ಬಸವ ತತ್ತ್ವ ಪ್ರಚಾರದ ಉದ್ದೇಶಕ್ಕಾಗಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಅಮೆರಿಕಾದಲ್ಲಿ ಆರಂಭವಾಗಿರುವ ಸಂಸ್ಥೆ Universal Centre of Basava Philosophy ಆಹ್ವಾನಿಸಿದ್ದು, 2003 ನೆಯ ಇಸವಿಯ ಮೇ ತಿಂಗಳಲ್ಲಿ ಪೂಜ್ಯರು ಹೋಗುವ ಸಂಭವವಿದೆ. ಸಾಮಾನ್ಯವಾಗಿ ಆ ದೇಶದಲ್ಲಿ ಮೇ ತಿಂಗಳಿನಿಂದ ಸೆಪ್ಟಂಬರ್‌ವರೆಗೆ ಹವಾಮಾನವು ಅನುಕೂಲಕರವಾಗಿ ಇರುವುದರಿಂದ ಈ ಸಮಯದಲ್ಲಿ ವಿವಿಧ ಸ್ಥಳಗಳಲ್ಲಿ ಕಾರ್ಯಕ್ರಮ ಏರ್ಪಡಿಸಲು UCBP ಸಂಸ್ಥೆಯು ಆಶಿಸಿದೆ.

ಭಾರತದಲ್ಲಿರುವ ಲಿಂಗಾಯತ ಧರ್ಮೀಯರು ಮತ್ತು ಆಧ್ಯಾತ್ಮಿಕ ಆಸಕ್ತರು ಯು.ಎಸ್.ಎ ದಲ್ಲಿರುವ ತಮ್ಮ ತಮ್ಮ ಬಂಧು-ಮಿತ್ರರು, ಪರಿಚಿತರು ಮತ್ತು ಧಾರ್ಮಿಕ ಸಂಸ್ಥೆಗಳ ವಿಳಾಸಗಳನ್ನು ನಮ್ಮ ಬೆಂಗಳೂರಿನ ವಿಳಾಸಕ್ಕೆ ಕಳಿಸಿಕೊಡಬೇಕು ಮತ್ತು ತಮ್ಮ ಬಂಧು-ಮಿತ್ರರು, ಮಕ್ಕಳು, ಸೋದರರು, ಪರಿಚಿತರು, ಪರಿಚಿತ ಧಾರ್ಮಿಕ ಸಂಸ್ಥೆಗಳಿಗೆ ಈ ವಿಷಯವನ್ನು ಪತ್ರ ಮುಖೇನ ತಿಳಿಸಬೇಕು. ಏಕೆಂದರೆ ಪೂಜ್ಯರ ಕಾರ್ಯಕ್ರಮಗಳನ್ನು ಮನೆಗಳಲ್ಲಿ ಮಾತ್ರವಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ವಿಶ್ವವಿದ್ಯಾಲಯ ಮುಂತಾದ ಕಡೆಗಳಲ್ಲಿ ಸಂಯೋಜಿಸಲು ಸಂಸ್ಥೆಯು ಬಯಸಿದೆ. ಅಲ್ಲಿರುವ ಆಸಕ್ತರು ಕಾರ್ಯಕ್ರಮಗಳ ವಿವರ ತಿಳಿದರೆ ಸಮೀಪದ ಸ್ಥಳಗಳಿಗೆ ಬಂದು ಪೂಜ್ಯರ ದರ್ಶನ ಪಡೆಯಬಹುದು, ಉಪನ್ಯಾಸಗಳನ್ನು ಕೇಳಬಹುದು. ಬಿಡಿಬಿಡಿಯಾದ ಕುಟುಂಬಗಳಿದ್ದರೆ ಕಾರ್ಯಕ್ರಮವನ್ನು ಏರ್ಪಡಿಸಲು ಆಗದೆ ಇದ್ದರೂ ತಮ್ಮ ಮನೆಗಳಿಗೆ ಆಹ್ವಾನಿಸಬಹುದು. ಆದ್ದರಿಂದ ಅಲ್ಲಿ ನೆಲೆಸಿರುವ ಪರಿಚಿತರ ವಿಳಾಸಗಳನ್ನು ದೂರವಾಣಿ ಸಂಖ್ಯೆ ಸಹಿತವಾಗಿ ಬೆಂಗಳೂರಿನ ಬಸವ ಮಂಟಪಕ್ಕೆ ಆದಷ್ಟು ಬೇಗನೆ ಕಳಿಸಲು ಕೋರುತ್ತೇವೆ.

ಯುಸಿಬಿಪಿಯ ವಿಳಾಸವನ್ನು ಕೊಡಲಾಗಿದೆ. ಇದನ್ನು ಸಹ ನಿಮ್ಮ ಪರಿಚಿತರು, ಬಂಧು ಮಿತ್ರರಿಗೆ ಕಳಿಸಿ ಯುಸಿಬಿಪಿಯನ್ನು ಸಂಪರ್ಕಿಸಲು ಸೂಚಿಸಿ ಪತ್ರ ಬರೆಯಿರಿ. ಪೂಜ್ಯ ಮಾತಾಜಿಯವರು ಮೇ ತಿಂಗಳಿನಲ್ಲಿ ಕಲ್ಯಾಣ ಪರ್ವ ಕಾರ್ಯಕ್ರಮವಾದ ನಂತರ ಪ್ರಯಾಣ ಕೈಗೊಳ್ಳಲಿರುವ ಕಾರಣ ಯುಸಿಬಿಪಿಯು ಸಮಗ್ರವಾದ ಸಂಚಾರ ಮತ್ತು ಪ್ರಚಾರ ಕಾರ್ಯಕ್ರಮ ಹಾಕಿಕೊಳ್ಳಲಿದೆ. ಆದ್ದರಿಂದ ಕಾರ್ಯಕ್ರಮವನ್ನು ಏರ್ಪಡಿಸುವವರು, ತಮ್ಮ ಮನೆಗಳಿಗೆ ಆಹ್ವಾನಿಸುವವರು, ಸಮೀಪದ ಸ್ಥಳದಲ್ಲಿ ಕಾರ್ಯಕ್ರಮ ನಡೆದಾಗ ಉಪನ್ಯಾಸ ಕೇಳಲು ಬಯಸುವವರು ಅಲ್ಲಿಯ ವಿಳಾಸಕ್ಕಾಗಲೀ, ಇಲ್ಲಿಗಾಗಲೀ ಸಂಪರ್ಕಿಸಬಹುದು.

ವಿದೇಶ ಪ್ರವಾಸ ಸಹಾಯಾರ್ಥ ಕಾಣಿಕೆಗೆ ಕೋರಿಕೆ

ಪೂಜ್ಯ ಮಾತಾಜಿಯವರು ಮತ್ತು ಸಹಾಯಕರು ಹೋಗಬೇಕಾಗುವುದರಿಂದ ಪ್ರವಾಸದ ವೆಚ್ಚವು ಬಹಳ ಬರುತ್ತದೆ. ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳು ಬಹಳಷ್ಟು ಯೋಜನೆಗಳನ್ನು ಹಾಕಿಕೊಂಡಿರುವುದರಿಂದ ಹಣದ ಕೊರತೆಯನ್ನು ಎದುರಿಸುತ್ತಿವೆ. ಆದ್ದರಿಂದ ವಿದೇಶ ಪ್ರವಾಸದ ವೆಚ್ಚ ಭರಿಸಲು ಬಸವ ಭಕ್ತರು ಉದಾರವಾಗಿ ಸಹಾಯ ಮಾಡಲು ಕೋರುತ್ತೇವೆ.

ಶರಣ ಮೇಳಕ್ಕೆ ಬರುವಾಗ ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸಕ್ಕಾಗಿ ಎಂದು ನಿಮ್ಮ ಕಾಣಿಕೆಗಳನ್ನು ತಂದು ಸಲ್ಲಿಸಬಹುದು. ಈಗಿನಿಂದಲೇ ಕೊಡಬೇಕು ಎನ್ನುವವರು Basava Mahamane Charitable Trust, Bangalore ಎಂದು ಬ್ಯಾಂಕ್ ಡ್ರಾಫ್ಟ್‌ಗಳನ್ನು ತೆಗೆಸಿ ಬೆಂಗಳೂರು ವಿಳಾಸಕ್ಕೆ ಕಳಿಸಬಹುದು.

ಯುಸಿಬಿಪಿಯು ಅಮೆರಿಕಾದಲ್ಲಿ ಪೂಜ್ಯ ಮಾತಾಜಿಯವರು ಮತ್ತು ಸಹಾಯಕರು ಸಂಚರಿಸುವ, ವಸತಿ, ಊಟದ ವ್ಯವಸ್ಥೆಗಳನ್ನು ನೋಡಿಕೊಳ್ಳಲಿದೆ. ಹೋಗಿ ಬರುವ ವಿಮಾನ ವೆಚ್ಚವನ್ನು ನಮ್ಮ ಸಂಸ್ಥೆಗಳೇ ಭರಿಸಬೇಕಾಗಿವೆ. ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ಸಲ್ಲಿಸಿ ಬಸವ ತತ್ತ್ವ ಪ್ರಚಾರ ಕಾರ್ಯದಲ್ಲಿ ನೆರವಾಗಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು :

1. ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು
   ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್
   ಬಸವ ಮಂಟಪದ 2035, 20ನೇ ಮೇನ್
   2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
   ದೂರವಾಣಿ ಸಂಖ್ಯೆ: 080-3325335/3322790
   E-Mail : matamahadevi @ rediffmail.com
2. **Universal Centre of Basava Philosphy**
   P.O.Box-92243, Austin, Texas-78709-2243
   U.S.A., 001-512-301-2867
   E-Mail : basavacenter @ yahoo.com
3. **Universal Centre of Basava Philosophy**
   3456, Valley Vista Drive
   San Jose, CA 95148., 001-408-2708120

ವಿದೇಶ ಪ್ರವಾಸ
ಕಾಣಿಕೆಗಾಗಿ ಆತ್ಮೀಯ ಬಿನ್ನಹ

ಮೊದಲನೆಯ ಇಂಗ್ಲೇಡ್ ಪ್ರವಾಸವನ್ನು 1976 ರಲ್ಲಿ ಕೈಗೊಂಡೆನು. ಓರಿಯಂಟಲ್ ಮತ್ತು ಆಫ್ರಿಕನ್ ಸ್ಟಡೀಸ್ ವಿಭಾಗದ ಬ್ರಿಟಿಷ್ ವಿಶ್ವವಿದ್ಯಾಲಯಗಳ ಪ್ರವಾಚಕರ ಸಮ್ಮೇಳನದಲ್ಲಿ ಭಾಗವಹಿಸಿದ ನನ್ನ ಉಪನ್ಯಾಸದಿಂದ ಬಹಳ ಪ್ರಭಾವಿತರೂ ಮತ್ತು ಕುತೂಹಲಿತರೂ ಆದ ಲಂಡನ್ ವಿಶ್ವವಿದ್ಯಾನಿಲಯದ ಡಾ|| ಪ್ರೊ. ಪಿಯಾಟೋಗಾರ್ಸ್ಕಿ ಎಂಬ ರಷಿಯನ್ ವಿದ್ವಾಂಸರು ಮತ್ತು ಸಮ್ಮೇಳನದಲ್ಲಿ ಭಾಗಿಗಳಾಗಿದ್ದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಡಾ|| ರಿಚರ್ಡ್ ಗಾಂಬ್ರಿಚ್ ನಾನು ಒಂದು ಪ್ರೌಢ ಪ್ರಬಂಧ ಬರೆಯಬೇಕೆಂದು ಅದಕ್ಕೆ ಬೇಕಾದ ಎಲ್ಲ ನೆರವು ನೀಡುವುದಾಗಿ ಹೇಳಿದರು. ಆಗ ನಾನು ಲಿಂಗಾಯತ ಸಮಾಜದ ಕೆಲವು ಪ್ರಮುಖರಿಗೆ ಸಲಹೆ ಕೇಳಿ ಪತ್ರ ಬರೆದೆ. ನಮ್ಮ ದೇಶದಲ್ಲೇ ಧರ್ಮಪ್ರಚಾರ ಮಾಡುವುದು ಅತ್ಯಗತ್ಯವಾಗಿದೆ. ದೀಪದ ಕೆಳಗೆ ಕತ್ತಲೆ ಎಂಬಂತೆ ಇಲ್ಲಿಯೇ ಲಿಂಗಾಯತರಲ್ಲಿ ಲಿಂಗಾಯತೇತರರಲ್ಲಿ ಈ ಧರ್ಮದ ಬಗ್ಗೆ ಅಜ್ಞಾನ ತುಂಬಿದೆ. ನೀವು ಅಲ್ಲಿ ಉಳಿಯುವುದು, ಅಧ್ಯಯನ ಮಾಡುವುದು ಬೇಡ ಎಂದು ಅನೇಕರು ಸಲಹೆ ನೀಡಿದರು.

ನಂತರ 1981 ರಲ್ಲಿ ಯು.ಎಸ್.ಎಯ ವೀರಶೈವ ಸಮಾಜ ಆಫ್ ನಾರ್ತ್ ಅಮೇರಿಕಾ ಸಂಸ್ಥೆಯ ಅಧ್ಯಕ್ಷರಾದ ಡಾ|| ಗಂಗಾಧರ ಕೋರಿ ಆಹ್ವಾನಿಸಿದರು. ವಾಷಿಂಗ್‌ಟನ್‌ದಲ್ಲಿ ನಡೆದ ಸಮ್ಮೇಳನದಲ್ಲಿ ಆ ವರ್ಷದ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದಲ್ಲದೆ ಶ್ರೀ ಗಂಗಾಧರ್ ಕೋರಿ ಮತ್ತಿತರರು ಬಹಳ ಉತ್ತಮ ಮತ್ತು ವ್ಯಾಪಕವಾದ ಪ್ರವಾಸವನ್ನು ಏರ್ಪಡಿಸಿದರು. ಇದರಿಂದ ಹಲವಾರು ರಾಜ್ಯಗಳನ್ನು ಸಂದರ್ಶಿಸಿ ಉಪನ್ಯಾಸ, ದೀಕ್ಷೆ, ಟಿ. ವಿ. ಸಂದರ್ಶನ ಅನೇಕ ಕಾಲೇಜುಗಳಲ್ಲಿ ಉಪನ್ಯಾಸ, ಥಿಯಾಸಫಿ ಸೊಸೈಟಿ, ಹಿಂದು ದೇವಾಲಯಗಳಲ್ಲಿ ಪ್ರವಚನ ಮಾಡಲು ಸಾಧ್ಯವಾಯಿತು. ಕೆನಾಡಾದ ಟೊರಾಂಟೋದಲ್ಲಿ ಸಹ ಉಪನ್ಯಾಸ ಮತ್ತು ಟಿ. ವಿ. ಸಂದರ್ಶನ ವಿಶೇಷವಾಗಿ ಆಯಿತು.

ಆಗಲೂ ಅನೇಕರು ಅಲ್ಲಿ ಕೇಂದ್ರಗಳನ್ನು ತೆರೆಯಿರಿ ಎಂದರು. ಇಲ್ಲಿ ಇನ್ನು ನಿರ್ವಹಿಸಬೇಕಾದ ಹಲವು ಜವಾಬ್ದಾರಿಗಳು ಇದ್ದುದರಿಂದ ಅಲ್ಲಿ ನೆಲೆಸಲು ಇಷ್ಟ ಪಡದೆ ವ್ಯಾಪಕವಾಗಿ ಧರ್ಮಪ್ರಚಾರ ಮಾಡಿ ಬಂದೆವು.

ಯೂನಿವರ್ಸಲ್ ಸೆಂಟರ್ ಆಫ್ ಬಸವಾ ಫಿಲಾಸಫಿ

ಸುಮಾರು ಮೂರು ವರ್ಷಗಳಿಂದಲೂ ಶ್ರೀ ಡಾ. ವೀರಪ್ಪನವರು, ಇಂಗ್ಲೇಡಿನ ಡಾ॥ ಮಹಾದೇವಯ್ಯನವರು ನಮ್ಮನ್ನು ಆಹ್ವಾನಿಸುತ್ತಿದ್ದುದೇ ಅಲ್ಲದೆ ಒತ್ತಾಯಿಸುತ್ತಲೇ ಇದ್ದರು. ಶರಣೆ. ರೂಪಕಾ ಮಹಾಲಿಂಗಯ್ಯನವರು ಈಗ ಕಾರ್ಯಕ್ರಮದ ಸಂಯೋಜನೆ ಮಾಡಿಯೇ ಬಿಟ್ಟಿದ್ದಾರೆ. ಮಾತ್ರವಲ್ಲ ನಾವು ಆರಂಭಿಸಿ ಕೊಟ್ಟು ಬಂದರೆ ಅಲ್ಲಿ ಆ ಕೇಂದ್ರವನ್ನು ಮುನ್ನಡೆಸುವುದಾಗಿ ನಿಶ್ಚಯಿಸಿದ್ದಾರೆ. ಹೀಗಾಗಿ ಪ್ರವಾಸ ಕೈಗೊಳ್ಳುವ ನಿರ್ಧಾರ ಮಾಡಿಯಾಗಿದೆ. ಮೇ ತಿಂಗಳಿನಲ್ಲಿ ನಡೆಯಲಿರುವ ಕಲ್ಯಾಣಪರ್ವದ ಕಾರ್ಯಕ್ರಮ ಪೂರೈಸಿ ಮೇ ಮೂರನೆಯ ವಾರದಲ್ಲಿ ಹೋಗುವ ರೀತಿ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ಪ್ರವಚನ ಪ್ರವಾಸವೇ ಅಲ್ಲದೆ ಕೆಲವೊಂದು ವಿದ್ವತ್ ಪೂರ್ಣ ಉಪನ್ಯಾಸಗಳನ್ನು ಮಾಡಿಸಲು ಶರಣೆ. ರೂಪಕ ಸಿದ್ಧತೆ ನಡೆಸಿದ್ದಾರೆ. ಅಲ್ಲಿ ಒಂದು ಟ್ರಸ್ಟ್ ಅನ್ನು ರಚಿಸಿ ಅದರ ವತಿಯಿಂದ ಸಾಹಿತ್ಯ ಭಾಷಾಂತರ ಮತ್ತು ಪ್ರಕಟಣಾ ಕಾರ್ಯವನ್ನು ನಾವು ಅಂದರೆ ನಾನು, ರೂಪಕ, ಡಾ॥ ವೀರಪ್ಪ ಇನ್ನೂ ಕೆಲವರು ಸೇರಿ, ಆಲೋಚಿಸಿದ್ದೇವೆ. ಈ ಸಲ ನಾನು, ನನ್ನೊಡನೆ ಮೂವರು ಹೋಗಲಿಕ್ಕೆ ರೂಪಕಾ ಅವರು ವ್ಯವಸ್ಥೆ ಮಾಡಿಸಿದ್ದಾರೆ. ಇಬ್ಬರು ಹೋಗಿ ಬರುವ ವೆಚ್ಚದ ವ್ಯವಸ್ಥೆಯನ್ನು ಅವರವರೇ ಮಾಡಿಕೊಳ್ಳುತ್ತಾರೆ. ಈಗ ನಾನು ಮತ್ತು ಓರ್ವ ಸಹಾಯಕಿಯ ವಿಮಾನದ ವೆಚ್ಚದ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ಶರಣ ಬಂಧುಗಳ ನೆರವನ್ನು ಕೋರದೆ ಬೇರೆ ಮಾರ್ಗವಿಲ್ಲ. ಒಂದಾದ ಮೇಲೆ ಒಂದರಂತೆ ಬಹು ದೊಡ್ಡ ಜವಾಬ್ದಾರಿಗಳನ್ನು ನಮ್ಮ ಆರ್ಥಿಕ ಶಕ್ತಿಗೆ ಮೀರಿ ಕೈಗೊಳ್ಳಾಗುತ್ತಿರುವುದರಿಂದ ಅನಿವಾರ್ಯವಾಗಿ ನಮ್ಮ ಸುಖದುಃಖಗಳಲ್ಲಿ ಪಾಲುಗಾರರಾಗುತ್ತಿರುವ ಶರಣ ಬಂಧುಗಳ ನೆರವು ಕೋರಬೇಕಾಗುತ್ತಿದೆ.

ಬಡದೇಶವಾದ ಭಾರತದಿಂದ ಶ್ರೀಮಂತರ ನಾಡಿಗೆ ಹೋಗಲು ನಾವು ಹಣ ಕೊಡಬೇಕೆ ? ನೀವು ಕೇಳಬೇಕೇ ಎಂಬ ಸಂದೇಹ ಭಾವ ಕೆಲವರಲ್ಲಿ ಮೂಡೀತು. ನಮ್ಮ ಮತ್ತು ಕಾರ್ಯಕ್ರಮ ಸಂಯೋಜಿಸಿದವರ ಸಂಕಲ್ಪ ಅಲ್ಲಿನ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುವ 63 ಅಡಿ ಎತ್ತರದ ಬಸವ ಪುತ್ಥಳಿಗೆ ಬಳಸಬೇಕು ಎಂಬುದೇ ಆಗಿದೆ. ಆದರೆ ಆರಂಭದ ದಿನಗಳಲ್ಲಿ ನಮ್ಮ ಧ್ಯೇಯೋದ್ದೇಶ ಮನವರಿಕೆ ಮಾಡುವ ತನಕ ನಮ್ಮ ಖರ್ಚಿನಿಂದಲೇ ವಿಮಾನಯಾನದ ವೆಚ್ಚವನ್ನು ಭರಿಸಬೇಕು ತಾನೆ ? ಪ್ರಯಾಣದ ಖರ್ಚಿನ ಜೊತೆಗೆ ಕೆಲವೊಂದು ಸಾಹಿತ್ಯವನ್ನು ನಾವು ಇಂಗ್ಲೀಷ್‌ನಲ್ಲಿ ಸಿದ್ಧಪಡಿಸಿಕೊಂಡು ಹೋಗಬೇಕಾಗಿದೆ. ಇದಕ್ಕೆ ಉಳಿದಿರುವುದು ಮಾರ್ಚ್, ಏಪ್ರಿಲ್ ಎರಡು ತಿಂಗಳು ಮಾತ್ರ. ಈಗಾಗಲೇ ಶರಣ ಮೇಳಕ್ಕೆ ಬಂದಾಗ ಕೆಲವು ಶರಣರು ಕೊಟ್ಟಿದ್ದಾರೆ. ಓರ್ವ ಗುಪ್ತದಾನಿಯು 10,000 ರೂಗಳ ಡಿ.ಡಿ. ಕಳಿಸಿದ್ದಾರೆ. ಆದ್ದರಿಂದ ಅಂಚೆಯಲ್ಲಿ ಕಳಿಸುವವರು ಡಿ.ಡಿ. ತೆಗೆಸುವಾಗ 1. ವಿಶ್ವಕಲ್ಯಾಣ ಮಿಷನ್ ಅಥವಾ 2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಅಥವಾ 3. ಜಗದ್ಗುರು ಮಾತೆ ಮಹಾದೇವಿ ಎಂದು ಬೆಂಗಳೂರಿಗೆ ಯಾವುದೇ ಬ್ಯಾಂಕಿನ ಡಿ.ಡಿ ತೆಗೆಸಿ ಬಸವ ಮಂಟಪದ ವಿಳಾಸಕ್ಕೆ ಕಳಿಸಬಹುದು, ಪ್ರವಚನಗಳಲ್ಲಿ ಕೊಡಬಹುದು, ಕಲ್ಯಾಣ ಪರ್ವಕ್ಕೆ ಬರುವಾಗ ತಂದುಕೊಡಬಹುದು. ಟಿಕೆಟ್ ತೆಗೆಸ ಬೇಕಾಗಿರುವುದರಿಂದ ಏಪ್ರಿಲ್ 15 ರ ಒಳಗೆ ಹಣವು ನಮ್ಮ ಕೈಸೇರಿದರೆ ಒಳ್ಳಿತಾಗುವುದು. ಸಂಪೂರ್ಣ ಸಹಕಾರ ನೀಡಿ ಧರ್ಮಪ್ರಚಾರಕ್ಕೆ ನೆರವಾಗುತ್ತೀರೆಂದು ನಂಬುತ್ತೇನೆ.

- ಮಾತಾಜಿ

ಮಾತಾ ನೀಲಾಂಬಿಕಾ ಸಮುದಾಯ ಭವನ ಕಾರ್ಯಕ್ರಮಗಳಿಗೆ ದೊರೆಯುತ್ತದೆ

ಬೆಂಗಳೂರಿನ ರಾಜಾಜಿನಗರದ ಎರಡನೆಯ ಬ್ಲಾಕಿನ 20ನೆಯ ಮುಖ್ಯ ರಸ್ತೆಯಲ್ಲಿರುವ (ಸಿಟಿ ಆಸ್ಪತ್ರೆ ಪಕ್ಕ) ಬಸವ ಮಂಟಪದಲ್ಲಿ ಮೊದಲ ಅಂತಸ್ತಿನಲ್ಲಿ ಸಿದ್ಧಲಿಂಗೇಶ್ವರ ಪ್ರಸಾದ ನಿಲಯ ಮತ್ತು ಎರಡನೆಯ ಅಂತಸ್ತಿನಲ್ಲಿ ಮಾತಾ ನೀಲಾಂಬಿಕಾ ಸಮುದಾಯ ಭವನ ಎಂಬ ಸಭಾಮಂಟಪವು ಸಿದ್ಧವಾಗದ್ದು ಉಪನ್ಯಾಸ ಕಾರ್ಯಕ್ರಮ, ಪುಸ್ತಕ ಬಿಡುಗಡೆ, ನಾಮಕರಣ, ಲಿಂಗೈಕ್ಯ ಗಣಾರಾಧನೆ, ಲಿಂಗೈಕ್ಯರ ಸಂಸ್ಮರಣೆ, ಜನ್ಮದಿನೋತ್ಸವ, ವಿವಾಹ ವಾರ್ಷಿಕೋತ್ಸವ, ವಿವಾಹ ಮುಂತಾದ ಕಾರ್ಯಕ್ಕೆ ದೊರೆಯುತ್ತದೆ. ಕೆಲವೊಂದು ನಿಬಂಧನೆಗೆ ಒಳಪಟ್ಟು ಪಾಕ ಗೃಹ, ಪಾತ್ರೆ ಸಾಮಾನು, ಕುರ್ಚಿ, ಟೇಬಲ್ ಮುಂತಾದ ಸಲಕರಣೆಗಳು ಮಾತ್ರವಲ್ಲ ಅಡಿಗೆ ಮಾಡುವ, ನೀಡುವ ಸಿಬ್ಬಂದಿ ಸಹ ದೊರೆಯುತ್ತಾರೆ. ಮೈಕ್ ಸೆಟ್, ಸೀರಿಯಲ್ ಸೆಟ್, ಮಾತ್ರವಲ್ಲದೆ ಓಲಗ ನಾದಸ್ವರ ಮುಂತಾದ ಮಂಗಳ ವಾದ್ಯದವರು ಸಹ ಲಭ್ಯವಿರುತ್ತಾರೆ.

ಜವಾಬ್ದಾರಿ ಹೊತ್ತು ಓಡಾಡುವ ಜನರು ಇಲ್ಲದೆ ಇರುವವರು ನಿಗದಿ ಪಡಿಸಿದ ಹಣವನ್ನು ಕೊಟ್ಟರೆ ಸಾಕು ಸೇವಾವ್ರತಿಗಳಾದ ಗಣಾಚಾರ ದಳದವರು ಎಲ್ಲ ವ್ಯವಸ್ಥೆ ಮಾಡಿಕೊಡುವರು.

ಆರ್ಥಿಕವಾಗಿ ಅನಾನುಕೂಲತೆ ಇರುವವರು, ಸರಳವಾದ ಆದರ್ಶ ವಿವಾಹ ಮಾಡಿಕೊಳ್ಳಬೇಕು ಎನ್ನುವವರಿಗೆ ಅವರ ಅಗತ್ಯಕ್ಕೆ ಸಂಪನ್ಮೂಲಕ್ಕೆ ಅನುಸಾರವಾಗಿ ವಿವಾಹ ಮುಂತಾದ ಕಾರ್ಯಕ್ರಮ ನೆರವೇರಿಸಿಕೊಡಲಾಗುವುದು.

ಧಾರ್ಮಿಕ ವಿಧಿವಿಧಾನ (ಪೌರೋಹಿತ್ಯ) ನಡೆಸಿಕೊಡುವವರು ಸಹ ಲಭ್ಯವಿರುತ್ತಾರೆ. ಮಂತ್ರೋಪದೇಶ, ದೀಕ್ಷೆ ಮುಂತಾದ ಕ್ರಿಯೆಗಳನ್ನು ನಡೆಸಿಕೊಡುವ ಗುರುಗಳೂ ಲಭ್ಯವಿರುತ್ತಾರೆ.

ಭಾವ ಸಂಗಮ ವಧುವರ ಹೊಂದಾಣಿಕೆ ಕೇಂದ್ರ

ವಧುವರರ ಆಯ್ಕೆಗೆ ನೆರವಾಗುವ ಭಾವ ಸಂಗಮ ಎಂಬ ಸಂಸ್ಥೆಯು ವಿಶ್ವಕಲ್ಯಾಣ ಮಿಷನ್ ಆಶ್ರಯದಲ್ಲಿ ನಡೆಯುತ್ತಿದ್ದು ಮದುವೆಯಾಗುವ ವಧು-ವರರು, ಅವರ ಪಾಲಕರು ಸಂಪರ್ಕಿಸಿ ಹೆಸರುಗಳನ್ನು ನೋಂದಾಯಿಸಬಹುದು. ವಧುವರರನ್ನು ಮುಖಾಮುಖಿ ಭೇಟಿ ಮಾಡಿಸುವ ಸಮಾವೇಶಗಳು ಒಂದು ವರ್ಷದಲ್ಲಿ ಆರು ಸಲ ನಡೆಯುತ್ತದೆ. ಆಗ ಪಾಲಕರು ತಮ್ಮ ಮಕ್ಕಳ ಸಹಿತವಾಗಿ ಬಂದು ಭಾಗಿಗಳಾಗಲು ಸುವರ್ಣಾವಕಾಶ ಲಭ್ಯವಾಗುತ್ತದೆ.

ಎಲ್ಲ ರೀತಿಯ ವಿವರಗಳನ್ನು ಪಡೆಯಲು, ಸಭಾಗೃಹವನ್ನು ಕಾಯ್ದಿರಿಸಲು ಕೆಳಗೆ ನೀಡಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶ್ವಕಲ್ಯಾಣ ಮಿಷನ್ (ರಿ) ಟ್ರಸ್ಟ್
ಬಸವ ಮಂಟಪ
2035, 20 ನೆಯ ಮೇನ್, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 560010
ದೂರವಾಣಿ: 3325335/3322790 ಫ್ಯಾಕ್ಸ್: 3919736

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **''ಕಲ್ಯಾಣ ನಗರ''** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **''ಬಸವ ಗಂಗೋತ್ರಿ''**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. ''ಬಸವ ಗಂಗೋತ್ರಿ ನಗರ'' ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸ-ಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

866666




ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಿಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಎರಡನೆಯ

ಕಲ್ಯಾಣ ಪರ್ವ

ಏಪ್ರಿಲ್ 30, ಮೇ 1 ಮತ್ತು 2 ರಂದು



ಗಣ ಧ್ವಜ

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಮೇ 1, 2 ಮತ್ತು 3 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 2 ರಂದು ಬೆಳಿಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ(ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ / ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 0848-651921/652856




ಗುಲ್ಬರ್ಗಾದ ಮೊಬಾ ಡ್ಲೇಟ್ ಆವರಣದಲ್ಲಿ ನಡೆದ
'ಗಣಮೇಳ' ಸಂದರ್ಭದಲ್ಲಿ ಪೂಜ್ಯ ಜಗದ್ಗುರು
ಮಾತೆ ಗಂಗಾದೇವಿಯವರು ಇಷ್ಟಲಿಂಗ ಪೂಜೆಯ



ಧಾರವಾಡದಲ್ಲಿ ರಾಷ್ಟ್ರೀಯ ಬಸವ ದಳದ ಶರಣ ಶರಣೆಯರು 'ಗಣಮೇಳ' ಸಂದರ್ಭದಲ್ಲಿ ನಡೆಸಿದ ಭವ್ಯ ಪಥ ಸಂಚಲನ

ಕಲ್ಯಾಣ ಕಿರಣ CPMG/KA/BGW-50 ಮಾರ್ಚ್ - 2003
R.NO. 19988/70 WPP (W) - 17



ಕಲ್ಯಾಣ ಕ್ರಾಂತಿ - ಅಂತರಜಾತಿ ವಿವಾಹದಲ್ಲಿ ಭಾಗಿಗಳಾದ ಶರಣರಿಗೆ ಎಳೆಹೂಟೆ ಶಿಕ್ಷೆ